ಕಲ್ಯಾಣ ಕಿರಣ

ಡಿಸೆಂಬರ್-2008 ಬೆಲೆ-10.00



ಶರಣೆ. ಹೇಮರೆಡ್ಡಿ ಮಲ್ಲಮ್ಮನವರು



|| ಓಂ ಶ್ರೀ ಗುರು ಬಸವ ಲಿಂಗಾಯ ನಮಃ ||
866666

ಸಂಪುಟ-38 ಬಸವ ಶಕೆ-875 ಆಜೀವ ಸದಸ್ಯತ್ವ 1000 ರೂ.
ಸಂಚಿಕೆ-11 ಡಿಸೆಂಬರ್- 2008 ವಾರ್ಷಿಕ ಚಂದಾ 100/- ರೂ.

ಬಸವಾತ್ಮಜೆಯ ಕರೆ

ಬಾ ಬಾ ಬಾ ಎಲೆ ಶರಣ ನೀನು......
ಶರಣ ಮೇಳಕೆ ಬಂದು ಪಾವನನಾಗು || ಪ ||

ವಿಶ್ವಗುರು ಬಸವಣ್ಣ ಕೊಟ್ಟಿರುವ ಧರ್ಮದ
ಸೋದರತೆ ಬಿಂಬಿಸಲು ಬಾ ಧರ್ಮ ಬಂಧು || ಅ.ಪ.||

ಅಂದು ಆದಿಯಲಿ ಧರ್ಮಗುರು ಬಸವಣ್ಣ
ಚಂದಾದ ಮಹಾಮನೆಯ ಕಟ್ಟಿ ಕರೆದರು ತಾವು
ಅನುಭವ ಮಂಟಪದ ಆನಂದ ತೊಟ್ಟಿಲಲಿ
ತತ್ವ ಜೋಗುಳ ಹಾಡಿ ಶರಣ ಶಿಶುಗಳ ತೂಗಿ || 1 ||

ನಾಡ ಬಲ್ಲಿದರೆಲ್ಲ ಕೂಡಿದರು ಹುರುಪಿನಲಿ
ಸೂಡ ಕಟ್ಟಿದರು ಶಿವ ನುಡಿಯ
ದೇವ ಮಹಿಮೆಯ ಸಾರಿ ಮನುಜ ಘನತೆಯ ತೋರಿ
ವಚನ ಧರ್ಮದ ಸಿರಿಯು ಸಂಭ್ರಮಿಸಿತಲ್ಲಿ || 2 ||

ಸಮತೆಯ ಸಾರಲಿಕೆ ಆಯಿತೊಂದು ಕ್ರಾಂತಿ
ಧರ್ಮಪಿತ ಬಸವಗುರು ಗಡಿಪಾರು ಪಡೆದಿಹರು
ಹರಳಯ್ಯ ಮಧುವಯ್ಯ ಪ್ರಾಣವನು ತೆತ್ತಿಹರು
ಮಾಚಯ್ಯ ಚೆನ್ನಣ್ಣ ನಾಗಲೆಯು ಕಾದಿಹರು || 3 ||

ಶರಣರ ಕರುಳಿನ ಕರೆಯು ತಾ ಕೇಳಿಸದೆ?
ನಿನ್ನ ಋಣ ತೀರಿಸುವ ಛಲವು ತಾ ಮೊಳೆಯದೆ?
ವಚನ ವಾಙ್ಮಯವನ್ನು ನಮಗಾಗಿ ರಕ್ಷಿಸಲು
ಬಲಿದಾನ ಗೈದವರ ಮಹಾತ್ಯಾಗ ಅರಿಯೆಯಾ? || 4 ||

ಕೂಡಲ ಸಂಗಮವು ಧರ್ಮಕ್ಷೇತ್ರವು ಎಂದು
ಶರಣ ವ್ರತ ಸ್ವೀಕರಿಸಿ ಶರಣ ಮೇಳಕೆ ಬಂದು
ಗಣಲಿಂಗ ದರ್ಶನವ ಪಡೆದು ಪುಳಕಿತನಾಗು
ಸಮುದಾಯ ಪ್ರಾರ್ಥನೆಯ ಮಾಡಿ ಧನ್ಯನಾಗು || 5 ||

ದೇವನೊಬ್ಬನೆ ತಂದೆ ಮನುಜರೆಲ್ಲರು ಒಂದೆ
ಎಂಬ ತತ್ತ್ವವ ತಿಳಿದು ವಿಶ್ವಧರ್ಮಿಯೆ ಆಗು
ಬಸವ ಕಿರಣವೆ ಆಗಿ ತತ್ವವನು ಪಸರಿಸು
ಸಚ್ಚಿದಾನಂದ ಪ್ರಿಯೆ ಮಾತೆಯಾ ಕರೆಯಿದು || 6 ||

-ಮಾತಾಜಿ

ಭಕ್ತನು ಭಕ್ತನ ಮನೆಗೆ ಬಂದಡೆ, ಭೃತ್ಯಾಚಾರವ ಮಾಡಬೇಕು;
ಕರ್ತನಾಗಿ ಕಾಲ ತೊಳೆಯಿಸಿಕೊಂಡಡೆ, ಹಿಂದೆ ಮಾಡಿದ ಭಕ್ತಿಗೆ ಹಾನಿ!
ಲಕ್ಷಗಾವುದ ದಾರಿಯ ಹೋಗಿ, ಭಕ್ತನು ಭಕ್ತನ ಕಾಂಬುದು ಸದಾಚಾರ.
ಅಲ್ಲಿ ಕೂಡಿ ದಾಸೋಹವ ಮಾಡಿದೊಡೆ
ಕೂಡಿಕೊಂಬನು ನಮ್ಮ ಲಿಂಗದೇವನು.

★ ಕಲ್ಯಾಣ ಕಿರಣ ★

ಕಿರಣಗನ್ನಡಿ

ಲೇಖನಗಳು	ಲೇಖಕರು	ಪುಟ
1. ಬಸವಾತ್ಮಜೆಯ ಕರೆ	ಮಾತಾಜಿ	-1
2. 22ನೆಯ ಶರಣ ಮೇಳ		-3
3. ಸಂಪಾದಕೀಯ :		
1. ಧರ್ಮದ ಹೆಸರಿನಲ್ಲಿ ಭಯೋತ್ಪಾದನೆ		-05
2. ಲಿಂಗಾಯತ ಧರ್ಮ ಮತ್ತು ಆಹಾರ ಪದ್ಧತಿ		-06
3. ಹೊಟ್ಟೆಗೆ ಹಿಟ್ಟಿಲ್ಲದಿದ್ದರೂ ಜುಟ್ಟಿಗೆ ಮಲ್ಲಿಗೆ ಹೂವು		-11
4. ಜಗದ್ಗುರು ಮಾತೆ ಮಹಾದೇವಿ ಅವರಲ್ಲಿ ಬಿನ್ನಹ	ಸಿ.ಮುತ್ತರಾಯಪ್ಪ	-12
5. ಅಕ್ಕಮಹಾದೇವಿ ವಚನಾಂಕಿತ ಬದಲಾವಣೆ	ಸಚ್ಚಿದಾನಂದ	-13
6. ಬಸವ ವಚನಾಮೃತ ಭಾಗ -7	ಮಾತಾಜಿ	-15
7. ವೀರಗಲ್ಲು ಮತ್ತು ಕೇಸರಿ ಸಲಾಂ (ಲೇಖನ)	ಚಂಪಾ	-29
8. ಧರ್ಮಪಿತರ ಕರೆಯೋಲೆ	ಬಸವಾತ್ಮಜೆ	-34
9. ಸಮಸ್ಯೆ? - ಸಮಾಧಾನ!	ಮಾತಾಜಿ	-37
10. ವಚನ ದುಂದುಭಿ	ಸಚ್ಚಿದಾನಂದ	-40

ಮುಖ ಪುಟ : ಶರಣೆ . ಹೇಮರೆಡ್ಡಿ ಮಲ್ಲಮ್ಮ

2ನೇ ಪುಟ : ಕುರುಗೋಡು ನೀಲಮ್ಮ ಶರಣರು

ಜನವರಿ ತಿಂಗಳ ಹಬ್ಬ-ಉತ್ಸವಗಳು

ಶರಣ ಮೇಳ	ಜನವರಿ 11 ರಿಂದ 15
ಲಿಂಗಾಯತ ಧರ್ಮ ಸಂಸ್ಥಾಪನ ದಿನ	ಜನವರಿ 14
ಸಿದ್ಧರಾಮೇಶ್ವರ ಜಯಂತಿ	ಜನವರಿ 14
ಗಣರಾಜ್ಯೋತ್ಸವ	ಜನವರಿ 26

ಶರಣ ವ್ರತ ಸ್ವೀಕಾರದ ವಿವರ

ಗುರು ಸಾರಾಯ ಸಂಪದ್ ವ್ರತ	40 ದಿವಸ	ಡಿಸೆಂಬರ್ 2
ಲಿಂಗ ಸಾರಾಯ ಸಂಪದ್ ವ್ರತ	30 ದಿವಸ	ಡಿಸೆಂಬರ್ 12
ಜಂಗಮ ಸಾರಾಯ ಸಂಪದ್ ವ್ರತ	20 ದಿವಸ	ಡಿಸೆಂಬರ್ 22
ಪ್ರಸಾದ ಸಾರಾಯ ಸಂಪದ್ ವ್ರತ	10 ದಿವಸ	ಜನವರಿ 1

KALYANA KIRANA-Reg No.19988/70. Monthly Magazine Edited And Published by Pujya Mate Kasturidevi on behalf of Vishwakalyana Mission Charitable Trust, Basava Mantapa, 2035, 20th Main, 2nd Block, Rajajinagar, Bangalore-10. Ph: 9620058492, 9620057562

ತ್ವರಿತ ವ್ಯವಹಾರಕ್ಕೆ ಬಸವ ಮಂಟಪದ ವಿಳಾಸಕ್ಕೆ ಬರೆಯಿರಿ :
ದೂರವಾಣಿ : 22923736/23131476

ಬಸವ ಮಂಟಪ, 2035
20ನೆಯ ಮುಖ್ಯ ರಸ್ತೆ, ಎರಡನೆಯ ಬ್ಲಾಕು
ರಾಜಾಜಿನಗರ, ಬೆಂಗಳೂರು-560010



॥ ಓಂ ಶ್ರೀ ಗುರು ಬಸವ ಲಿಂಗಾಯ ನಮಃ ॥

866666

ಕೂಡಲ ಸಂಗಮ ಸುಕ್ಷೇತ್ರದಲ್ಲಿ ಲಿಂಗಾಯತ ಧರ್ಮ ಸಂಸ್ಥಾಪನಾ ದಿನದ ಅಂಗವಾಗಿ ಇಪ್ಪತ್ತೆರಡನೆಯ

ಶರಣ ಮೇಳ

2009ರ ಜನವರಿ 11, 12, 13, 14 ಮತ್ತು 15 ರಂದು

ಶರಣ ಬಂಧುಗಳೇ,

ಮಹಾಮಾನವತಾವಾದಿ, ಲಿಂಗಾಯತ ಧರ್ಮ ಸಂಸ್ಥಾಪಕ, ಧರ್ಮಗುರು ಬಸವಣ್ಣನವರ ಕಾರಣಿಕತ್ವ ಮತ್ತು ಸಂದೇಶಗಳಲ್ಲಿ ನಂಬಿಕೆ ಇಟ್ಟು ನಡೆಯುವ ಬಸವ ಭಕ್ತರು, ಬಸವ ಧರ್ಮೀಯರಾದ ಲಿಂಗಾಯತರು ಮತ್ತು ಬಸವ ತತ್ವಾಭಿಮಾನಿಗಳೆಲ್ಲರೂ ವರ್ಷಕ್ಕೆ ಒಮ್ಮೆಯಾದರೂ ಒಂದು ಸ್ಥಳದಲ್ಲಿ ಸಮಾವೇಶವಾಗುವುದು ಅತ್ಯಂತ ಅವಶ್ಯಕ. ಇದು ಸಮಾನತ್ವ ಮತ್ತು ಸಹೋದರತ್ವ ಬೆಳೆಸಲು ಸಹಕಾರಿಯಾಗುವುದು ಎಂಬ ಉದ್ದೇಶದಿಂದ ಆದಿ ಶರಣರ ಸಂಕಲ್ಪದಂತೆ ಶರಣ ಮೇಳವನ್ನು ನಡೆಸಲಾಗುತ್ತಿದೆ. ಧರ್ಮಕರ್ತ ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ, ಐಕ್ಯಕ್ಷೇತ್ರ ಕೂಡಲ ಸಂಗಮವನ್ನು ಲಿಂಗಾಯತ (ಬಸವ) ಧರ್ಮೀಯರ ಧರ್ಮಕ್ಷೇತ್ರ ಎಂದು ಗುರುತಿಸಿಕೊಂಡು 1988ರ ಜನವರಿ 14, 15 ಮತ್ತು 16 ರಂದು ಪ್ರಥಮ ಚಾರಿತ್ರಿಕ ಶರಣ ಮೇಳವನ್ನು ನಡೆಸಲಾಯಿತು. ಮೊಟ್ಟ ಮೊದಲನೆಯ ಚಾರಿತ್ರಿಕ ಶರಣ ಮೇಳವು ಎರಡೂವರೆ ಲಕ್ಷಕ್ಕೂ ಮಿಕ್ಕಿದ ಜನ ಸಮೂಹವನ್ನು ಆಕರ್ಷಿಸಿತು.

ಇಂತಹ ಶರಣ ಮೇಳವು ಪ್ರತಿವರ್ಷವೂ ಬಸವ ಧರ್ಮ ಸಂಸ್ಥಾಪನಾ ದಿನದ ಅಂಗವಾಗಿ ನಡೆಯುತ್ತಲಿದ್ದು ಇಪ್ಪತ್ತೆರಡನೆಯ ಶರಣ ಮೇಳವು 2009ರ ಜನವರಿ 11, 12, 13, 14ಮತ್ತು 15ರಂದು ನಡೆಯುವುದು. ಸಾಮೂಹಿಕ ಪ್ರಾರ್ಥನೆ, ಸಾಮೂಹಿಕ ಲಿಂಗ ಪೂಜೆ, ಗಣಲಿಂಗ ದರ್ಶನ ಶರಣ ಮೇಳದ ಪ್ರಮುಖ ಧಾರ್ಮಿಕ ವಿಧಿಗಳು. ಜನವರಿ 14ರಂದು ಬೆಳಿಗ್ಗೆ 10 ರಿಂದ ಧ್ವಜಾರೋಹಣ, ಪಥ ಸಂಚಲನ, ಸಮುದಾಯ ಪ್ರಾರ್ಥನೆ ಇರುತ್ತದೆ. [ಐದೂ ದಿನ ಭಾಗವಹಿಸಲು ಆಗದೆ ಇದ್ದವರು ಸಮುದಾಯ ಪ್ರಾರ್ಥನೆಯಲ್ಲಿ ಭಾಗವಹಿಸುವುದು ಕಡ್ಡಾಯ ವಿಧಿಯಾಗಿರುತ್ತದೆ.] ಸಂಜೆ 7 ಗಂಟೆಗೆ ಸಾಮೂಹಿಕ ಇಷ್ಟಲಿಂಗಾರ್ಚನೆ ಇರುತ್ತದೆ. ಇವುಗಳಲ್ಲಿ ಶರಣ ವ್ರತಿಗಳು ಭಾಗವಹಿಸುವುದು ಕಡ್ಡಾಯವಾಗಿರುತ್ತದೆ. 40, 30, 20 ಮತ್ತು 10 ದಿವಸಗಳ 'ಶರಣ ವ್ರತ'ವನ್ನು ಅವರವರ ಸಮಯಾವಕಾಶಕ್ಕೆ ತಕ್ಕಂತೆ ಸ್ವೀಕರಿಸಿ, ಆಚರಿಸಿ ಯಾರು ಬೇಕಾದರೂ ಶರಣ ಮೇಳದಲ್ಲಿ ಭಾಗಿಗಳಾಗ ಬಹುದು. ಚಿಂತನ ಗೋಷ್ಠಿ, ಉಪನ್ಯಾಸ, ಧಾರ್ಮಿಕ ರಸಪ್ರಶ್ನೆ ಮುಂತಾದ ಕಾರ್ಯಕ್ರಮಗಳಿಂದ ಕೂಡಿದ ಶರಣ ಮೇಳವು ಉತ್ತಮ ಜ್ಞಾನ ದಾಸೋಹದೊಡನೆ, ಅನ್ನದಾಸೋಹವನ್ನು ಅಚ್ಚುಕಟ್ಟಾಗಿ ಮಾಡುತ್ತಿದೆ. ದಿ. 11 ಮತ್ತು 12 ರಂದು ಧರ್ಮ ಚಿಂತನ ಗೋಷ್ಠಿ ನಡೆಯುತ್ತಿದ್ದು ಸಮಾಜ-ಧರ್ಮಗಳಿಗೆ ಸಂಬಂಧಪಟ್ಟಂತೆ ಮುಕ್ತ ಚರ್ಚೆಗೆ ಅವಕಾಶವಿರುತ್ತದೆ. ಹೆಚ್ಚಿನ ಸಂಖ್ಯೆಯಲ್ಲಿ ಬಂದು ಯಾರು ಬೇಕಾದರೂ ಚಿಂತನ ಗೋಷ್ಠಿಯಲ್ಲಿ ಪಾಲ್ಗೊಳ್ಳಬಹುದು.

ಶರಣ ಮೇಳಕ್ಕೆ ಧನ ಸಹಾಯ

ಶರಣ ಮೇಳವು ಬಸವ ಧರ್ಮೀಯರ ಜಾಗತಿಕ ಉತ್ಸವವಾಗಿರುವುದರಿಂದ ವರ್ಷದಿಂದ ವರ್ಷಕ್ಕೆ ವಿಸ್ತಾರಗೊಳ್ಳುತ್ತಿದೆ. ಕರ್ನಾಟಕ ರಾಜ್ಯದ ವಿವಿಧ ಜಿಲ್ಲೆಗಳಿಂದ

ಮಾತ್ರವಲ್ಲದೆ, ಹೊರರಾಜ್ಯಗಳಿಂದಲೂ ಶರಣ ವ್ರತಿಗಳು ಆಗಮಿಸುವರು. ಜನವರಿ ದಿ.10ನೆಯ ರಾತ್ರಿಯಿಂದ 15ನೆಯ ದಿನಾಂಕದ ರಾತ್ರಿಯವರೆಗೆ ಭಾಗಿಗಳಾಗುವ ಎಲ್ಲರಿಗೂ ಪ್ರಸಾದದ ವ್ಯವಸ್ಥೆ ಮಾಡಲಾಗುವುದು. ಬೆಳಗಿನ ಉಪಾಹಾರ, ಮಧ್ಯಾಹ್ನದ ಊಟ ಮತ್ತು ರಾತ್ರಿಯ ಊಟಗಳನ್ನು ವ್ಯವಸ್ಥೆ ಮಾಡಲಾಗುತ್ತದೆ. ಭವ್ಯವಾದ ಸಭಾ ಮಂಟಪ, ಶಾಮಿಯಾನಾ ಕೊಠಡಿಗಳು, ವಿಶಾಲವಾದ ಪ್ರಸಾದ (ಊಟ) ಮಂಟಪ ಮುಂತಾದವುಗಳ ವ್ಯವಸ್ಥೆ ಮಾಡಲು ಅಪಾರವಾದ ಹಣದ ಆವಶ್ಯಕತೆ ಇರುತ್ತದೆ. ದಾನಿಗಳು ಕೆಳಗಿನಂತೆ ಧನ ಸಹಾಯ ಮಾಡಬಹುದು.

1. ಮಹಾಪೋಷಕರು : 5000 ರೂ. ಮತ್ತು ಮೇಲೆ ಕೊಟ್ಟವರು 4. ಹಿತೈಷಿಗಳು : 500 ರೂ.
2. ಪೋಷಕರು : 2000 ರೂ. ಮತ್ತು ಮೇಲೆ ಕೊಟ್ಟವರು. 5. ಸ್ವಾಗತ ಸಮಿತಿ ಸದಸ್ಯತ್ವ: 250 ರೂ.
3. ದಾನಿಗಳು: 1000 ರೂ. ಮತ್ತು ಮೇಲೆ ಕೊಟ್ಟವರು. 6. ಪ್ರತಿನಿಧಿ ಶುಲ್ಕ : 125 ರೂ.

ಅನ್ನ ದಾಸೋಹಕ್ಕಾಗಿ ಎಷ್ಟಾದರೂ ಭಕ್ತಿಪೂರ್ವಕ ಕಾಣಿಕೆಯನ್ನು ಕೊಡಬಹುದು.

ಶರಣ ಮೇಳಕ್ಕೆ ತಮ್ಮ ಕೊಡುಗೆ ನಿರಂತರವಾಗಿ ಇರಲಿ ಎಂಬ ಇಷ್ಟವಿದ್ದವರು 5000/10000 ರೂಪಾಯಿಗಳ ಪುದುವಟ್ಟು (F.D.)ಇಡಲು ದೇಣಿಗೆ ನೀಡಿದರೆ, ಈ ಪುದುವಟ್ಟಿನ ಬಡ್ಡಿಯ ಹಣವನ್ನು ಶರಣ ಮೇಳದ ದಾಸೋಹಕ್ಕೆ ವಿನಿಯೋಗಿಸಲಾಗುವುದು.

ಜನರು ತಮ್ಮ ಕೈಲಾದಷ್ಟು ದೇಣಿಗೆ ಸಲ್ಲಿಸಬಹುದು. ದವಸ-ಧಾನ್ಯಗಳ ರೂಪದಲ್ಲಿ ಕೊಡಬಹುದು. ಬ್ಯಾಂಕ್ ಡ್ರಾಫ್ಟ್ ಚೆಕ್ಕುಗಳನ್ನು "ಶರಣ ಮೇಳ ಉತವ ಸಮಿತಿ, ಕೂಡಲ ಸಂಗಮ"ದ ಹೆಸರಿನಲ್ಲಾಗಲೀ, (ಕೂಡಲ ಸಂಗಮಕ್ಕೆ ಡಿ.ಡಿ. ತೆಗೆಸುವವರು ಕೇವಲ State Bank of Indiaದ Koodala Sangama ಶಾಖೆಗೆ ಡಿ.ಡಿ. ತೆಗೆಸಬೇಕು.) ಬೆಂಗಳೂರಿನ ಯಾವುದೇ ಬ್ಯಾಂಕ್ ಶಾಖೆಯ ಡಿ.ಡಿ.ಯನ್ನಾಗಲಿ ತೆಗೆಸಿ ಕಳಿಸಬಹುದು. ಎರಡೂ ವಿಳಾಸಗಳನ್ನು ಕೆಳಗೆ ಕೊಡಲಾಗಿದೆ.

ಮುಸಲ್ಮಾನ್ ಧರ್ಮೀಯರಿಗೆ ಮೆಕ್ಕಾ, ಸಿಖ್ಖರಿಗೆ ಅಮೃತಸರ, ಬೌದ್ಧರಿಗೆ ಬುದ್ಧಗಯೆ ಧರ್ಮಕ್ಷೇತ್ರಗಳಾಗಿರುವಂತೆ ಲಿಂಗಾಯತ ಧರ್ಮಾನುಯಾಯಿಗಳಿಗೆ ವಿಶ್ವಗುರು ಬಸವಣ್ಣನವರ ಐಕ್ಯಸ್ಥಾನ ಕೂಡಲ ಸಂಗಮವೇ ಧರ್ಮಕ್ಷೇತ್ರ. ತನ್ನ ಜೀವಮಾನದಲ್ಲಿ ಆಯುಷ್ಯ, ಆರೋಗ್ಯ ಇರುವವರೆಗೆ ಎಷ್ಟು ಸಲ ಒಬ್ಬ ವ್ಯಕ್ತಿ ಶರಣ ಮೇಳದಲ್ಲಿ ಭಾಗಿಯಾಗುತ್ತಾನೋ ಆತ ನಿಜಕ್ಕೂ ಹೆಚ್ಚು ಪುಣ್ಯವಂತ. ಪ್ರತಿಯೊಬ್ಬ ಬಸವ ಧರ್ಮಾನುಯಾಯಿಯು ತನ್ನ ಜೀವಮಾನದಲ್ಲಿ ಎಷ್ಟೇ ಅನಾನುಕೂಲತೆ ಇದ್ದರೂ ಒಮ್ಮೆಯಾದರೂ ಶರಣ ಮೇಳದ (ಜನವರಿ 14 ರಂದು ನಡೆಯುವ)ಸಮುದಾಯ ಪ್ರಾರ್ಥನೆಯಲ್ಲಿ ಭಾಗಿಯಾಗಿ, ಗಣಲಿಂಗ ದರ್ಶನ ಪಡೆದು ತನ್ನ ಅನುಯಾಯಿತ್ವವನ್ನು ಸ್ಥಿರೀಕರಿಸದೇ ಇದ್ದರೆ ಅವನು ಪ್ರಾಮಾಣಿಕ ಲಿಂಗಾಯತನಾಗನು. ಇಂತಹ ಪವಿತ್ರ ಶರಣ ಮೇಳಕ್ಕೆ ಸಹೋದರ ಭಾವನೆಯಿಂದ ಎಲ್ಲರೂ ಲಕ್ಷಗಟ್ಟಳೆ ಸಂಖ್ಯೆಯಲ್ಲಿ ಬನ್ನಿರಿ.

ಶರಣರ ಬರುವೆಮಗೆ ಪ್ರಾಣ ಜೀವಾಳ

ಶರಣ ಮೇಳ ಉತ್ಸವ ಸಮಿತಿ (ರಿ.)
ಬಸವ ಮಂಟಪ, 2035, 20ನೆಯ ಮೇನ್
2ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-560010
ದೂ : 080-22923736/23131476

ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿ
ಕಾರ್ಯಾಧ್ಯಕ್ಷೆ, ಶರಣ ಮೇಳ ಉತ್ಸವ ಸಮಿತಿ,
ಕೂಡಲ ಸಂಗಮ-587115
ತಾ-ಹುನಗುಂದ, ಜಿ-ಬಾಗಲಕೋಟೆ
ದೂ : 08351-268014/268007/268140

1. ಧರ್ಮದ ಹೆಸರಿನಲ್ಲಿ ಭಯೋತ್ಪಾದನೆ.

ಬಿಜಾಪುರದಲ್ಲಿ, "Our struggle for final and complete supremacy of Allaha, involving Babri Masjid too" ಎಂಬ (ನಮ್ಮ ಹೋರಾಟವಿರುವುದು ಅಂತಿಮವಾಗಿ ಹಾಗೂ ಅಲ್ಲಹನ ಸರ್ವೋತ್ತಮಿಕೆಯನ್ನು - ಬಾಬ್ರಿ ಮಸೀದಿ ವಿಷಯವನ್ನೂ ಒಳಗೊಂಡಂತೆ, ಮೆರೆಸುವುದು.) ಎಂಬ ವಾಕ್ಯಗಳಿರುವ ಭಿತ್ತಿಪತ್ರಗಳು ಗೋಡೆಯ ಮೇಲೆ ಕಾಣಿಸಿಕೊಂಡಿವೆ.(ವಿಜಯ ಕರ್ನಾಟಕ ವರದಿ ಚಿತ್ರಸಹಿತ, ದಿ. 5-12-2008) ಉದ್ದೇಶವೇನೋ ತೋರಿಕೆಗೆ ಚೆನ್ನಾಗಿದೆ. ಏಕೆಂದರೆ ಸೃಷ್ಟಿಗೊಡೆಯನಾದ ಪರಮಾತ್ಮನ - ವೇದಾಂತಿಗಳು ಪರಬ್ರಹ್ಮನೆಂದ, ಆಗಮಿಕರು ಪರಶಿವನೆಂದ, ಕ್ರೈಸ್ತರು ಯಹೋವನೆಂದ, ಸಿಖ್ಖರು ವಾಹೆ ಗುರು ಎಂದ , ಲಿಂಗಾಯತರು ಲಿಂಗದೇವ ಎಂದ, ಇಂಗ್ಲೀಷ್ ಭಾಷೆಯಲ್ಲಿ ಗಾಡ್ ಎಂದ ಏಕೈಕ ಶಕ್ತಿಯ ಮಹಿಮೆಯನ್ನು ಸಾರುವ, ಎತ್ತಿ ಹಿಡಿಯುವ ಕ್ರಿಯೆ ಯಾವ ಆಸ್ತಿಕರಿಗೆ ತಾನೆ ಮೆಚ್ಚುಗೆಯಾಗದು ? ಆದರೆ ಈ ಗುರಿಯನ್ನು ಹೊಂದಿದ ಉಗ್ರವಾದಿಗಳು ಹಿಡಿದಿರುವ ಮಾರ್ಗ ಸರಿಯೆ ?

ಇದೇ ಸಂದರ್ಭದಲ್ಲಿ ನಕ್ಸಲರ ಹೋರಾಟವನ್ನು ಪ್ರಸ್ತಾಪಿಸಬಹುದು. ಅವರದು ಮಾನವೀಯ ಹೃದಯ, ಬಡವರನ್ನು ಕಂಡಾಗ ಅನುಕಂಪದಿಂದ ಮಿಡಿಯುವ ಮನಸ್ಸು. ಆದರೆ ಅವರು ಕೋವಿ ಹಿಡಿದು ಸರ್ಕಾರದ ವಿರುದ್ಧ, ಶ್ರೀಮಂತರ ವಿರುದ್ಧ ರಕ್ತಸಿಕ್ತವಾಗಿ ಹೋರಾಡುವ ಪರಿ ವಿವೇಕಯುಕ್ತವೆ ? ಇದರಿಂದ ಧ್ಯೇಯವಾದಿಗಳಾದ ಸಾಕೇತ ರಾಜನ್, ಪಾರ್ವತಿ, ರವಿ ಮುಂತಾದವರು ವಿನಾ ಕಾರಣ ಪೋಲೀಸರ ಗುಂಡಿಗೆ ಬಲಿಯಾದರಲ್ಲ. ಸಾಧನೆ ಏನಾಯಿತು ? ಅವರ ಆದರ್ಶಗಳೆಲ್ಲ ಮಣ್ಣುಗೂಡಿದವಲ್ಲವೆ ? ಸಮಾಜದ ಮುಖ್ಯವಾಹಿನಿಯಲ್ಲಿ ಸೇರಿಕೊಂಡು ಜನಪರ ಚಳುವಳಿಯನ್ನು ಹಮ್ಮಿಕೊಂಡು ಜನಜಾಗೃತಿ ಮಾಡಿದ್ದರೆ ಸ್ವಲ್ಪವಾದರೂ ಬದಲಾವಣೆ ತರಬಹುದಿತ್ತು, ನಾಲ್ಕು ಜನರಿಗಾದರೂ ಉಪಕಾರ ಮಾಡಬಹುದಿತ್ತು. ನಕ್ಸಲೀಯ ಹಿಂಸಾವಾದಕ್ಕೆ ಬದ್ಧರಾಗಿ ಕಾಡುಮೇಡು ಅಲೆದು, ಉಪವಾಸ - ವನವಾಸ ಮಾಡಿದ್ದಷ್ಟೆ ಬದುಕಾಯಿತು ಕಡೆಯಲ್ಲಿ ದುರಂತ ಸಾವಾಯಿತು.

ಮುಸ್ಲಿಂ ಭಯೋತ್ಪಾದಕರ ವಿಷಯ ಬೇರೆ. ನಕ್ಸಲೀಯರಂತೆ ಬದುಕಿಗಾಗಿ ಹೋರಾಟ ಮಾಡುವವರಲ್ಲ. ಸಾಯಲೆಂದೇ ಸಿದ್ಧವಾಗಿ ಬಂದವರು, ತಾವು ಸಾಯುವ ಮುನ್ನ ಅತಿ ಹೆಚ್ಚು ಜನರನ್ನು ಕೊಂದು ವಿಕೃತ ಸಂತೋಷವನ್ನು ಅನುಭವಿಸಿ ತಾವೂ ಸಾಯಬೇಕು ಎನ್ನುವ ಆತ್ಮಾಹುತಿಯ ಚಿಂತನೆಯವರು. ಈ ರೀತಿಯ ಹಿಂಸಾವೃತ್ತಿಯಿಂದ ಅಲ್ಲಹನ ಮಹಿಮೆ ಮೆರೆಯುವುದೆ ? ಧರ್ಮದ ಹಿರಿಮೆ ವೈಭವಿಸುವುದೆ? ದೇವರ ಮಹಿಮೆ ಮೆರೆಸಬೇಕಾದರೆ ಅವನ ಇಚ್ಛೆಯಂತೆ ನಡೆಯಬೇಕು. ದೇವನ ಒಂದು ಅಂಶವಾದ ಜೀವಾತ್ಮರ ಹಿತವನ್ನು ಬಯಸಬೇಕು. ದೇವರ ಬಯಕೆ ಈ ಭೂಮಿಯ ಮೇಲೆಯೇ ಕೈಲಾಸ(ಸ್ವರ್ಗ) ನಿರ್ಮಾಣ, ಅರ್ಥಾತ್ ದೈವೀರಾಜ್ಯ ನಿರ್ಮಾಣ. ಅದಕ್ಕೆ ವಿರುದ್ಧವಾಗಿ ನಡೆದು ದೇವರ ಸರ್ವೋತ್ತಮಿಕೆಯನ್ನು ಮೆರೆಸುವುದು ಹೇಗೆ ಸಾಧ್ಯ ? ಮುಸ್ಲಿಂ ಭಯೋತ್ಪಾದಕರ ಉಪಟಳ ಹಿಂದು ಪ್ರಧಾನ ರಾಷ್ಟ್ರವಾದ ಭಾರತದಲ್ಲಿ ಮಾತ್ರವಲ್ಲ ಪಾಕಿಸ್ತಾನ, ಅಫ್ಘಾನಿಸ್ಥಾನ, ಇರಾಕ್ ಮುಂತಾದಲ್ಲಿ ಸಹ ಅವ್ಯಾಹತವಾಗಿ ಸಾಗಿದೆ. ಮುಂಬಯಿಯಲ್ಲಿ ನವಂಬರ್ 26ರಂದು ನಡೆಸಿದ ಹಿಂಸಾತ್ಮಕ ದಾಳಿಯಲ್ಲಿ ಕೇವಲ ಹಿಂದುಗಳಷ್ಟೇ ಬಲಿಯಾಗಿಲ್ಲ ಮುಸ್ಲೀಮರು ಸಹ ಸಾಕಷ್ಟು ಸತ್ತಿದ್ದಾರೆ. ಇದರಿಂದ ಶತ್ರು (?) ಧರ್ಮೀಯರನ್ನಷ್ಟೇ ಅಲ್ಲ ಸ್ವಧರ್ಮೀಯರನ್ನೂ ಅವರು ಕೊಂದ ಪಾಪಕ್ಕೆ ಗುರಿಯಾದಂತಾಗಲಿಲ್ಲವೆ ? ಇಸ್ಲಾಂ ಅಂದರೆ ಶಾಂತಿ. ಅಶಾಂತಿಯನ್ನೇ ಬಿತ್ತುತ್ತ ಬೆಳೆಯುತ್ತ ಹೋದರೆ ಇವರೆಂಥಾ ಧರ್ಮವಂತರು !

ಹುತಾತ್ಮರಿಗೆ ಶ್ರದ್ಧಾಂಜಲಿ

ಅಮಾಯಕರಾದ ನಾಗರಿಕರು, ದೇಶೀಯರು, ವಿದೇಶೀಯರು ಎಲ್ಲರೂ ತಾಜ್ ಓಬೇರಾಯ್ ಹೋಟೆಲ್, ನಾರಿಮನ್ ಹೌಸ್, ಶಿವಾಜಿ ರೇಲ್ವೆ ನಿಲ್ದಾಣ - ಮುಂತಾದ ಹಲವು ಕಡೆ ಬಲಿಯಾಗಿದ್ದಾರೆ. ಈ ಸ್ಥಳಗಳಲ್ಲಿ ಬಂಧಿಗಳಾದವರನ್ನು, ಉಗ್ರರ ಗುಂಡಿಗೆ ಬಲಿಯಾಗಿ

ಸಾಯುವವರನ್ನು ಸಂರಕ್ಷಿಸಲು ಮುಂಬೈಯ ಪೋಲೀಸ್ ಅಧಿಕಾರಿಗಳು, ರಾಷ್ಟ್ರೀಯ ಭದ್ರತಾ ಪಡೆಗಳು, ಕಮ್ಯಾಂಡೋಗಳು ಆ ಸ್ಥಳಗಳಿಗೆ ಹೋಗಿ ತಮ್ಮ ಜೀವವನ್ನು ತೆತ್ತಿದ್ದಾರೆ. 183 ನಾಗರಿಕರು, ದೊಡ್ಡ ಹುದ್ದೆಗಳಲ್ಲಿದ್ದ ಅಧಿಕಾರಿಗಳೂ ಹುತಾತ್ಮರಾಗಿದ್ದಾರೆ. ಸಂದೀಪ್ ಉನ್ನಿಕೃಷ್ಣನ್ ಎಂಬ ಬೆಂಗಳೂರಿನ ತರುಣ ಮೇಜರ್ ವೀರ ಮರಣ ಅಪ್ಪಿದ್ದಂತೂ ಎಲ್ಲರಿಗೂ ದುಃಖವನ್ನುಂಟು ಮಾಡಿದೆ. ಅವರ ತ್ಯಾಗಕ್ಕೆ ಬೆಲೆ ಕಟ್ಟಲು ಸಾಧ್ಯವಾಗದು.

ಈ ಪ್ರಸಂಗವು ಅನೇಕರ ವ್ಯಕ್ತಿತ್ವವನ್ನು ಬೀದಿಗಿಟ್ಟಿದೆ. ಅತ್ಯಂತ ದುರ್ಬಲ ಗೃಹ ಮಂತ್ರಿ ಎಂದು ನಾನು ಕಲ್ಯಾಣ ಕಿರಣ ನವೆಂಬರ್ ಸಂಚಿಕೆಯಲ್ಲಿ ಬರೆದಿದ್ದೆ ಅದು ಸ್ಪಷ್ಟವಾಗಿ ಶ್ರೀ ಶಿವರಾಜ ಪಾಟೀಲರಿಂದ ಪ್ರಧಾನಿ ಶ್ರೀ ಮನಮೋಹನ್ ಸಿಂಗ್ ಅವರು ರಾಜೀನಾಮೆ ಪಡೆದಿದ್ದಾರೆ. ಕೇರಳ ಮುಖ್ಯಮಂತ್ರಿ ಶ್ರೀ ಅಚ್ಯುತಾನಂದನ್ ಅಸಭ್ಯ ಮಾಡನ್ನಾಡಿ ನಂತರ ಜನಾಗ್ರಹಕ್ಕೆ ಈಡಾಗಿ ಸಂದೀಪ್ ಪರಿವಾರದ ಮತ್ತು ಜನತೆಯ ಕ್ಷಮೆ ಕೋರಿದ್ದಾರೆ. ಮಹಾರಾಷ್ಟ್ರ ಮುಖ್ಯಮಂತ್ರಿ ಮತ್ತು ಉಪಮುಖ್ಯಮಂತ್ರಿ ಲಘುವಾಗಿ ಮಾತನಾಡಿ ಜನರ ಮಾತ್ರವಲ್ಲ ಹೈಕಮಾಂಡಿನ ಕೋಪಕ್ಕೆ ತುತ್ತಾಗಿ ಅಧಿಕಾರದಿಂದ ಕೆಳಗಿಳಿದಿದ್ದಾರೆ.

ಎಲ್ಲಕ್ಕಿಂತ ಆಘಾತಕರ ಸಂಗತಿ ಎಂದರೆ ಭ್ರಷ್ಟಾಚಾರದ ತವರ್ಮನೆಯಾಗಿರುವ ನಮ್ಮ ದೇಶದಲ್ಲಿ ಅಧಿಕಾರಿಗಳು, ಕಮ್ಯಾಂಡೋಗಳಿಗೆ ಕೊಟ್ಟ ಬುಲೆಟ್ ಪ್ರೂಫ್ ಜಾಕೆಟ್ ಕಡಿಮೆ ಗುಣಮಟ್ಟದ್ದಿದ್ದು ಅದರಿಂದ ಅವರು ಬೇಗನೆ ಆಹುತಿಯಾದರೆಂಬುದು ಒಂದಾದರೆ, ಪೋಲೀಸರ ಬಳಿ ಇದ್ದ ಬಂದೂಕು ಕಡಿಮೆ ಶಕ್ತಿಯವು, ಹಳೆಯವು. ಭಯೋತ್ಪಾದಕರ ಬಳಿ ಅತ್ಯಾಧುನಿಕ ಶಸ್ತ್ರಾಸ್ತ್ರಗಳು ಇದ್ದವು ಎಂಬ ವಿಷಯ. ಇದು ನಿಜಕ್ಕೂ ವಿಷಾದನೀಯ. ರಾಜಕಾರಣಿಗಳು, ಮೇಲಧಿಕಾರಿಗಳ ರಾಕ್ಷಸೀ ಹೊಟ್ಟೆಯನ್ನು ತುಂಬಿ ಹಣ ಮುಂದೆ ಹೋಗುವಷ್ಟರಲ್ಲಿ ಆ ಮೊತ್ತಕ್ಕೆ ಉತ್ತಮ ವಸ್ತುಗಳು ಹೇಗೆ ಲಭ್ಯವಾಗಲು ಸಾಧ್ಯ ?

ತಾಜ್ , ಓಬೇರಾಯ್‌ಯಂತಹ ವಿದೇಶಿ ಗಣ್ಯರು, ಪ್ರವಾಸಿಕರು ಉಳಿದುಕೊಳ್ಳುವ ಹೋಟೆಲ್‌ದೊಳಗೆ ಶಸ್ತ್ರಸಜ್ಜಿತರಾಗಿ ಭಯೋತ್ಪಾದಕರು ಒಳಗೆ ಹೀಗೆ ನುಗ್ಗಿರಬೇಕಾದರೆ ಅಲ್ಲಿಯ ಭದ್ರತಾ ವ್ಯವಸ್ಥೆ ಎಷ್ಟೂ ಸರಿಯಿಲ್ಲ ಎನ್ನಿಸುವುದಿಲ್ಲವೆ ? AK 47 ರೈಫಲ್, ಗ್ರೆನೇಡ್ ಇತ್ಯಾದಿ ಭಯೋತ್ಪಾದಕರು ಒಳಗೆ ಹೇಗೆ ಒಯ್ದರು ? ಇದನ್ನೆಲ್ಲ ತಪಾಸಿಸುವುದಿಲ್ಲವೆ ? ನವೆಂಬರ್ 26ರ ಪ್ರಸಂಗ ದೇಶದ ಭದ್ರತಾ ವ್ಯವಸ್ಥೆಯನ್ನು ಎಚ್ಚರಗೊಳಿಸಲು ಒದಗಿರುವ ಪಾಠವೇ ಸರಿ. ಇದರಿಂದ ಸರ್ಕಾರಗಳು ಮಾತ್ರವಲ್ಲ ತಾಜ್, ಓಬೆರಾಯ್‌ನಂತಹ ಖಾಸಗಿ ಸಂಸ್ಥೆಗಳು ಸಹ ಬುದ್ಧಿ ಕಲಿಯಬೇಕು.

ಜನರ ಜೀವನವನ್ನು ರಕ್ಷಿಸಲು ಹುತಾತ್ಮರಾದ ಭದ್ರತಾ ಅಧಿಕಾರಿಗಳಿಗೆ, ಏನೂ ಅರಿಯದ ಮುಗ್ಧರಾಗಿ ಜೀವತೆತ್ತ ನಾಗರಿಕರಿಗೆ - ಅವರ ಆತ್ಮಗಳಿಗೆ ಶಾಂತಿ ಸಿಗಲೆಂದು ಸೃಷ್ಟಿಕರ್ತ ಲಿಂಗದೇವನಲ್ಲಿ ಬೇಡೋಣ.

ಸಂಪಾದಕೀಯ : 2

ಲಿಂಗಾಯತ ಧರ್ಮ ಮತ್ತು ಆಹಾರ ಪದ್ಧತಿ

ಶರಣ.ಸಿ.ಮುತ್ತರಾಯಪ್ಪನವರು ಒಂದು ಬಿನ್ನಹ ಓಲೆಯನ್ನು ಬರೆದಿದ್ದು, ಇದನ್ನು ಪ್ರಕಟಿಸಲಾಗಿದೆ. ಶ್ರೀಯುತರು ವಿಶ್ವಗುರು ಬಸವಣ್ಣನವರು ಸಂಸ್ಥಾಪಿಸಿದ ಲಿಂಗಾಯತ ಧರ್ಮದ ವಿಶೇಷತೆಯನ್ನು ನಿಜಕ್ಕೂ ಅರಿತಿದ್ದಾರೆ ಎಂಬುದು ಸಂತೋಷದ ಸಂಗತಿ. ಅವರ ಸದುದ್ದೇಶ, ಇದು ವಿಸ್ತಾರಗೊಂಡು ಬೆಳೆಯಬೇಕು. ಇದರಿಂದ ಶೂದ್ರರು, ದಲಿತರು, ಹಿಂದುಳಿದ ವರ್ಗಗಳವರಿಗೆ ಒಂದು ಧರ್ಮದ ಆಶ್ರಯ ಸಿಕ್ಕಿ ಹಿಂದು ಧರ್ಮದ ಕಬಂಧ ಬಾಹುವಿನಿಂದ ವಿಮೋಚನೆಗೊಳ್ಳಬೇಕು ಎಂಬುದು. ಲಿಂಗಾಯತ ಧರ್ಮವು ಬೆಳೆಯದೆ ಇರಲು ವಿಶ್ವ ಗುರು ಬಸವಣ್ಣನವರು ಸಸ್ಯಾಹಾರ ಜೀವನ ಪದ್ಧತಿಯನ್ನು ಪ್ರತಿಪಾದಿಸಿದ್ದು ಮಾಂಸಾಹಾರಕ್ಕೆ ಅವಕಾಶ ನೀಡದೆ ಇರುವುದೇ ಮುಖ್ಯ ಕಾರಣ ಎಂಬ ಆಲೋಚನೆಯನ್ನು ಅವರು ಪ್ರತಿಪಾದಿಸಿದ್ದಾರೆ.

ಬಹುಪಾಲು ಲಿಂಗಾಯತರು ನಾಮಮಾತ್ರ ಲಿಂಗಾಯತರಾಗಿ, ಯಾಂತ್ರಿಕವಾಗಿ ಇಷ್ಟಲಿಂಗ ಧರಿಸಿ, ಆಚರಣೆಗಳನ್ನು ಮಾತ್ರ ತಮ್ಮ ಧರ್ಮಗುರು ಬಸವಣ್ಣನವರ ಆದೇಶಕ್ಕೆ ವಿರುದ್ಧವಾಗಿ

ಮಾಡುತ್ತಿರುವುದನ್ನು ಶ್ರೀಯುತರು ವಿಷಾದದಿಂದ ಪ್ರಸ್ತಾಪಿಸಿರುವರಲ್ಲದೆ, "ಮಾಂಸಾಹಾರಿಗಳೆಲ್ಲ ಅಜ್ಞಾನಿಗಳೂ, ಕ್ರೂರಿಗಳೂ, ದುಷ್ಟರೂ, ಪಾಪಿಷ್ಟರೂ, ವಂಚಕರೂ, ಅನಾಗರೀಕರೂ, ನಾಸ್ತಿಕರೂ ಮತ್ತು ಅವಿಚಾರವಂತರೇನಲ್ಲ." ಎಂದು ನುಡಿದಿದ್ದಾರೆ. ಈ ಮಾತುಗಳ ಹಿಂದೆ ನೋವಿನ ನೆರಳು ಕಾಣಬರುತ್ತಿದೆ. ಏಕೆಂದರೆ ಮಡಿವಂತರಾದ ಕೆಲವು ಸಸ್ಯಾಹಾರಿಗಳು ಮಾಂಸಾಹಾರಿಗಳನ್ನು ಆ ರೀತಿ ತಿಳಿದು, ವರ್ತಿಸಿರಬಹುದು.

ಶ್ರೀ. ದೇ.ಜವರೇಗೌಡರು ಸಹ ಈ ಬಗೆಯ ಸಲಹೆಯನ್ನು 1977-78ರಲ್ಲಿಯೇ ನೀಡಿದ್ದರು. ವಿಶ್ವ ಗುರು ಬಸವಣ್ಣನವರ ತತ್ತ್ವಗಳು ಮಾನವೀಯವಾಗಿವೆ. ಕೆಲವರು ತಮ್ಮ ಕುಲಜಾತಿ ಸಂಪ್ರದಾಯದಿಂದ ಮಾಂಸಾಹಾರಿಗಳಾಗಿರುವುದರಿಂದ ಅದನ್ನು ಬಿಡಲು ಅವರಿಗೆ ಸಾಧ್ಯವಾಗದು. ಆದ್ದರಿಂದ ಮಾಂಸಾಹಾರಕ್ಕೆ ಅಧಿಕೃತವಾಗಿ ಅವಕಾಶ ನೀಡಿದರೆ ಆಗ ಬಹಳ ಜನ ಶೂದ್ರರು, ದಲಿತರು ಲಿಂಗಾಯತ ಧರ್ಮವನ್ನು ಸ್ವೀಕರಿಸಬಹುದು. ಎಂಬುದು ಅವರ ಅಭಿಪ್ರಾಯವಾಗಿತ್ತು.

1977-78ರಿಂದಲೂ (ಈ ಬಗ್ಗೆ ಒಂದು ವಿಚಾರಗೋಷ್ಠಿಯನ್ನು ಏರ್ಪಡಿಸಲಾಗಿತ್ತು) ನಾನು ಗಂಭೀರವಾಗಿ ಚಿಂತನೆ ಮಾಡುತ್ತಲೇ ಇರುವೆನಾದರೂ ನಿರ್ಧಾರಕ್ಕೆ ಬರಲು ಆಗುತ್ತಿಲ್ಲ. ಗುರು ಬಸವಣ್ಣನವರ ಸಾಂವಿಧಾನಿಕ ಚೌಕಟ್ಟಿನಲ್ಲಿ ನಾವು ಸಾಕಷ್ಟು ದಿಟ್ಟ ಹೆಜ್ಜೆ ಇಟ್ಟು ಬದಲಾವಣೆ ತಂದಿದ್ದೇವೆ. ಉದಾ: ಜಂಗಮವು ಜಾತಿಯಲ್ಲ ಎಂಬ ಹೋರಾಟ, ಮಹಿಳಾ ಜಗದ್ಗುರು ಪೀಠ ಸ್ಥಾಪನೆ, ಏಕದೇವೋಪಾಸನೆ ಪ್ರತಿಷ್ಠಾಪಿಸಲು ಲಿಂಗದೇವ ವಚನಾಂಕಿತ ಬದಲಾವಣೆ ಇತ್ಯಾದಿ. ಇವೆಲ್ಲವೂ ಗುರು ಬಸವಣ್ಣನವರ ಸೈದ್ಧಾಂತಿಕ ಚೌಕಟ್ಟಿಗೆ ವಿರುದ್ಧವಾಗಿಲ್ಲ. ಆದರೆ, ಮಾಂಸಾಹಾರದ ವಿಷಯಕ್ಕೆ ಬಂದಾಗ ಸಸ್ಯಾಹಾರ ಅವರ ಸಿದ್ಧಾಂತದ ಅವಿಭಾಜ್ಯ ಅಂಗ.

1. "ಕೊಲ್ಲೆನಯ್ಯಾ ಪ್ರಾಣಿಗಳ, ಮೆಲ್ಲೆನಯ್ಯ ಬಾಯಿಚ್ಚೆಗೆ
   ಬಲ್ಲೆನಯ್ಯಾ ಮುಂದೆ ತೊಡಕುಂಟೆಂಬುದ."

2. ಅಂಗದಿಚ್ಛೆಗೆ ಮದ್ಯ ಮಾಂಸವ ತಿಂಬರು
   ಕಂಗಳಿಚ್ಛೆಗೆ ಪರವಧುವ ನೆರೆವರು
   ಲಿಂಗ ಲಾಂಛನಧಾರಿಯಾದಲ್ಲಿ ಫಲವೇನು ?
   ಲಿಂಗ ಪಥವ ತಪ್ಪಿ ನಡೆವವರು ?

ಸಸ್ಯಾಹಾರಿಗಳು ಶ್ರೇಷ್ಠ, ಮಾಂಸಾಹಾರಿಗಳು ಕಡಿಮೆ ಎಂಬ ಅಭಿಪ್ರಾಯ ಯಾರಿಗೂ ಇಲ್ಲ. ಯಾರಾದರೂ ಹೊಂದಿದ್ದರೆ ಅದು ತಪ್ಪು, ಆದರೆ ಸಸ್ಯಾಹಾರವು ಶ್ರೇಷ್ಠ ಎಂಬ ಬಗ್ಗೆ ಎರಡು ಮಾತಿಲ್ಲ. ಇಂದಿನ ವೈದ್ಯ ವಿಜ್ಞಾನವು ಸಹಿತ ಸಸ್ಯಾಹಾರಕ್ಕೆ ಆದ್ಯತೆ ನೀಡುತ್ತದೆ. ಸಸ್ಯಾಹಾರವು ಉತ್ತಮವಾದ ಜೀವನ ವಿಧಾನ.

1.ತನ್ನಂತೆಯೇ ಸುಖ ದುಃಖ ಇರುವ ಇನ್ನೊಂದು ಪ್ರಾಣಿಯನ್ನು ಕೊಲ್ಲುವುದಕ್ಕೆ ಅವಕಾಶ ನೀಡುವುದಿಲ್ಲ.

2. ಸುಲಭವಾಗಿ ಜೀರ್ಣವಾಗುವ ಆಹಾರ.

3. ಮಾನವನ ಹಲ್ಲುಗಳು ಸಸ್ಯಾಹಾರಿ ಪ್ರಾಣಿಗಳಾದ ಹಸು, ಎಮ್ಮೆ, ಎತ್ತುಗಳಂತೆ ಸಾಲಾಗಿ ಇವೆಯೇ ವಿನಾ ಮಾಂಸಾಹಾರಿ ಪ್ರಾಣಿಗಳಂತೆ ಕೋರೆ ಹಲ್ಲುಗಳಿಲ್ಲ. ಆದಿ ಮಾನವ ಪ್ರಾಣಿಗಳನ್ನು ಕೊಂದು ಹಸಿ ಮಾಂಸವನ್ನು ತಿನ್ನುತ್ತಿದ್ದ. ನಂತರ ಬೆಂಕಿಯ ಉಪಯೋಗ ತಿಳಿದಾಗ ಬೇಯಿಸಿ ತಿನ್ನತೊಡಗಿದ. ಆನಂತರ ಕೃಷಿ ಆವಿಷ್ಕಾರವಾಯಿತು. ದವಸ - ಧಾನ್ಯಗಳ ಉಪಯೋಗ ತಿಳಿಯಿತು. ಅನಾಗರೀಕತೆಯಿಂದ ನಾಗರೀಕತೆಗೆ, ನಂತರ ಸಾಂಸ್ಕೃತಿಕ ಬದುಕಿಗೆ ಸಾಗಿದ. ಸಸ್ಯಾಹಾರಿ ಜೀವನ ವಿಧಾನಕ್ಕೆ ಬೇಕಾದ ಪ್ರಾಕೃತಿಕ ಪರಿಸರ, ತತ್ತ್ವ ಚಿಂತನೆ ಲಭ್ಯವಾದುದು ಭಾರತದಲ್ಲಿ. ಹೀಗಾಗಿ ಸಸ್ಯಾಹಾರಿ ಜೀವನ ವಿಧಾನ ಭಾರತದ ಆದರ್ಶವಾಯಿತು. ಉಳಿದ ದೇಶಗಳಲ್ಲಿ ಇಂಥದೊಂದು ಕಲ್ಪನೆ ಸಹ ಮೂಡಲಿಲ್ಲ.

ಗೌತಮ ಬುದ್ಧ ಮತ್ತು ವರ್ಧಮಾನ ಮಹಾವೀರ ಹುಟ್ಟಿದ್ದು ಕ್ಷತ್ರಿಯರಲ್ಲಿ. ಅವರು ಮಾಂಸಾಹಾರಿ ಜನರು. ಆದರೆ ಹಿಂಸೆಯನ್ನು ತಡೆಗಟ್ಟುವ ಅಗತ್ಯವನ್ನು ಕಂಡು ಅಹಿಂಸೆಯನ್ನು ಪ್ರತಿಪಾದಿಸಿದವರಲ್ಲಿ ಅವರಿಬ್ಬರೂ ಮೊದಲಿಗರು. ನಂತರ ಬಂದವರು ಬಸವಣ್ಣನವರು. ಅವರೂ

ಅಹಿಂಸಾತ್ಮಕ ಧರ್ಮವನ್ನು ಪ್ರತಿಪಾದಿಸಿದರು. ದಯೆ ಇಲ್ಲದ್ದು ಧರ್ಮವೇ ಅಲ್ಲ ಎಂದು ನುಡಿದರು.

ದಯವಿಲ್ಲದ ಧರ್ಮವು ಆದೇವುದಯ್ಯಾ ?
ದಯವಿರಬೇಕು ಸಕಲ ಪ್ರಾಣಿಗಳೆಲ್ಲರಲ್ಲಿಯೂ
ದಯವೇ ಧರ್ಮದ ಮೂಲವಯ್ಯ
ಅಂತಲ್ಲದೊಲ್ಲನಯ್ಯ ಲಿಂಗದೇವ

ಮೇಲ್ಜಾತಿಯವರೆನ್ನಿಸಿಕೊಂಡ ಬ್ರಾಹ್ಮಣರು ಅಜ ಯಾಗದಲ್ಲಿ ಆಡನ್ನು, ಅಶ್ವಮೇಧದಲ್ಲಿ ಕುದುರೆಯನ್ನು ಬಲಿಕೊಡುವುದನ್ನು ಖಂಡಿಸಿದರು. ಇನ್ನು ಕೆಳ ಜಾತಿಯವರೆನ್ನಿಸಿಕೊಂಡವರು ಮಾರಿ ಮಸಣಿಗೆ ಕುರಿ ಕೋಣಗಳನ್ನು ಬಲಿ ಕೊಡುವುದನ್ನು ಖಂಡಿಸಿದರು.

ಧರ್ಮಪಿತರ ವಚನ ವಾಕ್ಯಗಳು ಹೀಗಿವೆ :

1. ಮಾತಿನ ಮಾತಿಂಗೆ ನಿನ್ನ ಕೊಂದಿಹರೆಂದು
ಎಲೆ ಹೋತೆ ಅಳು ಕಂಡಾ !
ವೇದವನೋದಿದವರ ಮುಂದೆ ಅಳು ಕಂಡಾ !
ಶಾಸ್ತ್ರವ ಕೇಳಿದವರ ಮುಂದೆ ಅಳು ಕಂಡಾ !
ನೀನತ್ತುದಕ್ಕೆ ತಕ್ಕುದ ಮಾಡುವ ನಮ್ಮ ಲಿಂಗದೇವ.

2. ಕುರಿ ಸತ್ತು ಕಾವುದೇ ಹರವುಳಿದವರ ?

3. ಕುರಿ ಬೇಡ ಮರಿ ಬೇಡ
ಬರಿಯ ಪತ್ರೆಯ ತಂದು ಪೂಜಿಸು

ಒಂದು ವಚನ ಮಾತ್ರ ವಿಲಕ್ಷಣವಾಗಿದೆ.

ಎಡದ ಕೈಯಲ್ಲಿ ಕತ್ತಿ, ಬಲದ ಕೈಯಲ್ಲಿ ಮಾಂಸ.
ಬಾಯಲ್ಲಿ ಸುರೆಯ ಗಡಿಗೆ, ಕೊರಳಲ್ಲಿ ದೇವರಿರಲಿ,
ಅವರ ಲಿಂಗವೆಂಬೆ, ಸಂಗನೆಂಬೆ,
ಲಿಂಗದೇವಾ, ಅವರ ಮುಖಲಿಂಗಿಗಳೆಂಬೆ !

ಈ ವಚನ ಇಟ್ಟುಕೊಂಡು ವಿಪರೀತ ಅ(ಪಾ) ರ್ಥ ಮಾಡಿದವರೂ (ಸ್ವಾಮಿಗಳು) ಉಂಟು.''ಕೊರಳಲ್ಲಿ ಲಿಂಗವಿರಲಿ. ಅವನು ಕತ್ತಿಯಿಂದ ಪ್ರಾಣಿಗಳನ್ನು ಕೊಂದರೂ ಪರವಾಗಿಲ್ಲ, ಸುರಾಪಾನ ಮಾಡಿದರೂ ಪರವಾಗಿಲ್ಲ, ಮಾಂಸಾಹಾರ ಮಾಡಿದರೂ ಪರವಾಗಿಲ್ಲ. ಎಂದಿದ್ದಾರೆ ಬಸವಣ್ಣನವರು.'' ಇನ್ನುಳಿದ ಹಲವಾರು ವಚನಗಳಲ್ಲಿ ಈ ಮೂರೂ ಕ್ರಿಯೆಗಳನ್ನು - ಕೊಲ್ಲುವಿಕೆ, ಮೆಲ್ಲುವಿಕೆ, ಕುಡಿಯುವಿಕೆ, ನಿಷೇಧಿಸಿರುವಾಗ ಮೇಲ್ಕಂಡ ವಚನದಲ್ಲಿ ಹೀಗೆ ಹೇಳಬೇಕಾದರೆ ಏನಾದರೂ ಅರ್ಥವಿರಬೇಕಲ್ಲವೆ ?

ಮಾಂಸಾಹಾರ, ಸುರಾಪಾನ ಇವು ''ಜಾತಿ ಧರ್ಮ'' ಎಂದು ದೃಢವಾಗಿ ನಂಬಿರುವ ಕೆಲವು ಜಾತಿಯ ಜನರು ಲಿಂಗಧಾರಣೆ ಮಾಡಿಕೊಂಡೂ ಸಹ ಮಾಂಸಾಹಾರ, ಮದ್ಯಪಾನ ಮುಂದುವರಿಸಿದಾಗ ಇನ್ನಿತರ ಶರಣರು ಆಕ್ಷೇಪಿಸಿದಾಗ ಮಾತೃಹೃದಯಿ ಬಸವಣ್ಣನವರು ಮಾನವೀಯ ಕಳಕಳಿಯಿಂದ ಹೇಳಿದ್ದಾರೆ, ''ಇರಲಿ , ಸ್ವಲ್ಪ ಸಮಯಾವಕಾಶವನ್ನು ಕೊಡೋಣ. ಸದ್ಯ ಲಿಂಗಧಾರಣೆ ಮಾಡಿಕೊಳ್ಳಲಾದರೂ ಮನಸ್ಸು ಮಾಡಿದ್ದಾನೆ. ಅನುಭವ ಮಂಟಪಕ್ಕೆ ಬಂದು ಶರಣರ ಒಡನಾಟ ಮಾಡುತ್ತಾ ಹೋದಂತೆ ಖಂಡಿತಾ ಬದಲಾಗುವನು. ಅವಸರ ಮಾಡಬೇಡಿ, ನಾನಂತೂ ಅವನನ್ನು ಗೌರವಿಸುತ್ತೇನೆ, ಆದರಿಸುತ್ತೇನೆ.''ಆದ್ದರಿಂದ , ಈ ವಚನ ಓದಿ ಲಿಂಗಧಾರಣೆ ಮಾಡಿಕೊಂಡೂ ಮಾಂಸಾಹಾರ, ಮದ್ಯಪಾನಕ್ಕೆ ಅವಕಾಶ ನೀಡಿದ್ದಾರೆ ಎಂದು ಅ(ಪಾ)ರ್ಥ ಮಾಡುವುದು ಸರಿಯಲ್ಲ.

ಚಿತ್ರದುರ್ಗದ ಶ್ರೀ ಮುರುಘಾ ಶರಣರು '' ಲಿಂಗಧಾರಣೆ ಮಾಡಿಕೊಂಡೂ ಸಹ ಮಾಂಸಾಹಾರ ಮಾಡಬಹುದು. ಆಹಾರ ಅವರ ವೈಯಕ್ತಿಕ ಆಯ್ಕೆ.'' ಎಂದಾಗ ಜನರಿಂದ ಅತ್ಯಂತ ತೀಕ್ಷ್ಣ ಪ್ರತಿಕ್ರಿಯೆ ಬಂದಿತು. ಮಾಂಸಾಹಾರಿ ಧರ್ಮಗಳಾದ ಕ್ರೈಸ್ತ, ಇಸ್ಲಾಂಗಳ ಅನುಯಾಯಿಗಳು

ಯಾರದಾದರೂ ಗುರುಗಳ, ಸಂತರ ಪ್ರಭಾವಕ್ಕೆ ಒಳಗಾಗಿ ಸ್ವಯಂ ಪ್ರೇರಣೆಯಿಂದ ಸಸ್ಯಾಹಾರಿ ಆಹಾರ ಪದ್ಧತಿಯನ್ನು ತಮ್ಮ ವೈಯಕ್ತಿಕ ಆಯ್ಕೆಯಾಗಿ ಮಾಡಿಕೊಳ್ಳಬಹುದು. ಆದರೆ ತನ್ನ ಧರ್ಮದ ಸಾಂವಿಧಾನಿಕ ಚೌಕಟ್ಟಿನಲ್ಲಿ ಸಸ್ಯಾಹಾರಿ ಧರ್ಮವಾದ ಲಿಂಗಾಯತದ ಅನುಯಾಯಿಗಳು ತಮ್ಮ ಧರ್ಮದ ಸಮಯಾಚಾರವನ್ನು ಉಲ್ಲಂಘಿಸಲು ಆಗುವುದಿಲ್ಲ. ಒಂದು ವೇಳೆ ಅವನು ತನ್ನ ವೈಯಕ್ತಿಕ ದೌರ್ಬಲ್ಯದಿಂದ ತನ್ನ ಧರ್ಮದ ಎಲ್ಲೆಯನ್ನು ಮೀರಿದರೆ ಅವನು ಪಾಪಾತ್ಮನಾಗುವನು. ಇಲ್ಲಿ ವೈಯಕ್ತಿಕ ಆಯ್ಕೆಗೆ ಅವಕಾಶವಿರದು.

ಇನ್ನು ಕರ್ಮಸಿದ್ಧಾಂತ ದೃಷ್ಟಿಯಿಂದ ಜಾತಿ, ಧರ್ಮಾತೀತವಾಗಿ ಮಾಂಸಾಹಾರ ಪಾಪಕಾರಕ. ಏಕೆಂದರೆ ಒಂದು ಜೀವಿಯ ಬದುಕುವ ಹಕ್ಕನ್ನು ಕಿತ್ತುಕೊಂಡಂತೆ ಆಗುವುದು. ಮಾಂಸಾಹಾರ ಮಾಡುವವರು ಇರುತ್ತಾರೆ; ಬೇಡಿಕೆ ಇದೆ ಎಂದು ಪ್ರಾಣಿಗಳನ್ನು ಕೊಲ್ಲಲಾಗುವುದು. ಜೀವಿಯನ್ನು ಕೊಂದಾಗ ಬರುವ ಪಾಪ ಕೊಂವನಿಗೆ, ತಿಂದವನಿಗೆ ಉಭಯತರಿಗೂ ಹಂಚಿಕೆಯಾಗುವುದು. ಬುದ್ಧನು ಹೇಳುವಂತೆ, ''ಯಾರಿಗೆ ಜೀವವನ್ನು ಸೃಷ್ಟಿಸುವ ಶಕ್ತಿ ಇಲ್ಲವೋ ಅವರಿಗೆ ಜೀವವನ್ನು ಕೊಲ್ಲುವ ಹಕ್ಕು ಇಲ್ಲ.''

ದೇವರು ಮಾನವನಿಗೆ ಬದುಕಲು ಬೇಕಾಗುವ ದವಸ - ಧಾನ್ಯ, ಹಣ್ಣು - ತರಕಾರಿ ಮುಂತಾಗಿ ಸೃಷ್ಟಿ ಮಾಡಿರುವಾಗ ಅದನ್ನು ಉಪಯೋಗಿಸಿಕೊಳ್ಳುವುದು ಬಿಟ್ಟು ಇನ್ನೊಂದು ಪ್ರಾಣಿಯ ವಧೆಯನ್ನೇಕೆ ಮಾಡಬೇಕು ?

ಈ ಎಲ್ಲ ಚಿಂತನೆಯ ಹಿನ್ನೆಲೆಯಲ್ಲಿ ಸಸ್ಯಾಹಾರಿ ಜೀವನ ಪದ್ಧತಿಯನ್ನು ಸಡಲಿಸಲು ನನ್ನ ಅಂತರಾತ್ಮ ಒಪ್ಪುತ್ತಿಲ್ಲ.

ಶ್ರೇಷ್ಠ ಧರ್ಮ ಬೇಕೋ / ದೊಡ್ಡ ಧರ್ಮ ಬೇಕೋ ?

ಲಿಂಗಾಯತ ಧರ್ಮವು ಕರ್ನಾಟಕ ಮತ್ತು ನೆರೆಯ ರಾಜ್ಯಗಳನ್ನು ದಾಟಿ ಆಚೆ ಹೋಗಿಲ್ಲ. ಇದನ್ನು ವಿಶ್ವ ಧರ್ಮ ಎಂದು ಹೇಗೆ ಅನ್ನುವಿರಿ ? ಎಂದು ಕೆಲವರು ಪ್ರಶ್ನಿಸುತ್ತಾರೆ. ಒಂದು ಧರ್ಮವು ದೊಡ್ಡ ಧರ್ಮವಾಗುವುದು ಬೇರೆ, ವಿಶ್ವ (ಶೇಷ್ಠ) ಧರ್ಮವಾಗಿರುವುದು ಬೇರೆ. ಬಹಳ ಜನ ಸಂಖ್ಯೆ ಹೊಂದಿದ್ದರೆ ಅದು ದೊಡ್ಡ ಧರ್ಮ ಎನ್ನಬಹುದು. ಯಾವುದು ವಿಶ್ವಮಾನ್ಯ ತತ್ತ್ವಗಳನ್ನು ಹೊಂದಿರುವುದೋ ಅದು ವಿಶ್ವ ಧರ್ಮ.

1. ಯಾವುದು ಎಲ್ಲ ಮಾನವರಿಗೂ ಅನ್ವಯವಾಗುವ ತತ್ತ್ವಗಳನ್ನು ಬೋಧಿಸುವದೋ ಅದು ವಿಶ್ವ ಧರ್ಮ.
2. ಒಬ್ಬ ಸೃಷ್ಟಿಕರ್ತನನ್ನು ನಂಬುವುದು
3. ಎಲ್ಲ ಮಾನವರ ಸಮಾನತೆಯನ್ನು ಒಪ್ಪುವುದು
4. ಎಲ್ಲ ಮಾನವರಿಗೂ ಧರ್ಮ ಸಂಸ್ಕಾರ ಕೊಡಲು ಸಿದ್ಧವಿರುವುದು.

ಈ ಲಕ್ಷಣಗಳಿಂದ ಬಸವೋಕ್ತ ಲಿಂಗಾಯತ ಧರ್ಮವು ವಿಶ್ವ ಧರ್ಮ. ತಾತ್ತ್ವಿಕವಾಗಿ, ಸೈದ್ಧಾಂತಿಕವಾಗಿ ದೋಷಗಳು ಇಲ್ಲದಿರುವ ಕಾರಣ ಶ್ರೇಷ್ಠ ಧರ್ಮವೂ ಕೂಡ.

ಈಗ ಕೆಲವು ಸಮಯದಿಂದ ನನಗೆ ಒಂದು ಸಮಸ್ಯೆ ಕಾಡುತ್ತಿದೆ. ಅದೆಂದರೆ

1. ಲಿಂಗಾಯತ ಧರ್ಮವನ್ನು ಉಳಿಸಿಕೊಳ್ಳಬೇಕೊ ? ಅಥವಾ
2. ಲಿಂಗಾಯತ ಸಮಾಜವನ್ನು ಉಳಿಸಿಕೊಳ್ಳಬೇಕೋ ?

ಶರಣ. ಮುತ್ತರಾಯಪ್ಪನವರ ಪತ್ರ ಬಂದ ಮೇಲೆ ಇನ್ನೊಂದು ಪ್ರಶ್ನೆಯೂ ಏಳುತ್ತಲಿದೆ. ಅದೆಂದರೆ ಲಿಂಗಾಯತವನ್ನು ಒಂದು ಶ್ರೇಷ್ಠ ಧರ್ಮವಾಗಿ ಬೆಳೆಸಬೇಕೊ? ಒಂದು ಆದರ್ಶ ಮಾದರಿ ಧರ್ಮವಾಗಿ ಉಳಿಯಬೇಕಾದರೆ ಸಸ್ಯಾಹಾರಿ ಜೀವನ ಪದ್ಧತಿಯನ್ನು ಕೈಬಿಡಬಾರದು. ದೊಡ್ಡ ಧರ್ಮವಾಗಿ ಬೆಳೆಸಬೇಕಾದರೆ ಮಾಂಸಾಹಾರಿ ಜೀವನ ಪದ್ಧತಿಯನ್ನು ರೂಢಿಸಬೇಕು !! ಪ್ರಧಾನಿ ಮನಮೋಹನ ಸಿಂಗ್ ಅವರ ಸಿಖ್ ಧರ್ಮ ಕ್ಷತ್ರಿಯ ಜಾತ ಗುರುನಾನಕರಿಂದ ಹುಟ್ಟಿದ್ದು. ಅಲ್ಲಿ ಆಹಾರ ನಿರ್ಬಂಧವಿಲ್ಲ. ಆದರೆ ಯಾವ ಗುರುದ್ವಾರದಲ್ಲೂ ಮಾಂಸಾಹಾರವಿಲ್ಲ, ಅಲ್ಲೆಲ್ಲ ಶುದ್ಧ ಸಸ್ಯಾಹಾರ. ಪ್ರಧಾನಿ ಮನಮೋಹನ ಸಿಂಗರು ಶುದ್ಧ ಸಸ್ಯಾಹಾರಿ. ಮಾಜಿ ರಾಷ್ಟ್ರಪತಿ ಅಬ್ದುಲ್ ಕಲಾಂ ಶುದ್ಧ ಸಸ್ಯಾಹಾರಿ. ಅವರಿರುವವರೆಗೆ ರಾಷ್ಟ್ರಪತಿ ಭವನದಲ್ಲಿ ಮೊಟ್ಟೆಯನ್ನು ಸಹ

ತರಗೊಟ್ಟಿರಲಿಲ್ಲ. ಇಂಗ್ಲೆಂಡ್ ಅಮೇರಿಕಾಗಳಲ್ಲಿ ಈಗ ಸಸ್ಯಾಹಾರಿ ಕ್ಲಬ್‌ಗಳು, ಹೋಟೆಲ್‌ಗಳು ವೃದ್ಧಿಯಾಗುತ್ತಿವೆ. ಹೀಗೆ ಪ್ರಾಜ್ಞರು , ಪ್ರೌಢರು ಸಸ್ಯಾಹಾರಕ್ಕೆ ಒಲಿಯುತ್ತಿರುವಾಗ ನಾವು ಯಾವುದೋ ಭ್ರಮೆಗೊಳಗಾಗಿ - ಬಹಳ ಜನ ಮಾಂಸಾಹಾರಿ ಜಾತಿಗಳವರು ಬಂದು ಸೇರುವರೆಂದು, ಸೈದ್ಧಾಂತಿಕವಾಗಿ ಸಸ್ಯಾಹಾರಿ ಪದ್ಧತಿಯನ್ನು ಸಡಲಿಸುವುದು ಸರಿಯಾದೀತೆ? ಗುರು ಬಸವಣ್ಣನವರ ಮೂಲ ಸಿದ್ಧಾಂತಕ್ಕೆ ಚ್ಯುತಿ ತರುವ ತಿದ್ದುಪಡಿ ಮಾಡಲು ನಮಗೆ ಹಕ್ಕಿದೆಯೆ? (ಕೂಡಲ ಸಂಗಮದೇವ ವಚನಾಂಕಿತ ಬದಲಾಯಿಸಿ ಲಿಂಗದೇವ ಮಾಡಿರುವುದು ಸೈದ್ಧಾಂತಿಕ ಖಚಿತತೆಗೆ, ಗುರು ಬಸವಣ್ಣನವರ ತತ್ತ್ವ ಸಿದ್ಧಾಂತಗಳನ್ನು ಇನ್ನಷ್ಟು ಪ್ರಖರಗೊಳಿಸಲು)

ಈಗ ಜನರ ಚಿಂತನ 'ಶೈಲಿ ಬದಲಾಗಿದೆ. ಸೆಪ್ಟಂಬರ್ 11ರ ಅವಗಡದ ನಂತರ ಅಮೇರಿಕಾದಲ್ಲಿ ಜನರ ಧಾರ್ಮಿಕ ಶ್ರದ್ಧೆ ಜಾಸ್ತಿಯಾಗಿ ಮೊದಲು ಬಿಕೋ ಅನ್ನುತ್ತಿದ್ದ ಚರ್ಚ್‌ಗಳು ಈಗ ತುಂಬಿ ತುಳುಕುತ್ತಿದ್ದರೆ ನಮ್ಮ ದೇಶದಲ್ಲಿ ವಿದ್ಯಾವಂತರು ಪ್ರವಚನ ಕೇಳುವುದರಲ್ಲಿ, ಪೂಜೆ - ಪ್ರಾರ್ಥನೆಗಳಲ್ಲಿ ಆಸಕ್ತಿ ಕಳೆದುಕೊಳ್ಳುತ್ತಿದ್ದಾರೆ. 1970 ರಿಂದ 90 ರವರೆಗಿನ ಅವಧಿಯಲ್ಲಿ ಜನರ ಧಾರ್ಮಿಕ ಆಸಕ್ತಿ ಎಷ್ಟಿತ್ತೋ ಅದೀಗ ಕುಂದುತ್ತಿದೆ. ಜನರು ತುಂಬಾ ಲೌಕಿಕರಾಗುತ್ತಿದ್ದಾರೆ. ಸರ್ಕಾರಗಳು ಜಾತಿ, ಉಪಜಾತಿಗಳನ್ನು ವಿಂಗಡಿಸಿ ಸವಲತ್ತು ಕೊಡುತ್ತಿರುವುದರಿಂದ ಸವಲತ್ತುಗಳಿಗಾಗಿ ತುಂಬಾ ಸಣ್ಣಮನಸ್ಸಿನವರಾಗುತ್ತಿದ್ದಾರೆ, ಅಲ್ಪಾಕಾಂಕ್ಷಿಗಳಾಗುತ್ತಿದ್ದಾರೆ. ಇಂಥ ಸಂದರ್ಭದಲ್ಲಿ ಧರ್ಮ ಸ್ವೀಕಾರದ ಹಂಬಲ ಎಷ್ಟು ಜನರಲ್ಲಿ ಮೂಡುತ್ತದೆ?

ಕ್ರೈಸ್ತ ಮಿಷನರಿಗಳಿಗೆ ಹಣವು ಪ್ರವಾಹದಂತೆ ಹರಿದು ಬರುವುದರಿಂದ ಆಮಿಷವೂ ಅಷ್ಟೇ ಜೋರಾಗಿರುತ್ತದೆ. ಕೈ ತುಂಬ ಹಣವು ಪ್ರಚಾರಕರಿಗೆ ಸಿಗುವುದರಿಂದ ಅಷ್ಟೇ ವೈವಿಧ್ಯಮಯ ವಾಗಿರುತ್ತದೆ. ಇಸ್ಲಾಂ ಪ್ರಚಾರ, ಸಂಘಟನೆ (ಮತ್ತು ಭಯೋತ್ಪಾದನೆಗೂ ಸಹ) ಗಾಗಿಯೂ ವಿಪುಲವಾಗಿ ಹಣವು ಹರಿದು ಬರುತ್ತದೆ. ಈ ದಾಳಿಯಲ್ಲಿ ನಮ್ಮವರನ್ನು ರಕ್ಷಿಸಿಕೊಳ್ಳುವುದು ಕಷ್ಟಸಾಧ್ಯದ ಮಾತಾಗಿರುವಾಗ ಇನ್ನು ಹೊಸಬರನ್ನು ಆಕರ್ಷಿಸುವ ಸಾಧ್ಯತೆ ಎಷ್ಟಿರಬಹುದು. "ಮಾಂಸಾಹಾರಕ್ಕೆ ಅನುಮತಿ ನೀಡುವುದರಿಂದ ಶುಚಿಯಾಗಿರುವ ಈಗಿನ ಕೆಲವು ಜನರನ್ನು ಕೆಡಿಸಿ, ಹೊಸಬರನ್ನು ನಿರೀಕ್ಷಿಸುವುದು ವಿವೇಕಯುಕ್ತವಾದೀತೆ?" ಎಂಬುದು ನನ್ನ ಚಿಂತೆ .

ಬಸವಾಯತ ದೀಕ್ಷೆ

ಅಂದು ಬಸವಣ್ಣನವರು ಅಪಾರ ಕಳಕಳಿಯಿಂದ ಎಲ್ಲ ಜಾತಿ ಮತ ಪಂಥ ವರ್ಣಗಳವರಿಗೆ ಧರ್ಮಸಂಸ್ಕಾರ ಸಿಗಲು ಹೋರಾಟ ಮಾಡಿದರು. ಮತ್ತು ಅವರಿರುವ ಸ್ಥಿತಿಯಿಂದ ಉತ್ಥಾನಗೊಳ್ಳಬೇಕೆಂದು ಸುಧಾರಿಸಿದ, ಸುಸಂಸ್ಕೃತ, ಆಚಾರ ಸಂಪನ್ನ ಧರ್ಮವನ್ನು ಕೊಟ್ಟರು. ವ್ಯಕ್ತಿಯು ಧರ್ಮಾಂತರಗೊಂಡಾಗ ಮೊದಲಿನ ಸ್ಥಿತಿಯಿಂದ ಸುಧಾರಿಸಿದ ಸ್ಥಿತಿಗೆ ಹೋಗಬೇಕೆಂದು ಎಲ್ಲರನ್ನೂ ಶರಣರನ್ನಾಗಿ ಮಾಡಿದರು. ಆಗ ಅವರು ಇಷ್ಟಲಿಂಗವನ್ನು ಕೊಟ್ಟಾಗ ಧನ್ಯತಾಭಾವದಿಂದ ಎಲ್ಲರೂ ಸ್ವೀಕರಿಸಿದರು. ದೀಕ್ಷಿತರಿಗೆ ಸಿಕ್ಕಿದ ಅಮೂಲ್ಯ ನಿಧಿಯಾಗಿತ್ತು ಆ ಇಷ್ಟಲಿಂಗ . ಜಾತಿಯ ಅಡ್ಡಗೋಡೆ ಕೆಡವಿ, ಪುರೋಹಿತಶಾಹಿಯ ಬಲುಹನ್ನು ಮುರಿದು, ಗುಡಿ ಸಂಸ್ಕೃತಿಯ ಶ್ರೀಮಂತ ಶಾಹಿಯನ್ನು ಬಯಲಿಗೆಳೆದು ಎಲ್ಲರಿಗೂ ಪರಮಾತ್ಮನ ಕರುಣೆಯನ್ನು ಹರಿಸಿತು ಇಷ್ಟಲಿಂಗ.

ಆದರಿಂದು ಲಿಂಗಾಯತರಿಗೆ ಇಷ್ಟಲಿಂಗ ಬಲುಭಾರವಾಗಿದೆ. ಜಾತಿಯಿಂದ ಲಿಂಗಾಯತರು ಎಂದುಕೊಳ್ಳುವರೇ ವಿನಾ ಈ ಧರ್ಮದ ಮೂಲ ಉದ್ದೇಶ, ಇಷ್ಟಲಿಂಗದ ಮಹತ್ತ್ವ ತಿಳಿಯುತ್ತಲಿಲ್ಲ. ಇಂಥ ವಿಲಕ್ಷಣ ಪರಿಸ್ಥಿತಿಯಲ್ಲಿ ಹೊಸದಾಗಿ ಬರಬೇಕು ಎನ್ನುವವರು ಎಷ್ಟರ ಮಟ್ಟಿಗೆ ಇಷ್ಟಲಿಂಗಧಾರಣೆ ಮಾಡಿಕೊಳ್ಳುವರು ? ಇನ್ನು ಸ್ವಯಂ ಪ್ರೇರಣೆಯಿಂದ, " ತಮ್ಮ ಜೀವನವನ್ನು ಪಾವನ ಮಾಡಿಕೊಳ್ಳಬೇಕು. ದೇವರ ಪೂಜೆ ಮಾಡುವ ಭಾಗ್ಯ ಪಡೆದುಕೊಳ್ಳಬೇಕು." ಎನ್ನುವವರು ಎಲ್ಲ ತ್ಯಾಗಕ್ಕೂ ಸಿದ್ಧ. ಮಾಂಸಾಹಾರ, ಮದ್ಯಪಾನ ಬಿಟ್ಟು ಇಷ್ಟಲಿಂಗ ಧಾರಣೆಗೆ ತುದಿಗಾಲ ಮೇಲೆ ನಿಂತಿರುವರು.

ಇವನ್ನೆಲ್ಲ ಚಿಂತಿಸಿ ನಾನು ಕಂಡುಕೊಂಡಿರುವ ಮಧ್ಯಂತರ ಪರಿಹಾರವೇನೆಂದರೆ ಬಸವಾಯತ ದೀಕ್ಷಾಸ್ವೀಕಾರ. ಅವರ ಆಹಾರ ಪದ್ಧತಿಗೆ ಸ್ವಾತಂತ್ರ್ಯ ನೀಡಿ, ಬಸವಾಯತ ದೀಕ್ಷೆಯನ್ನು ಕೊಡುವುದು. ಅವರು ನಿತ್ಯವೂ ಜಪ, ಬುದ್ಧ ಪೂಜೆಯಂತೆ ಬಸವಾರ್ಚನೆ ಮಾಡಿ ತೀರ್ಥ ಪ್ರಸಾದ ಸ್ವೀಕರಿಸುವುದು. ತಮ್ಮನ್ನು ತಾವು (ಪೂರ್ವ ಜಾತಿಯಿಂದ ಗುರುತಿಸಿಕೊಳ್ಳದೆ) ಬಸವಾಯತ

(Basavayat) , ಬಸವ ಧರ್ಮಿ ಎಂದು ಕರೆದು ಕೊಳ್ಳವುದು. ನಂತರ ಯಾವಾಗ ಮಾಂಸಾಹಾರ ಬಿಟ್ಟು ಬಿಡಲು ಆತ್ಮವಿಶ್ವಾಸ ತಳೆವರೋ ಆಗ ಇಷ್ಟಲಿಂಗಧಾರಣೆ ಮಾಡಿಕೊಂಡು ಲಿಂಗಾಯತರಾಗುವುದು.

ಈ ಲೇಖನಕ್ಕೆ ಶ್ರೀ ಮುತ್ತರಾಯಪ್ಪನವರ ಪ್ರತಿಕ್ರಿಯೆ ನಿರೀಕ್ಷಿಸುತ್ತೇನೆ.

ಧರ್ಮ ಪ್ರಚಾರದ ಕಳಕಳಿ

ಕ್ರೈಸ್ತರು ಹಗಲಿರುಳು ಚರ್ಚಿನಲ್ಲಿ ಮಾತ್ರವಲ್ಲ ಅವರು ಕೆಲಸ ಮಾಡುವ ಆಫೀಸ್‌ಗಳಲ್ಲಿ ಸಹ ತಮ್ಮ ಧರ್ಮದ ಬಗ್ಗೆ ಹೇಳಿ, ಚರ್ಚಿಗೆ ಜನರನ್ನು ಕರೆಯುತ್ತಾರೆ. ಪ್ರತಿಯೊಬ್ಬರೂ ಮತಾಂತರದ ಬಗ್ಗೆ ಆಸಕ್ತಿ ಹೊಂದಿದ್ದಾರೆ. ಅದೇ ನೀವು ಪ್ರತಿಯೊಬ್ಬರೂ ಎಲ್ಲ ಜಾತಿ ಮತ ಪಂಥಗಳವರನ್ನು ಬಸವ ಮಂಟಪಕ್ಕೆ ಕರೆತರಲು, ಮಂತ್ರೋಪದೇಶ ಪಡೆಯಲು ಜೀವನವನ್ನು ಪಾವನವನ್ನಾಗಿ ಮಾಡಿಕೊಳ್ಳಲು ಪ್ರೇರಣೆ ನೀಡಬೇಕು.

ಸಂಪಾದಕೀಯ -3

ಹೊಟ್ಟೆಗೆ ಹಿಟ್ಟಿಲ್ಲದಿದ್ದರೂ ಜುಟ್ಟಿಗೆ ಮಲ್ಲಿಗೆ ಹೂವು

ಇದೊಂದು ಗಾದೆ ಹಳೆ ಮೈಸೂರಿನಲ್ಲಿ ಪ್ರಚಲಿತ. ಮನೆಯಲ್ಲಿ ಹೊಟ್ಟೆಗೆ ಉಣ್ಣಲಿಕ್ಕೆ ಇಲ್ಲದಿದ್ದರೂ ಹೊರಗಡೆ ತಮ್ಮ ಆಡಂಬರ ಪ್ರದರ್ಶಿಸುವಂತೆ ಮುಡಿಗೆ ಮಲ್ಲಿಗೆ ಏರಿಸಿಕೊಂಡು ಕೆಲವು ಹೆಂಗಳೆಯರು ಓಡಾಡುವುದುಂಟು. ಅದೇ ರೀತಿ ಕೋಟಿ ವೀರರಾದ ಸನ್ಮಾನ್ಯ ಮುಖ್ಯಮಂತ್ರಿ ಶ್ರೀ. ಬಿ.ಎಸ್. ಯಡೆಯೂರಪ್ಪನವರ ಔದಾರ್ಯದ ವೈಖರಿ. "ಬೆಂಗಳೂರು ಹಬ್ಬ" ಎಂಬ ಒಂದು ಉತ್ಸವಕ್ಕೆ ಸರ್ಕಾರದಿಂದ ಎರಡೂವರೆ ಕೋಟಿ ರೂಪಾಯಿ ಸಹಾಯ ಧನ ಕೊಡುವ ಹೇಳಿಕೆ ಓದಿ ನಾನಂತೂ ಗಾಬರಿಯಾಗಿ ಕುಳಿತುಬಿಟ್ಟೆ. ಅವರ ಬಾಯಲ್ಲಿ ಸಾವಿರ, ಲಕ್ಷ ಇಲ್ಲವೇ ಇಲ್ಲ ಎಲ್ಲ ಕೋಟಿಗಟ್ಟಳೆಯ ಮಾತುಗಳೆ!

ಕರ್ನಾಟಕ ರಕ್ಷಣಾ ವೇದಿಕೆಯವರು ಮತ್ತು ಇನ್ನೂ ಅನೇಕ ಕನ್ನಡ ಪರ ಸಂಘಟನೆಗಳು ತೀವ್ರವಾಗಿ ವಿರೋಧಿಸಿದ್ದರಿಂದ ಇದನ್ನು ಮುಂದೂಡಲಾಗಿದೆ ಎಂದು ಇಂದು (5-12-2008)ಪತ್ರಿಕೆಗಳಲ್ಲಿ ವರದಿಯಾಗಿದೆ. ಬೆಂಗಳೂರು ಹಬ್ಬ ಒಂದು ಖಾಸಗಿ ಸಂಸ್ಥೆಯ, ಪಾಶ್ಚಿಮಾತ್ಯ ಸಂಸ್ಕೃತಿಯ ಉತ್ಸವ. ಇದಕ್ಕೆ ಸರ್ಕಾರ ಏಕೆ ಸಹಾಯ ಧನ ಕೊಡಬೇಕು? ಅನುತ್ಪಾದಕ ವೆಚ್ಚಗಳಿಗೇ ಹಣ ಸುರಿಯುತ್ತ ಹೋಗುವುದು ಮುತ್ಸದ್ದಿತನವೆ? ದಸರಾ ಉತ್ಸವಕ್ಕೆ ಕೋಟಿಗಟ್ಟಳೆ ಕೊಡುವರು. ಅದರಿಂದ ವಾಪಸ್ಸು ಬೊಕ್ಕಸಕ್ಕೆ ಬಂದುದು ಎಷ್ಟು ? ಬೆಂಗಳೂರು ಹಬ್ಬದಂತಹವಕ್ಕೆ ಸರ್ಕಾರದಿಂದ ಹಣ, ಉತ್ಸವದಿಂದ ಬಂದ ಲಾಭ ಮಾತ್ರ ಖಾಸಗಿ ಸಂಸ್ಥೆಗಳಿಗೆ ; ಎಂತಹ ವಿಲಕ್ಷಣ ಯೋಜನೆ !

ಪಟ್ಟದ ಕಲ್ಲು ಉತ್ಸವ, ಐಹೊಳೆ ಉತ್ಸವ ಇತ್ಯಾದಿ ಮಾಡಿ ಆಶಾ ಭೋಂಸ್ಲೆ ಮುಂತಾದ ಹಿಂದಿ ಗಾಯಕರು, ಕಥಕ್ಕಳಿ, ಒಡಿಸ್ಸಿ, ಭರತನಾಟ್ಯ ಮಾಡುವವರನ್ನು ಕರೆಸುತ್ತಾರೆ. ಬಾದಾಮಿ, ಪಟ್ಟದಕಲ್ಲು, ಐಹೊಳೆಗಳಿಗೆ ಮೂಲಭೂತ ಸೌಲಭ್ಯಗಳಿಲ್ಲ, ಗಣ್ಯರಿಗೆ ವಾಸ್ತವ್ಯಕ್ಕೆ ಅನುಕೂಲತೆಯಿಲ್ಲ. ಸ್ಥಳೀಯ ಜನರು ಗ್ರಾಮೀಣ ಸಂಸ್ಕೃತಿಯವರು. ಜನಪದ ಸಂಸ್ಕೃತಿಯ ನೃತ್ಯ, ಸಂಗೀತಗಳನ್ನು, ನಾಟಕಗಳನ್ನು ಕಂಡು ಹರ್ಷಿಸುವರು. ಸ್ಥಳೀಯರು, ಕನ್ನಡದ ಕಲಾವಿದರನ್ನು ಕರೆಸಿದರೆ ಖರ್ಚೂ ಕಡಿಮೆ ಜನರಿಗೆ ಸಂತೋಷವಾಗುವುದು. ಸ್ಥಳೀಯ ಪ್ರತಿಭೆಗಳ ಪ್ರದರ್ಶನಕ್ಕೆ ಅವಕಾಶವೂ ಸಿಕ್ಕುವುದು. ಕಳೆದ ವರ್ಷ ಬಂದಿದ್ದ ಹೇಮಾಮಾಲಿನಿಯಂತಹ ಬಾಲಿವುಡ್ ತಾರೆ ಇಲ್ಲಿಯ ರಸ್ತೆ ಮತ್ತು ವ್ಯವಸ್ಥೆ ಬಗ್ಗೆ ಛೀಮಾರಿ ಹಾಕಿ ಹೋದರು. ಈ ವರ್ಷ ಬಂದಿದ್ದ ಆಶಾ ಭೋಂಸ್ಲೆ ಅಷ್ಟೆ ಚೆನ್ನಾಗಿ ಬೈದು ಹೋದರು. ಬೆಂಗಳೂರು ನಗರದ ಹೊಟ್ಟೆ ತುಂಬಿದ ಪ್ರೇಕ್ಷಕರು ನೋಡಿ ಸಂತೋಷ ಪಡುವ ಹಿಂದಿ, ಒಡಿಸ್ಸಿ ತಾರೆಯರ ನೃತ್ಯಗಳು ಪಟ್ಟದ ಕಲ್ಲು, ಬಾದಾಮಿ, ಐಹೊಳೆ ಜನರಿಗೆ ತೃಪ್ತಿ ನೀಡಬಲ್ಲವೆ ?

ರಾಜಕಾರಣಿಗಳ ತೃಪ್ತಿಗೋ, ಅಧಿಕಾರಿಗಳ ಮನರಂಜನೆಗೋ ಅಥವಾ ತನ್ಮೂಲಕ ಸರ್ಕಾರಿ ಹಣವನ್ನು ಒಳದಾರಿಯ ಮೂಲಕ ಕೆಲವರ ಜೇಬು ತುಂಬಿಸಲೋ ಇಂಥ ಜುಟ್ಟಿಗೆ ಮಲ್ಲಿಗೆ ಹೂವು ಮುಡಿಸುವ ಆಲೋಚನೆಗಿಂತ ಮೊದಲು ಹೊಟ್ಟೆಗೆ ಹಿಟ್ಟು ಕೊಡುವ ಪ್ರಯೋಗ ಶೀಲ ಯೋಜನೆಗಳನ್ನು ಮುಖ್ಯಮಂತ್ರಿಗಳು ಕೇವಲ ರಾಜಕಾರಣಿಯಾಗಿ ಹಮ್ಮಿಕೊಳ್ಳದೆ ಒಬ್ಬ ಚಿಂತನಶೀಲ ಮುತ್ಸದ್ದಿಯಾಗಿ ಹಾಕಿಕೊಳ್ಳಲಿ ಎಂದು ನಿರೀಕ್ಷಿಸೋಣ !

ಜಗದ್ಗುರು ಮಾತೆ ಮಹಾದೇವಿಯವರಲ್ಲಿ ಒಂದು ಬಿನ್ನಹ

ಹನ್ನೆರಡನೆಯ ಶತಮಾನದಲ್ಲಿ ವಿಶ್ವಕ್ಕೆ ಅತಿ ಶ್ರೇಷ್ಠವಾದ ಲಿಂಗಾಯತ ಧರ್ಮವನ್ನು ಕೊಟ್ಟ ಗುರು ಬಸವಣ್ಣನವರು ಆಗಿನ ಮಾಂಸಾಹಾರಿಗಳಾಗಿದ್ದ ಎಲ್ಲರಿಗೂ ಲಿಂಗದೀಕ್ಷೆಯನ್ನು ಕೊಟ್ಟು ಪ್ರೋತ್ಸಾಹಿಸಿದ್ದರೆ ಅತಿ ಹೆಚ್ಚಿನ ಸಂಖ್ಯೆಯಲ್ಲಿದ್ದ ಶೂದ್ರರು, ಪಂಚಮರು, ದೀನ ದಲಿತರು ಮುಂತಾದವರು ಲಿಂಗಾಯತ ಧರ್ಮವನ್ನು ಸ್ವೀಕರಿಸಿ, ಗೊಂದಲಮಯವಾಗಿದ್ದ ಹಿಂದೂ ಧರ್ಮವನ್ನು ಹಿಂದೆ ಹಾಕಿ ಈ ಹೊತ್ತಿಗೆ ಜಗತ್ತಿನ ಅತಿ ದೊಡ್ಡ ಮಾಂಸಾಹಾರಿ ಧರ್ಮಗಳಾದ ಕ್ರಿಶ್ಚಿಯನ್ ಮತ್ತು ಇಸ್ಲಾಮ್ ಧರ್ಮಗಳಂತೆ ಭಾರತದಲ್ಲಿಯೂ ವಿಶ್ವದೆಲ್ಲೆಡೆಯೂ ಲಿಂಗಾಯತ ಧರ್ಮವು ದೊಡ್ಡ ಧರ್ಮವಾಗಿ ಬೆಳೆಯುತ್ತಿತ್ತೆಂದು ನನ್ನ ಅಭಿಪ್ರಾಯ.

ಗುರು ಬಸವಣ್ಣನವರ ನಂತರ ಲೆಕ್ಕವಿಲ್ಲದಷ್ಟು ಬಂದು ಹೋದ ಲಿಂಗಾಯತ ಮತ್ತು ವೀರಶೈವ ಗುರುಗಳು, ಆ ಧರ್ಮವನ್ನೇ ಸರಿಯಾಗಿ ಅರ್ಥಮಾಡಿಕೊಂಡು ಧರ್ಮ ಪ್ರಚಾರ ಮಾಡುವ ಸಾಮರ್ಥ್ಯವುಳ್ಳವರಾಗಿರಲಿಲ್ಲ. ಈ ಇಪ್ಪತ್ತನೇ ಶತಮಾನಕ್ಕಾದರೂ ಕೆಚ್ಚೆದೆಯ ಗುರು ಲಿಂಗಾನಂದ ಸ್ವಾಮಿಗಳು ಮತ್ತು ಅವರ ಶಿಷ್ಯರಾದ ಪ್ರಪ್ರಥಮ ಮಹಿಳಾ ಜಗದ್ಗುರುಗಳಾದ ತಾವು ಗುರು ಬಸವಣ್ಣ ಮತ್ತು ಅಕ್ಕಮಹಾದೇವಿಯವರ ಅಪರಾವತಾರವೆಂಬಂತೆ ಲಿಂಗಾಯತ ಧರ್ಮವನ್ನು ಪುನರುಜ್ಜೀವಗೊಳಿಸತೊಡಗಿದ್ದೀರಿ. ನಿಮ್ಮ "ಕಲ್ಯಾಣ ಕಿರಣ" ಮಾಸಿಕ ಪತ್ರಿಕೆಯಲ್ಲಿ ಪ್ರಕಟಿಸುತ್ತಿರುವ ಅತಿ ಶ್ರೇಷ್ಠವಾದ ಲಿಂಗಾಯತ ಧರ್ಮದ ಸಾರವನ್ನೂ, ಹಿಂದು ಧರ್ಮದ ತಿರುಳನ್ನೂ, ಪುರಾಣಗಳ ಪುಂಡಾಟಿಕೆಗಳನ್ನು ತಾವು ಸಮರ್ಥವಾಗಿ, ಆಧಾರ ಸಮೇತವಾಗಿ ಪ್ರಚುರ ಪಡಿಸುತ್ತಿದ್ದೀರಿ. ಈ ರೀತಿಯ ತಮ್ಮ ಸಾಧನೆಯನ್ನು ಇಲ್ಲಿಯವರೆಗೆ ಯಾವ ಲಿಂಗಾಯತ ಅಥವಾ ಇತರೆ ಗುರುವರ್ಯರಾಗಲಿ ಸಾಧಿಸಿಲ್ಲ. ತಮ್ಮ ಪ್ರವಚನ ಶೈಲಿಯೂ, ವಿಚಾರವಂತಿಕೆಯೂ ಅದ್ಭುತವೆ. ತಮ್ಮದು ನೇರ ನುಡಿ, ನೇರ ನಡೆ. ನಾನು ಸುಮಾರು ವರ್ಷಗಳಿಂದ ಎಲೆ ಮರೆಯ ಕಾಯಿಯಂತೆ ನಿಮ್ಮ ಅನೇಕ ಪ್ರವಚನಗಳನ್ನು ಆಲಿಸಿದ್ದೇನೆ. "ಕಲ್ಯಾಣ ಕಿರಣ" ಗಳನ್ನೂ ಓದುತಿದ್ದೇನೆ. ನಾನು ಜಾತಿಯಲ್ಲಿ ಒಕ್ಕಲಿಗ. ನನ್ನ ಬಿಚ್ಚು ಮನಸ್ಸಿನ ಅಭಿಪ್ರಾಯಗಳನ್ನು ತಮ್ಮ ಗಮನಕ್ಕೆ ತರಲಿಚ್ಛೆಸುತ್ತೇನೆ. ಲಿಂಗಾಯತ ಮತ್ತು ವೀರಶೈವ ಧರ್ಮೀಯರಿಗೆ ತಾವು ಗುರು ಪೀಠವನ್ನು ಸ್ವೀಕಾರ ಮಾಡಿದ ನಂತರ ತಮ್ಮ ಸಮರ್ಥ ಲಿಂಗಾಯತ ಧರ್ಮ ಬೋಧನೆಯಿಂದ ಅವರುಗಳನ್ನು ಅಪ್ಪಟ ಲಿಂಗಾಯತರನ್ನು ಮಾಡಲು ಎಲ್ಲಿಲ್ಲದ ಶ್ರಮ ಪಡುತ್ತಿದ್ದೀರಿ. ಆ ಮಂದಿ ಹಿಂದೂ ಧರ್ಮದ ದೇವರುಗಳನ್ನು ಮತ್ತು ಆಚಾರ - ವಿಚಾರಗಳನ್ನು ಬಿಡದೆ ಎರಡು ಕುದುರೆಗಳ ಸವಾರರಾಗಿದ್ದಾರೆ. ಹಿಂದೂ ಧರ್ಮವೆಂಬ ಹೆಬ್ಬಾವಿನ ಹೊಟ್ಟೆಯಲ್ಲಿ ಅಡಗಿರುವ ಹುಲ್ಲೆ ಮರಿಯಾದಂತಹ ಲಿಂಗಾಯತ ಧರ್ಮವನ್ನು ಅಲ್ಲಿಂದ ಪಾರುಮಾಡಲು ತಾವು ಎಷ್ಟು ಕಷ್ಟ ಪಟ್ಟರೂ ಸಾಧ್ಯವಿಲ್ಲದಂತಾಗಿದೆ. ಹೆಚ್ಚಿನ ಮಂದಿ ಲಿಂಗಾಯತರು ತಾವು ಲಿಂಗಾಯತರೆಂದು ದೀಕ್ಷೆ ಪಡೆದು , ಲಿಂಗ ಧರಿಸಿ ಲಿಂಗಾಯತ ಧರ್ಮದ ಸಾರವನ್ನು ಅರಿಯದೆ, ಹಿಂದೂ ದೇವತೆಗಳನ್ನು ಪೂಜಿಸುತ್ತಾ, ಕದ್ದೂ ಕಾಣದಂತೆ ಮಾಂಸಾಹಾರವನ್ನು ತಿನ್ನುತ್ತಾ, ಅನೇಕ ಸ್ವಧರ್ಮ ವಿರೋಧಿ ಕಾರ್ಯಗಳಲ್ಲಿ ತೊಡಗಿದ್ದಾರೆ. ಜಗತ್ತಿನ ಎಲ್ಲ ಧರ್ಮೀಯರಂತೆ ಅವರವರ ಧರ್ಮಗಳ ವಿಧಿವಿಧಾನಗಳನ್ನು ಅನುಸರಿಸದೆ ನೆಪಮಾತ್ರದ ಧರ್ಮೀಯರಂತೆ ಲಿಂಗಾಯತ ಧರ್ಮಾನುಯಾಯಿಗಳೂ ನಡೆದುಕೊಳ್ಳುತ್ತಿದ್ದಾರೆ. ಮಾಂಸಾಹಾರಿಗಳೆಲ್ಲಾ ಅಜ್ಞಾನಿಗಳೂ, ಕ್ರೂರಿಗಳೂ, ದುಷ್ಟರೂ, ಪಾಪಿಷ್ಟರೂ, ವಂಚಕರೂ, ಅನಾಗರಿಕರೂ, ನಾಸ್ತಿಕರೂ ಮತ್ತು ಅವಿಚಾರವಂತರೇನಲ್ಲ. ಸಸ್ಯಾಹಾರಿಗಳೆಲ್ಲಾ ಜ್ಞಾನಿಗಳೂ , ಸತ್ಯವಂತರೂ, ಸದ್ಭಕ್ತರೂ, ವಿಚಾರವಂತರೂ, ಸಚ್ಚಾರಿತ್ರರೂ, ಆಸ್ತಿಕರೂ, ಸದಾಚಾರಿಗಳೂ ಅಲ್ಲ. ಭಗವಂತನ ಸೃಷ್ಟಿಯಲ್ಲಿ "ಹಿಂಸೆ - ಅಹಿಂಸೆ" ಎಂಬುದು ಒಂದು ನಾಣ್ಯದ ಎರಡು ಮುಖಗಳಂತೆ ಹಾಸುಹೊಕ್ಕಾಗಿದೆ. ಮಾಂಸಾಹಾರವನ್ನು ಪುರಾತನ ಜೈನ ಧರ್ಮ ಮತ್ತು ಲಿಂಗಾಯತ ಧರ್ಮಗಳಲ್ಲಿ ಸಂಪೂರ್ಣವಾಗಿ ನಿಷೇಧಿಸಲಾಗಿದೆ. ಈ ಕಾರಣ ಒಂದರಿಂದಲೇ ಈ ಎರಡೂ ಧರ್ಮಗಳೂ ಪ್ರಪಂಚದಲ್ಲಿ ಅತಿ ಸಣ್ಣ ಧರ್ಮಗಳಾಗಿಯೇ ಉಳಿದಿವೆಯೇ ವಿನಾ ದೊಡ್ಡದಾಗಿ ಬೆಳೆಯಲಾರವು. ಕೋಟ್ಯಾಂತರ ಶೂದ್ರರೂ , ಪಂಚಮರೂ, ದೀನದಲಿತರೂ ಮುಂತಾದವರು ಇಲ್ಲಿಯವರೆಗೂ ಬರೀ ನಾಮಕಾವಸ್ತೆ ಹಿಂದೂಗಳಾಗಿ ಸೊಂಟಕ್ಕೊಂದು ಉಡಿದಾರವನ್ನು ಮಾತ್ರ ಕಟ್ಟಿಕೊಂಡು, ತಾವು ಹಿಂದೂಗಳೆಂದು ಎದೆಯುಬ್ಬಿಸಿ ಹೇಳಿಕೊಳ್ಳುವಂತಹ ಯಾವ ಅಧಿಕೃತವಾದ ಹಿಂದೂ ದೀಕ್ಷೆಯನ್ನು ಅವರ ಚಿಲ್ಲರೆ ಗುರುಗಳು ಕೊಟ್ಟೂ ಇಲ್ಲ ಇವರು ಸ್ವೀಕರಿಸಿಯೂ ಇಲ್ಲ.

ಈಗಲೂ ಕಾಲ ಮಿಂಚಿಲ್ಲ, ತಾವು ಆಳವಾಗಿ ಚಿಂತನೆ ಮಾಡಿ ನಿರ್ಧರಿಸಿ, ಕಾಲ ಬದಲಾದಂತೆ ಭಾರತದ ಕೊಟ್ಯಾಂತರ ಶೂದ್ರರಿಗೂ , ಪಂಚಮರೂ, ದೀನದಲಿತರೂ ಮುಂತಾದ ಮಾಂಸಾ

ಹಾರಿಗಳಿಗೆ ವಿಶ್ವದ ಅತಿ ಶ್ರೇಷ್ಠವಾದ ಲಿಂಗಾಯತ ಧರ್ಮ ದೀಕ್ಷೆ ಕೊಡಲು ಏಕೆ ಪ್ರಯತ್ನಿಸಬಾರದೆಂದು ತಮ್ಮನ್ನು ಕಳಕಳಿಯಿಂದ ಬಿನ್ನೈಸಿಕೊಳ್ಳುತ್ತೇನೆ.

- ಸಿ.ಮುತ್ತರಾಯಪ್ಪ
ನಂ.24, 5ನೇ 'ಎ' ಅಡ್ಡರಸ್ತೆ, ಸುಬ್ಬಣ್ಣ ಗಾರ್ಡನ್,
ವಿಜಯನಗರ, ಬೆಂಗಳೂರು -40

"ಮಹಾದೇವಿಯಕ್ಕ ಪ್ರಿಯ ಲಿಂಗದೇವ' ಇದು ವಚನಾಂಕಿತಕ್ಕೆ ನೀಡಿದ ಅರ್ಥವೇ ಹೊರತು ವಚನಾಂಕಿತ ಬದಲಾವಣೆಯಲ್ಲ.

-ಶರಣ ಸಚ್ಚಿದಾನಂದ

ಅಕ್ಕಮಹಾದೇವಿ ತಾಯಿ ಜನಿಸಿದ್ದು ಓಂಕಾರ ಮತ್ತು ಲಿಂಗಮ್ಮ ಎನ್ನುವ ಶೈವ ದಂಪತಿಗಳ ಉದರದಲ್ಲಿ. ಬಾಲ್ಯದಲ್ಲಿ ಯೋಗಿ ಶಿವನ ಆರಾಧನೆಯಲ್ಲಿ ತೊಡಗಿಸಿಕೊಂಡ ಅಕ್ಕಮಹಾದೇವಿಯವರು, ತಮ್ಮ ಊರಿನಲ್ಲೇ ಇರುವ ಚೆನ್ನಮಲ್ಲಿಕಾರ್ಜುನ ದೇವಸ್ಥಾನದೊಡನೆ ನಿಕಟ ಭಕ್ತಿಯನ್ನು ಹೊಂದಿದರು. ಅಕ್ಕಮಹಾದೇವಿಯವರಿಗೆ ಗುರುಲಿಂಗದೇವರಿಂದ ಲಿಂಗದೀಕ್ಷೆಯಾದ ಮೇಲೆ ಗುರು ಬಸವಣ್ಣನವರ ವಚನಗಳನ್ನು ಅಕ್ಕ ಹೆಚ್ಚು ಹೆಚ್ಚು ಓದುತ್ತಾ ಹೋದರು, ಜೊತೆಗೆ ಲಿಂಗಯೋಗ ಸಾಧನೆಯಲ್ಲಿ ತೊಡಗಿಸಿಕೊಂಡರು. ಬಾಲ್ಯದಲ್ಲಿ ಚನ್ನಮಲ್ಲಿಕಾರ್ಜುನನ ರೂಪದಲ್ಲಿ ದೇವರನ್ನು ಆರಾಧಿಸುತ್ತಿದ್ದ ಅಕ್ಕನಿಗೆ, ಲಿಂಗಯೋಗ ಮಾಡುತ್ತಾ ಹೋದಂತೆ ಒಮ್ಮೆ ಪರಮಾತ್ಮನ ಸಗುಣ ಸಾಕ್ಷಾತ್ಕಾರವು ಚೆನ್ನಮಲ್ಲಿಕಾರ್ಜುನನ ರೂಪದಲ್ಲಿ ಆಗುತ್ತದೆ. ಅಕ್ಕ ಅನುಭಾವ ಮಂಟಪಕ್ಕೆ ಬಂದ ಮೇಲೆ ಗುರು ಬಸವಣ್ಣನವರ ಮಾರ್ಗದರ್ಶನದಲ್ಲಿ ಇಷ್ಟಲಿಂಗಯೋಗದಲ್ಲಿ ತಲ್ಲೀನರಾಗಿ ಅವರು ಚೆನ್ನಮಲ್ಲಿಕಾರ್ಜುನ (ಶಿವ) ಮತ್ತು ಪರಮಾತ್ಮ (ಲಿಂಗದೇವರ)ರ ನಡುವೆ ಸ್ಪಷ್ಟವಾದ ವ್ಯತ್ಯಾಸವನ್ನು ಕಂಡುಕೊಳ್ಳುತ್ತಾರೆ. ಇದನ್ನು ಅಕ್ಕ ತಮ್ಮ ಕೆಲವು ವಚನಗಳಲ್ಲಿ ಪ್ರತಿಬಿಂಬಿಸಿದ್ದಾರೆ.

ಉದಯಾಸ್ತಮಾನವೆಂಬ ಎರಡು ಕೊಳಗದಲ್ಲಿ
ಆಯುಷ್ಯವೆಂಬ ರಾಶಿ ಅಳೆದು ತೀರದ ಮುನ್ನ
ಶಿವನ ನೆನೆಯಿರೆ ಶಿವನ ನೆನೆಯಿರೆ ಈ ಜನ್ಮ ಬಳಿಕಿಲ್ಲ
ಚನ್ನಮಲ್ಲಿಕಾರ್ಜುನ ದೇವರ ದೇವನ ನೆನೆದು
ಪಂಚ ಮಹಾ ಪಾತಕರೆಲ್ಲರೂ ಮುಕ್ತಿ ಪಡೆದರಂದು (ಶಿ.ವ.ಸಂ-82)

ಈ ವಚನದಲ್ಲಿ "ಚನ್ನಮಲ್ಲಿಕಾರ್ಜುನ ದೇವರ ದೇವನ" ಎನ್ನುವ ಮಾತಿನಲ್ಲಿ ಬಹುದೊಡ್ಡ ಅರ್ಥವಿದೆ. ಚನ್ನಮಲ್ಲಿಕಾರ್ಜುನ ದೇವರು ಎಂದರೆ ಶಿವ. ಶಿವನಿಗೂ ದೇವನೊಬ್ಬನಿದ್ದಾನೆ. ಅವನೇ ಪರಮಾತ್ಮ ಲಿಂಗದೇವರು ಎಂದು ಅರ್ಥ.

ಗಂಗೆಯೊಡನಾಡಿದ ಘಟ್ಟ ಬೆಟ್ಟಂಗಳು ಕೆಟ್ಟ ಕೇಡ ನೋಡಿರಯ್ಯಾ
ಅಗ್ನಿಯೊಡನಾಡಿದ ಕಾಷ್ಠಂಗಳು ಕೆಟ್ಟ ಕೇಡ ನೋಡಿರಯ್ಯಾ
ಜ್ಯೋತಿಯೊಡನಾಡಿದ ಕತ್ತಲೆ ಕೆಟ್ಟ ಕೇಡ ನೋಡಿರಯ್ಯಾ
ಜ್ಞಾನಿಯೊಡನಾಡಿದ ಅಜ್ಞಾನಿ ಕೆಟ್ಟ ಕೇಡ ನೋಡಿರಯ್ಯಾ
ಎಲೆ ಪರಶಿವ ಮೂರ್ತಿ ಹರನೆ ನಿಮ್ಮ ಜಂಗಮ
ಲಿಂಗದೊಡನಾಡಿ ಎನ್ನ ಭವಾದಿ ಭವಂಗಳು
ಕೆಟ್ಟ ಕೇಡ ನೋಡಾ ಚನ್ನಮಲ್ಲಿಕಾರ್ಜುನಾ (ಶಿ.ವ.ಸಂ -191)

ಈ ವಚನದಲ್ಲಿ ಅಕ್ಕ ಶಿವ ಮತ್ತು ಪರಶಿವರಲ್ಲಿ ಸ್ಪಷ್ಟವಾದ ವ್ಯತ್ಯಾಸವನ್ನು ತಿಳಿಸಿದ್ದಾರೆ. ಅಕ್ಕ ಅನುಭಾವ ಮಂಟಪಕ್ಕೆ ಬಂದು ಶರಣರೊಡನೆ ಒಡನಾಡಿದ ಬಳಿಕ ಬರೆದ ವಚನವಿದು. ಶಿವ ಎಂದರೆ ಯೋಗಿರಾಜ ಶಿವ. ಪರಶಿವ ಎಂದರೆ ನಿರಾಕಾರ ನಿರ್ಗುಣನಾದ ಲಿಂಗದೇವ ಎಂದು ಅರ್ಥಮಾಡಬಹುದು.

ಮಾತಾಜಿಯವರು ಆದಿ ಶರಣರ ಭಾವದಲ್ಲಿ ಭಾವವನ್ನು ಬೆರೆಸಿರುವ ಮಹಾನುಭಾವರು. ಅವರ ಜೀವನದ ಪ್ರತಿಕ್ಷಣವೂ ಬಸವ ತತ್ತ್ವಕ್ಕಾಗಿ ಮೀಸಲಿದೆ. ಹೀಗಾಗಿ ಅಕ್ಕಮಹಾದೇವಿಯವರ ವಚನಾಂಕಿತವಾದ ಚೆನ್ನಮಲ್ಲಿಕಾರ್ಜುನದ ಮುಂದೆ ಮಹಾದೇವಿಯಕ್ಕ ಪ್ರಿಯ ಲಿಂಗದೇವ ಎಂದು ವಿಶ್ಲೇಷಣೆಯನ್ನು ಕೊಟ್ಟಿದ್ದಾರೆಯೇ ಹೊರತು

ವಚನಾಂಕಿತವನ್ನು ಬದಲಾವಣೆ ಮಾಡಿಲ್ಲ. ಆದಿ ಶರಣರ ಸಂದೇಶಗಳಿಗೆ ವಿಶಿಷ್ಟವಾದ ಚೌಕಟ್ಟನ್ನು ಅಳವಡಿಸಿ ಲಿಂಗಾಯತ ಧರ್ಮವನ್ನು ವಿಶ್ವಧರ್ಮವನ್ನಾಗಿ ಮಾಡುವ ಪ್ರಯತ್ನದಲ್ಲಿ ಮಾತಾಜಿಯವರಿದ್ದಾರೆ. ಅದಕ್ಕಾಗಿ, ಒಂದು ವೇಳೆ ಅವರ ಸಂಶೋಧನೆಗಳು ನಮಗೆ ಅರ್ಥವಾಗದೇ ಹೋದರೆ ಸ್ವಲ್ಪ ಮೌನವಾಗಿರೋಣವೇ ಹೊರತು ಅವರ ಕಾರ್ಯಗಳಿಗೆ ಅಡ್ಡಿಪಡಿಸುವುದಾಗಲೀ ಅವರ ನಿಂದನೆಯನ್ನು ಮಾಡುವುದಾಗಲೀ, ಮಾಡಬಾರದು. ಇದರಿಂದ ಲಿಂಗದೇವನ ಅವಕೃಪೆಗೆ ಪಾತ್ರರಾಗಬೇಕಾಗುತ್ತದೆ. ಅದಕ್ಕಾಗಿ ನಮ್ಮಲ್ಲಿ ಶಕ್ತಿ ಸಾಮರ್ಥ್ಯವಿದ್ದರೆ ಪೂಜ್ಯ ಮಾತಾಜಿಯವರಿಗೆ ಪ್ರೋತ್ಸಾಹಿಸೋಣ ಇಲ್ಲದಿದ್ದರೆ ಮೌನವಾಗಿರೋಣವೆಂದು ವಿನಂತಿಸಿಕೊಳ್ಳುತ್ತೇನೆ.

ವಚನಗಳ ಶುದ್ಧೀಕರಣದ ಅವಶ್ಯಕತೆ

ಮದ್ಯಪಾನಿಗೆ ಲಿಂಗಸಾಹಿತ್ಯವ ಮಾಡಿದಾತ
ಹಿಂಗದೆ ನರಕದೋಲಾಡುತಿಪ್ಪನು.
ಮಾಂಸಾಹಾರಿಗೆ ಲಿಂಗಸಾಹಿತ್ಯವ ಮಾಡಿದಾತನ
ವಂಶ ಕ್ಷಯವೆಂದುದು.
ಜೂಜುಗಾರಂಗೆ ಲಿಂಗಸಾಹಿತ್ಯವ ಮಾಡಿದಾತ
ರೌರವ ನರಕಕ್ಕೆ ಹೋಹನು.
ಸೂಳೆಗೆ ಲಿಂಗಸಾಹಿತ್ಯವ ಮಾಡಿದಾತ
ಏಳೇಳು ಜನ್ಮದಲ್ಲಿ ಶ್ವಾನನ ಗರ್ಭದಲ್ಲಿ ಬರುತಿಪ್ಪನು.
ಅಂಗಹೀನಂಗೆ ಲಿಂಗಸಾಹಿತ್ಯವ ಮಾಡಿದಾತ ಲಿಂಗದ್ರೋಹಿ
ಆತನ ಮುಖವ ನೋಡಲಾಗದು.
..... ಇದು ಕಾರಣ ಕೂಡಲ ಚೆನ್ನಸಂಗಯ್ಯನಲ್ಲಿ ವಿಚಾರಿಸದೆ
ಲಿಂಗವ ಕೊಟ್ಟ ಗುರುವಿಂಗೆ ನರಕ ತಪ್ಪದು. (ಚ.ವ.ಸಂ-155)

ಕರ್ನಾಟಕ ಸರಕಾರ ಪ್ರಕಟಿಸಿರುವ ಚನ್ನಬಸವಣ್ಣನವರ ವಚನ ಸಂಪುಟದಲ್ಲಿ 155ನೇ ಸಂಖ್ಯೆಯಾಗಿ ಈ ವಚನ ಪ್ರಕಟಗೊಂಡಿದೆ. ಲಿಂಗಾಯತ ಧರ್ಮಸಂಹಿತೆಯ ಪ್ರಕಾರ ಪಾಪ ಕರ್ಮವ ಮಾಡಿದವನು ಒಮ್ಮೆ ಶರಣೆಂದರೆ ಅರ್ಥಾತ್ ತನ್ನ ಪಾಪ ಕರ್ಮಗಳಿಗೆ ಪಶ್ಚಾತಾಪ ಪಟ್ಟು, ಹೃದಯ ಪರಿವರ್ತನೆ ಮಾಡಿಕೊಂಡವನಿಗೆ ಧರ್ಮ ಸಂಸ್ಕಾರದ ಬಾಗಿಲು ತೆರೆದಿದೆ. ಹೀಗಾಗಿ ಮದ್ಯಪಾನಿ, ಮಾಂಸಾಹಾರಿ, ಜೂಜುಗಾರ, ಸೂಳೆ ಇವರೆಲ್ಲ ಈ ಎಲ್ಲಾ ದುಶ್ಚಟಗಳನ್ನು ಬಿಟ್ಟು ಪರಿವರ್ತನೆಗೊಂಡು ಬಂದಾಗ ಲಿಂಗ ದೀಕ್ಷೆ ಕೊಡಬೇಕು. "ಅಂಗಹೀನರಿಗೆ ಲಿಂಗಸಾಹಿತ್ಯವ ಮಾಡಿದಾತ ಲಿಂಗದ್ರೋಹಿ; ಆತನ ಮುಖವ ನೋಡಲಾಗದು" ಎನ್ನುವ ವಿಚಾರ ಶರಣರದ್ದಲ್ಲ. ಶರಣರು ಗುರು ಬಸವಣ್ಣನವರ ಹೃದಯಾಳದ ಭಾವನೆಗಳಿಗೆ ಎಂದೂ ವಿರುದ್ಧವಾಗಿ ನಡೆದವರಲ್ಲ. ಗುರು ಬಸವಣ್ಣನವರ ಒಂದು ವಚನ ಹೀಗಿದೆ.

ಹಾಲು ಕಂದಲು ತುಪ್ಪದ ಮಡಕೆಯ ಬೋಡು ಮುಕ್ಕು ಎನಬೇಡ
ಹಾಲು ಸಿಹಿ ತುಪ್ಪ ಕಮ್ಮನೆ, ಲಿಂಗಕ್ಕೆ ಬೋನ.
ಲಿಂಗದೇವನ ಶರಣರ ಅಂಗಹೀನರೆಂದರೆ ನಾಯಕ ನರಕ.

ಅಂಗವಿಕಲತೆ ಇರುವವರನ್ನು ಸಮಾನವಾಗಿ ಗೌರವಿಸಬೇಕು, ಅವರನ್ನು ಕೀಳಾಗಿ ಕಾಣಕೂಡದು ಎನ್ನುವುದು ಧರ್ಮಪಿತರ ಆದೇಶವಾಗಿರುವಾಗ, ಚನ್ನಬಸವಣ್ಣನವರು ಅಂಗಹೀನರಿಗೆ ಲಿಂಗಸಾಹಿತ್ಯ ಮಾಡಬಾರದು ಎಂದು ಹೇಳಲು ಸಾಧ್ಯವೇ? ಇದು ಶೈವರ ವಿಚಾರ ಇದನ್ನು ಯಾರೋ ಧೂರ್ತರು ಸೇರಿಸಿದ್ದಾರೆ. ಅದಕ್ಕಾಗಿ ಇಂಥ ವಚನಗಳ ಶುದ್ಧೀಕರಣದ ಅವಶ್ಯಕತೆ ಇದೆ. ಇಂಥ ವಚನಗಳನ್ನು ಸರಿಪಡಿಸಿ ತಾತ್ವಿಕ ಚೌಕಟ್ಟಿನಲ್ಲಿ ಇಡುತ್ತಿರುವ ಪೂಜ್ಯ ಮಾತಾಜಿಯವರು ವಚನಗಳನ್ನು ತಿರುಚುತ್ತಿದ್ದಾರೆ ಎನ್ನಬಹುದೆ? ವಚನಗಳ ಶುದ್ಧೀಕರಣ ಗುರು ಬಸವಣ್ಣನವರ ಹೃದಯ ಅರಿತವರಿಗಲ್ಲದೆ ಸಾಧ್ಯವಾಗದು. ಬಸವಾತ್ಮಜೆಯಾಗಿ ವಚನಗಳ ಶುದ್ಧೀಕರಣ ಮಾಡುತ್ತಿರುವ ಮಾತಾಜಿಯವರ ವಿಚಾರಗಳನ್ನು ನಾನು ಸಂಪೂರ್ಣವಾಗಿ ಸ್ವೀಕರಿಸುತ್ತೇನೆ.

-ಶರಣ ಸಚ್ಚಿದಾನಂದ, ಚಟನಳ್ಳಿ

ಬಸವ ವಚನಾಮೃತ

81. ಅದ್ಭುತ ವಶ್ಯ ಶಕ್ತಿ

ವಶ್ಯವ ಬಲ್ಲೆವೆಂಬಿರಯ್ಯಾ-
ಬುದ್ಧಿಯನರಿಯದ ಮನುಜರು ಕೇಳಿರಯ್ಯಾ;
ವಶ್ಯವಾವುದೆಂದರಿಯದೆ,
ಮರುಳುಗೊಂಬಿರೆಲೆ ಗಾವಿಲ ಮನುಜರಿರಾ!
"ಓಂ ನಮಃ ಶಿವಾಯ" ಎಂಬ ಮಂತ್ರ ಸರ್ವಜನ ವಶ್ಯ
ಕೂಡಲ ಸಂಗಮದೇವಾ - ಬ.ವ.ದೀ.79

ವಶೀಕರಣ ವಿದ್ಯೆ ಎಂಬುದೊಂದಿದೆ ಎಂದು ಕೆಲವರು ಮಂತ್ರವಾದಿಗಳು, ಮಾಟಗಾರರು ಹೇಳುತ್ತ ಬೇರೆಯವರ ಮನಸ್ಸನ್ನು ಒಲಿಸಿಕೊಡುತ್ತೇವೆ ಎಂದು, ಭೂಗತ ನಿಧಿಯನ್ನು ಕರಗತ ಮಾಡಿಕೊಡುತ್ತೇವೆ ಎಂದು, ಸಂಪತ್ತು ಲಭ್ಯವಾಗುವಂತೆ ಮಾಡುತ್ತೇವೆ ಎಂದೆಲ್ಲ ನಂಬಿಸಿ ಆ ಪೂಜೆ ಈ ಪೂಜೆ ಎಂದು ಖರ್ಚು ಮಾಡಿಸುವುದುಂಟು. ಇಂಥವರನ್ನು ಅಂದರೆ ನಂಬುವವರು ಮತ್ತು ನಂಬಿಸುವವರು - ಉಭಯತರನ್ನು ಬುದ್ಧಿಯಿಲ್ಲದವರು ಎಂದು ಧರ್ಮಪಿತರು ಹೇಳುತ್ತಾರೆ. ನಿಜವಾದ ವಶೀಕರಣದ ತಂತ್ರ ಎಲ್ಲಿದೆ ಎಂಬುದನ್ನು ಅರಿಯದ ಮರುಳುಗೊಂಡ ಗಾವಿಲ ಮನುಜರಿರಾ ಎಂದು ಅವರನ್ನು ವಿಡಂಬಿಸಿ ಕಡೆಗೆ ಪರಿಹಾರವನ್ನು ಸೂಚಿಸುತ್ತಾರೆ. ಓಂ ನಮಃ ಶಿವಾಯ (ಓಂ ಲಿಂಗಾಯ ನಮಃ) ಎಂಬ ಮಂತ್ರ ಸರ್ವವನ್ನೂ, ಸರ್ವಜನರನ್ನೂ ವಶಮಾಡಿಕೊಡುವ ಸಾಮರ್ಥ್ಯ ಉಳ್ಳುದು ಎಂದು ತಿಳಿಸುತ್ತಾರೆ.

ಈ ಮಂತ್ರದಲ್ಲಿ ನಿರ್ದೇಶಿಸಲ್ಪಡುವ ಧ್ಯೇಯ ವಸ್ತು ಶಿವ ನಿರಾಕಾರ ಪರಮಾತ್ಮನೇ ಎಂದು ಅರ್ಥ ಮಾಡಿದಾಗ ತಾತ್ವಿಕ ಗೊಂದಲ ಉಂಟಾಗುವುದಿಲ್ಲ. ಆದರೆ ಶಿವ ಎಂಬ ಪದಕ್ಕೆ ಈಗಾಗಲೇ ಪುರಾಣಗಳಲ್ಲಿ, ಅವನ್ನು ಪ್ರತಿಪಾದಿಸುವ ಕೀರ್ತನ, ಲೇಖನ ಪ್ರವಚನಗಳಲ್ಲಿ ಶಿವ ನಿರ್ದೇಶಿಸುವುದು ಕೈಲಾಸವಾಸಿ, ಗೌರಿ ಪತಿಯನ್ನು ಎಂದಾಗ ಅದು ದೇವ ಮಂತ್ರವಾಗದೆ ಗುರುಮಂತ್ರವಾಗುತ್ತದೆ. ಓಂ ನಮಃ ಶಿವಾಯವು ಇಷ್ಟಲಿಂಗಕ್ಕೆ ಅನ್ವಯವಾಗುವುದಿಲ್ಲ; ದೇವ ಮಂತ್ರವಾದ ಓಂ ಲಿಂಗಾಯ ನಮಃ ಸೂಕ್ತವಾಗುತ್ತದೆ.

82. ಶಿವ ಭಕ್ತಿಯ ಪಾರಮ್ಯ

ಭವ ಬಂಧನ ದುರಿತಂಗಳ ಗೆಲುವಡೆ
ಓಂ ನಮಃ ಶಿವಾಯ ಶರಣೆಂದರೆ ಸಾಲದೆ?
ಹರ ಹರ ಶಂಕರ ಶಿವ ಶಿವ ಶಂಕರ,
ಜಯ ಜಯ ಶಂಕರ ಶರಣೆನುತ್ತಿದ್ದೇನೆ.
ಎನ್ನ ಪಾತಕ ಪರಿಹರ,
ಕೂಡಲ ಸಂಗಮದೇವಾ, ಶರಣೆನುತ್ತಿದ್ದೇನೆ. - ಬ.ವ.ದೀ -80

ಹುಟ್ಟು - ಸಾವುಗಳ ಚಕ್ರವಾದ ಭವ, ಅದರಿಂದ ಉಂಟಾಗುವ ಬಂಧನ, ಜೀವನದಲ್ಲಿ ಅರಿತೋ ಅರಿಯದೆ ಮಾಡುವ ಪಾಪ (ದುರಿತ) ಇವುಗಳನೆಲ್ಲ ನಿವಾರಿಸಿಕೊಳ್ಳಲು ಓಂ ನಮಃ ಶಿವಾಯ ಎಂದು ಶರಣಾದರೆ ಸಾಕು. ಇದನ್ನು ಅರಿತ ಸಾಧಕ ಜೀವಿ ಬಸವಣ್ಣನವರು ಹರ ಹರ ಶಂಕರ, ಶಿವಶಿವ ಶಂಕರ, ಜಯ ಜಯ ಶಂಕರ ಎಂದು ಭಜಿಸುತ್ತ ಶರಣಾಗಿದ್ದಾರೆ. ಇದರಿಂದ ಪಾತಕಗಳು ಪರಿಹಾರವಾಗುತ್ತವೆ ಎಂಬ ನಂಬಿಕೆಯಿಂದ ಸಂಗಮೇಶ್ವರನಿಗೆ ಶರಣೆನ್ನುತ್ತಿದ್ದಾರೆ.

ಉಪಾಸನಾ ವಿಧಾನಗಳಲ್ಲಿ 3 ಪ್ರಕಾರ ಇವೆ. 1. ಬಹುದೇವತೋಪಾಸನೆ (polytheism) 2. ಏಕದೇವತೋಪಾಸನೆ (monodeitism) 3.ಏಕದೇವೋಪಾಸನೆ (monotheism). ಧರ್ಮಪಿತ ಬಸವಣ್ಣನವರ ಜೀವನದಲ್ಲಿ ಈ ಮೂರೂ ವಿಧಾನಗಳನ್ನು, ಅವುಗಳನ್ನು ಅಳವಡಿಸಿಕೊಂಡ ಮೂರು ಹಂತಗಳನ್ನು ಗುರುತಿಸಬಹುದು. ಅವರು ಹುಟ್ಟಿದ್ದು ವೈದಿಕ ಶೈವ ಬ್ರಾಹ್ಮಣ ಮನೆತನದಲ್ಲಿ. ಶಿವನೇ ಅಲ್ಲದೆ ಹಲವು ದೇವತೆಗಳ ಉಪಾಸನೆ ಅವರ ಮನೆಯಲ್ಲಿ ಆಚರಣೆಯಲ್ಲಿತ್ತು. ಗಣಪತಿ, ದೇವಿ, ವಿಷ್ಣು, ಸೂರ್ಯ ಇವೆಲ್ಲವುಗಳ ಉಪಾಸನೆಯನ್ನು ಅವರ ಮಾತಾ ಪಿತೃಗಳು ಮಾಡುತ್ತಿದ್ದರು. ಭೀಮಕವಿಯ ಬಸವ ಪುರಾಣದಲ್ಲಿ ಹೇಳುವಂತೆ, ನೀವು ಮೂಲತಃ ಶಿವ ಭಕ್ತರಾಗಿದ್ದುಕೊಂಡೂ ಸಹ ಏಕೆ ಹಲವು ದೇವತೆಗಳ ಆರಾಧನೆ ಮಾಡುವಿರಿ ? ಎಂದು ಬಾಲಕ ಬಸವರಸ ತಾಯಿ ತಂದೆಯರನ್ನು ಪ್ರಶ್ನಿಸುತ್ತಾನೆ. ಉಪನಯನ ಮಾಡಿಸಿಕೊಳ್ಳಲೊಪ್ಪದೆ ಮನೆ ಬಿಟ್ಟು, ಕೂಡಲ ಸಂಗಮಕ್ಕೆ ಬರುತ್ತಾನೆ. ಜಾತವೇದ

ಮುನಿಗಳು ಆಶ್ರಯ ನೀಡುತ್ತಾರೆ. ಸಂಗಮೇಶನ ಅರ್ಚಕರಾಗಿ ಇದ್ದುಕೊಂಡು ಬಸವರಸರು ಸುಮಾರು 12 ವರ್ಷಗಳನ್ನು ಸವೆಸುತ್ತಾರೆ. 9ನೆಯ ವಯಸ್ಸಿಗೆ ಗುರುಕುಲಕ್ಕೆ ಬಂದವರು 21ನೆಯ ವಯಸ್ಸಿನವರೆಗೆ ಸಾಧನಾ ಮಗ್ನರಾಗುತ್ತಾರೆ. ವಿದ್ಯಾಭ್ಯಾಸ ಮಾಡುತ್ತಲೇ ಯೋಗಭ್ಯಾಸ, ಶಾಸ್ತ್ರಾಧ್ಯಯನ, ಚಿಂತನೆ ಮಾಡುತ್ತ ವ್ಯಕ್ತಿತ್ವವನ್ನು ರೂಪಿಸಿಕೊಳ್ಳುತ್ತಾರೆ. ಈ ಅವಧಿಯಲ್ಲಿ ಏಕದೇವತಾ ಉಪಾಸಕರಾಗಿರುತ್ತಾರೆ. ಅಂದರೆ ಒಂದೇ ದೇವತೆಯನ್ನು ದೃಢವಾಗಿ ನಂಬುವಿಕೆ. ಉದಾ - ಶೈವರು ಶಿವನನ್ನು, ವೈಷ್ಣವರು ವಿಷ್ಣುವನ್ನು. ಕಟ್ಟುನಿಟ್ಟಿನ ಶಿವೋಪಾಸಕರಾಗಿರುವಾಗಲೇ ಅವರ ವಿದ್ಯಾಭ್ಯಾಸ ಪೂರ್ಣಗೊಳ್ಳುತ್ತದೆ. ಈ ಅವಧಿಯಲ್ಲಿ ಚಿಂತನೆಯ ಫಲವಾಗಿ ಅವರಲ್ಲಿ ಏಕದೇವೋಪಾಸನೆಯ ಪರಿಕಲ್ಪನೆ ಮೂಡುತ್ತದೆ. ಬ್ರಹ್ಮ ವಿಷ್ಣು ಮಹೇಶ್ವರರೆಂಬ ತ್ರಿಮೂರ್ತಿಗಳಿಗೂ ಮೀರಿದ ಪರಮೋನ್ನತ ಶಕ್ತಿಯೇ ಪರಮಾತ್ಮ. ಅವನು ಒಬ್ಬನೇ ಅವನು ಪರಮ ಆರಾಧ್ಯನು. ಇದೇ ಏಕದೇವೋಪಾಸನೆಯ ಪರಿಕಲ್ಪನೆ. ಮೇಲೆ ಕಾಣಿಸಿದ ವಚನದಲ್ಲಿ ಅಭಿವ್ಯಕ್ತವಾಗಿರುವುದು ಮಧ್ಯಂತರದ ಪರಿಕಲ್ಪನೆಯಾದ ಏಕದೇವತಾ ಉಪಾಸನೆ.

83. ಒಂದೇ ಮಂತ್ರ

ಎನ್ನ ಮನದಲ್ಲಿ ಮತ್ತೊಂದನರಿಯೆನಯ್ಯಾ
ಓಂ ನಮಃ ಶಿವಾಯ ಓಂ ನಮಃ ಶಿವಾಯ ಎನುತಿರ್ದೆನಯ್ಯಾ
ಎನಗಿದೇ ಮಂತ್ರ, ಎನಗಿದೇ ಜಪ
ಲಿಂಗದೇವಾ, ನೀನೆ ಬಲ್ಲೆ, ಎಲೆ ಲಿಂಗವೆ . -ಬ.ವ.ದೀ- 81

ಏಕದೇವೋಪಾಸನೆಯೊಡನೆ ಅವಿನಾಭಾವ ಸಂಬಂಧ ಹೊಂದಿರುವುದು ಒಂದೇ ಮಂತ್ರದ ಅನುಸಂಧಾನ. ಹಿಂದು ಧರ್ಮದಲ್ಲಿ ಮಂತ್ರಗಳಿಗೆ ಲೆಕ್ಕವೇ ಇಲ್ಲ. ಇಂದ್ರ, ಅಗ್ನಿ ಮುಂತಾದವುಗಳಿಗೆ ಹಾಗೆಯೇ ನವಗ್ರಹ ಮುಂತಾದ ಕಾಲ್ಪನಿಕ ದೇವತೆಗಳ ಹೆಸರಲ್ಲಿ ಮಂತ್ರಗಳಿವೆ. ಇನ್ನು ಪ್ರಮುಖ ದೇವತೆಗಳಾದ ಶಿವ, ವಿಷ್ಣು, ದೇವಿ, ಗಣಪತಿ ಇವರುಗಳ ಹೆಸರಲ್ಲಿ ಮಂತ್ರಗಳಿವೆ. ಈ ಯಾವ ಮಂತ್ರಗಳ ಅನುಸಂಧಾನವನ್ನೂ ಇಷ್ಟಪಡದ ತರುಣ ಬಸವರಸರು ಜಪಕ್ಕೆ ತಪಕ್ಕೆ ಎಲ್ಲಕ್ಕೂ ಓಂ ನಮಃ ಶಿವಾಯ ಒಂದೇ ಮಂತ್ರ ನನಗೆ ಎಂದು ದೃಢವಾಗಿ ಹೇಳುತ್ತಾರೆ. ಇನ್ನು ಕೆಲವು ಜನ ಪುರೋಹಿತರು, ಜ್ಯೋತಿಷಿಗಳು ಆ ಚಕ್ರ ಈ ಚಕ್ರ ಎಂದು ಬೇರೆ ಬೇರೆ ಮಂತ್ರಗಳನ್ನು, ಚಕ್ರಗಳನ್ನು ಪಠಿಸಲು, ಪೂಜಿಸಲು ಹೇಳುವರು. ಇದನ್ನು ಕೂಡ ಬಸವರಸರು ನಿರಾಕರಿಸುವರು.

84. ಶಾಸ್ತ್ರ ಪ್ರಮಾಣತ

ಓಂ ನಮಃ ಶಿವಾಯ ಎಂಬ ಮಂತ್ರವ ಮೀರಲಮ್ಮದೆ
ನಿಂದವು ವೇದ;
ಓಂ ನಮಃ ಶಿವಾಯ ಎಂಬ ಮಂತ್ರವ ಮೀರಲಮ್ಮದೆ
ನಿಂದವು ಶಾಸ್ತ್ರ
ಓ ನಮಃ ಶಿವಾಯಯೆಂಬ ಮಂತ್ರವ ಮೀರಲಮ್ಮದೆ
ನಿಂದವು ತರ್ಕ;
ಭಯಂಕರ ಭ್ರಮೆಗೊಂಡಿತ್ತು ಮಂತ್ರ -ತಂತ್ರ
ಶಿವನಂತುವರಿಯದೆ ಚಿಂತಿಸುತ್ತಿತ್ತು ಲೋಕ!
ಕೂಡಲಸಂಗಮದೇವ ಶ್ವಪಚನ ಮೆರೆದಡೆ
ಜಾತಿಭೇದವ ಮಾಡಲಮ್ಮೆವು. - ಬ.ವ.ದೀ - 82

ಭಾರತ ದೇಶದ ಪ್ರಥಮ ಯೋಗಿರಾಜ ಶಿವ. ಆತನು ಜ್ಯೋತಿರ್ಲಿಂಗದ ಪರಿಕಲ್ಪನೆ ನೀಡಿದ, ಶೈವ ಧರ್ಮ ಆದ್ಯನಾದ. ಮೊದಲು ಈ ದೇಶದಲ್ಲಿ ಶಿವೋಪಾಸನೆ ಬಿಟ್ಟು ಬೇರೇನೂ ಇರಲಿಲ್ಲ. ಹಿಮಾಲಯದ ತುದಿಯಿಂದ ಹಿಡಿದು ಕನ್ಯಾಕುಮಾರಿಯನ್ನೂ ದಾಟಿ ಸಿಂಹಳ, ಕಾಂಬೋಡಿಯಾ ಹೀಗೆ ಶೈವ ಮತ ಅತ್ಯಂತ ವಿಸ್ತಾರವಾಗಿ ಹಬ್ಬಿತ್ತು. ನಂತರ ಆರ್ಯರ ಆಗಮನವಾಯಿತು. ಆರಂಭದಲ್ಲಿ ಆರ್ಯರು ಮತ್ತು ಮೂಲ ನಿವಾಸಿಗಳಾದ ದ್ರಾವಿಡರ ಮಧ್ಯೆ ಸಂಘರ್ಷ ಸಂಭವಿಸಿದರೂ ನಂತರ ಎರಡೂ ಸಂಸ್ಕೃತಿಗಳು ಬೆರೆತವು. ಪರಸ್ಪರರ ದೈವಗಳನ್ನು, ದೇವತೆಗಳನ್ನೂ ಸ್ವೀಕರಿಸಿದರು. ಅದರ ಫಲಶ್ರುತಿಯೇ ತ್ರಿಮೂರ್ತಿಗಳ ಕಲ್ಪನೆ. ವೇದಗಳು ಸಹ ಭರ್ಗೋದೇವಸ್ಯ ಧೀಮಹಿ, ಏಕೋರುದ್ರ ನದ್ವಿತೀಯ ಎಂದು ಅಂದಿರುವುದಾಗಿ ಗುರು ಬಸವಣ್ಣನವರು ಉಲ್ಲೇಖಿಸುತ್ತಾರೆ. ಓಂ ನಮಃ ಶಿವಾಯ ಮಂತ್ರದ ದ್ರಷ್ಟಾರ ವಾಮದೇವ ಋಷಿ. ರುದ್ರಾಭಿಷೇಕ ವೇದದ ಭಾಗ. ಆರ್ಯರ ಆಗಮನಕ್ಕೆ ಮೊದಲು ಶಿವನೊಬ್ಬನೇ

ಭಕ್ತಿ ಸಾಮ್ರಾಜ್ಯದ ಸಾಮ್ರಾಟನಾಗಿದ್ದ. ಅದನ್ನೇ ಪ್ರಸ್ತುತ ವಚನದಲ್ಲಿ ಗುರು ಬಸವಣ್ಣನವರು ಪ್ರತಿಪಾದಿಸಿದ್ದಾರೆ. ವೇದಗಳು ಹಲವಾರು ಮಂತ್ರಗಳನ್ನು ಉಲ್ಲೇಖಿಸಿದ್ದರೂ ಮಹತ್ವದ ಸ್ಥಾನ ಕೊಟ್ಟಿರುವುದು ಓಂ ನಮಃ ಶಿವಾಯಕ್ಕೆ ; ಶಾಸ್ತ್ರಗಳೂ ಅಷ್ಟೆ ! ಈ ಮಂತ್ರವು ತರ್ಕಕ್ಕೆ ಅತೀತವಾಗಿದೆ. ವೇದ, ಶಾಸ್ತ್ರ ಮುಂತಾದವುಗಳು ಸೃಷ್ಟಿಸಿದ ಮಂತ್ರ, ತಂತ್ರ, ಬಹುದೇವತೋಪಾಸನೆಯ ಗೊಂದಲದಿಂದಾಗಿ ಲೋಕವು ದೇವರ ಸ್ವರೂಪವನ್ನು ಅರಿಯಲಾರದ ಸ್ಥಿತಿಗೆ ಬಂದಿತು. ವರ್ಣ ವ್ಯವಸ್ಥೆಯ ಸೃಷ್ಟಿ, ಸಮಾಜದ ವರ್ಗೀಕರಣ ಬಹಳಷ್ಟು ಅನಾಹುತಗಳಿಗೆ ಕಾರಣವಾಯಿತು. ಶ್ವಪಚನೆಂಬ ಶೂದ್ರನಿಗೆ ಶಿವನು ಒಲಿದಿರುವ ಪರಿಯನ್ನು ನೋಡಿದಾಗ ನಮಗೆ ಜಾತಿ ಭೇದವನ್ನು ಮಾಡುವುದು ಅರ್ಥ ಹೀನವೆನಿಸುತ್ತದೆ.

85. ಕನ್ನೆ ಭಕ್ತಿ

ಬಿಳಿಯ ಕರಿಕೆ - ಕಣಗಿಲೆಲೆಯ, ತೊರೆಯ ತಡಿಯ ಮಳಲ ತಂದು.
ಗೌರಿಯ ನೋನುವ ಬನ್ನಿರೆ, ಚಿಕ್ಕ ಚಿಕ್ಕ ಮಕ್ಕಳೆಲ್ಲರು ನೆರೆದು-
ಅನುಪಮ ದಾನಿ ಕೂಡಲ ಸಂಗಮದೇವ ಗಂಡನಾಗಬೇಕೆಂದು - ಬ.ವ.ದೀ - 83

ಹೆಣ್ಣು ಮಕ್ಕಳಿಗಾಗಿ ಹಲವಾರು ಪೂಜೆಗಳಿವೆ. ಅವುಗಳಲ್ಲಿ ಒಂದು ಮರಳ ಗೌರಿ ಪೂಜೆ, ನದಿ ದಂಡೆಯಲ್ಲಿ ಹಸಿ ಮರಳನ್ನು ತೆಗೆದುಕೊಂಡು ಲಿಂಗಾಕಾರವಾಗಿ ರಚಿಸಿ ಅದನ್ನು ಪೂಜಿಸುವುದು ಮತ್ತು ಕಣಗಿಲೆ ಹೂವಿನಿಂದ ಪೂಜಿಸುವುದು ಅತ್ಯಂತ ಶ್ರೇಷ್ಠ ಎಂಬ ನಂಬಿಕೆ ಇದೆ. ಬಾಲಕ ಬಸವರಸ ಸಹಪಾಠಿ ಬಾಲಕರೊಡನೆ ನದಿಯ ದಂಡೆಯಲ್ಲಿ ಆಟವಾಡುತ್ತಲಿದ್ದಾರೆ. ಆಗ ಹಿರಿಯ ಮಹಿಳೆಯರು ತಮ್ಮ ಹೆಣ್ಣು ಮಕ್ಕಳೊಡನೆ ನದಿಯ ದಂಡೆಗೆ ಬರುತ್ತಾರೆ. ನದಿಯಿಂದ ನೀರನ್ನು ತಂದು ಮರಳನ್ನು ಹಸಿ ಮಾಡಿ ಲಿಂಗಾಕಾರಗೊಳಿಸಿ ತಮ್ಮ ಬಾಲಕಿಯರಿಗೆ ಪೂಜೆ ಮಾಡಲು ಹೇಳುತ್ತಾರೆ. "ಒಳ್ಳೆಯ ಗಂಡ ಸಿಗಲಿ ಎಂದು ಮರಳ ಗೌರಿಯ ಪೂಜೆ ಮಾಡಿರಿ." ಎಂದು ಹೇಳಿಕೊಡುತ್ತಾರೆ. (ಗಂಡ ಸಿಕ್ಕಿ ಮದುವೆಯಾದ ಮೇಲೆ ಮಂಗಳಗೌರಿ ಎಂದು ಮಾಡುವರು)

ಈ ದೃಶ್ಯ ನೋಡಿದಾಗ ಬಾಲಕ ಬಸವರಸರಿಗೆ ಸ್ಫೂರ್ತಿ ಬರುತ್ತದೆ. ಆಗ ತನ್ನ ಸಹಪಾಠಿಗಳನ್ನು ಕುರಿತು ಹೇಳುತ್ತಾರೆ. ನಾವೂ ಬಿಳಿಯ ಕರಿಕೆ, ಕಣಗಿಲೆಲೆ ಸಂಗ್ರಹಿಸಿ ತೊರೆಯ ದಂಡೆಯ ಮರಳಿನಿಂದ ಗೌರಿಯನ್ನು ಮಾಡಿ ಮರಳಗೌರಿ ವ್ರತ ಮಾಡೋಣ ಎನ್ನುತ್ತಾರೆ. ಹುಡುಗರಿಗೆ ಅಚ್ಚರಿಯಾಗುತ್ತದೆ. "ಆ ಹೆಣ್ಣುಮಕ್ಕಳು ಒಳ್ಳೆಯ ಗಂಡ ಬೇಕು ಅಂತ ವ್ರತ ಮಾಡುತ್ತಾರೆ. ನಾವು ಏತಕ್ಕೆ ಅಂತ ವ್ರತ ಮಾಡುವುದು?"

"ಅನುಪಮ ದಾನಿ ಕೂಡಲ ಸಂಗಮದೇವನೆ ನಮಗೆ ಗಂಡನಾಗಬೇಕೆಂದು." ಎನ್ನುತ್ತಾನೆ ಬಾಲಕ ಬಸವರಸ. ಈ ವಚನ ಸಹ ಏಕದೇವತಾ ಉಪಾಸನೆಯನ್ನು ಪ್ರತಿಪಾದಿಸುವ ವಚನ. ಬಾಲಕರಿದ್ದಾಗಿನಿಂದಲೂ ಸಂಗಮನಾಥನ ಬಗ್ಗೆ ಬಾಲಕ ಬಸವರಸರಿಗೆ ಎಂತಹ ಮೋಹ ಇದ್ದಿತೆಂಬುದು ಇಲ್ಲಿ ವ್ಯಕ್ತವಾಗುತ್ತದೆ.

ವಿಶೇಷ ಎಚ್ಚರಿಕೆ: ಬಸವರಸರು ಮಂಗಳಗೌರಿ ವ್ರತ ಮಾಡಿದರೂ ಅದು ತಪ್ಪೇನಲ್ಲ ಎನ್ನುತ್ತಾರೆ. ಎಂದು ಭಾವಿಸುವ ಮೂಢರಾಗಬಾರದು. ಗುರು ಬಸವಣ್ಣನವರು ತಮ್ಮ ಜೀವನವನ್ನೇ ಒಂದು ಮಹಾನ್ ಪ್ರಯೋಗ (Experiment)ವನ್ನಾಗಿ ಮಾಡಿಕೊಂಡು ನಂತರ ವ್ಯವಸ್ಥಿತ ಧರ್ಮವನ್ನಾಗಿ ಲಿಂಗಾಯತವನ್ನು ಕೊಟ್ಟಿದ್ದಾರೆ. ಆದ್ದರಿಂದ ಸಾಕ್ಷಾತ್ಕಾರದ ನಂತರ ನವ ಧರ್ಮ ದ್ರಷ್ಟಾರರಾಗಿ ಅವರು ಕೊಟ್ಟುದನ್ನು ಮಾತ್ರ ನಾವು ಅನುಸರಿಸಬೇಕಾದುದು.

86. ಸೃಷ್ಟಿಕರ್ತನ ಪೂಜಿಸಿದ ಫಲ ಬಹು ದೊಡ್ಡದು

ಎಮ್ಮವರು ಬೆಸಗೊಂಡರೆ ಶುಭ ಲಗ್ನವೆನ್ನಿರಯ್ಯ
ರಾಶಿ ಕೂಟ ಗಣ ಸಂಬಂಧವುಂಟೆಂದು ಹೇಳಿರಯ್ಯಾ;
ಚಂದ್ರನ ಬಲ ತಾರಾಬಲವುಂಟೆಂದು ಹೇಳಿರಯ್ಯಾ;
ನಾಳಿನ ದಿನಕಿಂದಿನ ದಿನ ಲೇಸೆಂದು ಹೇಳಿರಯ್ಯಾ;
ಲಿಂಗದೇವನ ಪೂಜಿಸಿದ ಫಲ ನಿಮ್ಮದಯ್ಯಾ! - ಬ.ವ.ದೀ- 84

ಜ್ಯೋತಿಷ್ಯ, ಜಾತಕ, ಮುಹೂರ್ತ ಮುಂತಾದುವೆಲ್ಲ ಮಾನವರ ಕಲ್ಪನೆ. ಪುರೋಹಿತ ಶಾಹಿಯು ಅಜ್ಞ ಜನರನ್ನು ಸದಾ ತಮ್ಮ ನಿಯಂತ್ರಣದಲ್ಲಿಟ್ಟುಕೊಳ್ಳಲು, ಜನರು ಸ್ವತಂತ್ರವಾಗಿ ಯೋಚನೆ ಮಾಡಲು ಅವಕಾಶ ಕೊಡದಂತೆ ಭೀತಿಯಲ್ಲಿಟ್ಟು ನಿಗ್ರಹಿಸಲು ಕಂಡುಕೊಂಡ ವಿದ್ಯೆಗಳು. ಕೋಟಿ ಕೋಟಿ ಮೈಲು

ದೂರದಲ್ಲಿರುವ ಮತ್ತು ಜಡವಾಗಿ ತಿರುಗುವ ಗ್ರಹ ಗೋಲಗಳು ಪೃಥ್ವಿಯ ಮೇಲಿರುವ ಮಾನವನಿಗೆ ಏನು ಮಾಡಬಲ್ಲವು? ವಾದಕ್ಕಾಗಿ, ಒಂದು ವೇಳೆ ಪ್ರಭಾವ ಬೀರುತ್ತವೆ ಎಂದಿಟ್ಟುಕೊಂಡರೂ ಸಹ ಈ ಭೂಮಿಯ ಮೇಲಿನ ಹುಲು ಮಾನವರು ಒಂದು ಎಳ್ಳಿನ ದೀಪ ಹಚ್ಚಿ, ಗೋಧಿ - ಉದ್ದು ದಾನ ಕೊಟ್ಟು ಆ ಬೃಹತ್ ಕಾಯಗಳನ್ನು ಒಲಿಸಲು, ಬದಲಾಯಿಸಲು ಸಾಧ್ಯವೇ?

ಉಭಯತರಿಗೂ ಹುಡುಗ - ಹುಡುಗಿ, ಅವರ ಮನೆತನಗಳವರಿಗೆ ಒಪ್ಪಿಗೆಯಾದರೆ ಅದು ಶುಭಲಗ್ನ (ಹೊಂದಾಣಿಕೆ) ಎಂದುಕೊಳ್ಳಬೇಕು. ಆಂಥ ಹೊಂದಾಣಿಕೆಯಲ್ಲಿ ರಾಶಿ, ಕೂಟ, ಗಣ ಸಂಬಂಧ ಎಲ್ಲ ಕೂಡಿ ಬಂದಿದೆ ಎಂದು ಭಾವಿಸಬೇಕು. ಯಾವ ಜ್ಯೋತಿಷಿಯನ್ನೂ ಕೇಳ ಹೋಗದೆ ಚಂದ್ರ, ಬಲ, ತಾರಾಬಲ ಎಲ್ಲ ಇದೆ ಎಂದು ಭಾವಿಸಬೇಕು. ಒಳ್ಳೆಯ ಕೆಲಸಗಳನ್ನು ಮಾಡಲು ನಿರ್ಧರಿಸಿದಾಗ ನಾಳೆ, ನಾಳೆ ಎಂದು ಮುಂದೂಡದೆ ಇಂದೇ ಮಾಡೋಣ, ಈಗಲೇ ಮಾಡೋಣ ಎಂದು ಮುಂದುವರಿಯಬೇಕು. ಏಕೆಂದರೆ ಲಿಂಗದೇವನನ್ನು ದಿನ ನಿತ್ಯ ಪೂಜಿಸುವವರಿಗೆ ಪೂಜಾಫಲವು ಸದಾ ಜೊತೆಗೆ ಇದ್ದು ನೆರವಾಗುತ್ತದೆ.

ಲಿಂಗಧಾರಣ ಸ್ಥಲ

ವಿಭೂತಿ ಧಾರಣೆ, ರುದ್ರಾಕ್ಷಿ ಧಾರಣೆಯ ಬಳಿಕ ಗುರುವು ಇಷ್ಟಲಿಂಗವನ್ನು ಅನುಗ್ರಹಿಸುವನು. 1. ದೀಕ್ಷೆಯನ್ನು ನೀಡುವ ವಿಧಿಯ ವಿವರ ಹೀಗಿದೆ 2. ನಿಧಾನ ಗತಿಯ ಪರಿವರ್ತನೆಯಾಗುವ ವ್ಯಕ್ತಿಗೆ ಅವನ ಪ್ರಗತಿ ನೋಡಿ ಇಷ್ಟಲಿಂಗ ಧಾರಣೆ ಮಾಡಲಾಗುವದು. ಪರಿವರ್ತನಾ ಕ್ರಿಯೆಯಲ್ಲಿ 2 ಹಂತಗಳಿರುತ್ತವೆ. 1. ಮಾನಸಾಂತರ (Change of heart) 2. ಮತಾಂತರ- (prosylatization)

ಮೊದಲನೆಯ ಬಗೆಯಲ್ಲಿ ಆಂತರಿಕ ಪರಿವರ್ತನೆ ಇದ್ದರೆಎರಡನೆಯಬಗೆಯಲ್ಲಿಕೇವಲ ನಾಮಾಂತರ ತೋರಿಕೆಯ ಪರಿವರ್ತನೆ ಇರುತ್ತದೆ. ಇಷ್ಟಲಿಂಗಧಾರಣೆಯಾದಾಗ ಲಿಂಗಾಯತ ಧರ್ಮದ ಅಧಿಕೃತ ಮುದ್ರೆ ಬಿದ್ದಂತೆ ಆಗುವುದು. ಇದನ್ನು ಲಿಂಗಧಾರಣ ಸ್ಥಲದಲ್ಲಿ ಹೇಳಲಾಗುತ್ತಿದೆ.

87. ಪಾತಕ ನಿವಾರಣೆಗೆ ಶಿವಾರಾಧನೆ

ಪಾತಕ ಶತಕೋಟಿಯನೊರಸಲು
ಸಾಲದೆ ಒಂದು ಶಿವನ ನಾಮು?
ಸಾಲದೆ ಒಂದು ಹರನ ನಾಮು?
ಕೂಡಲ ಸಂಗಮದೇವಾ,
ನಿಮ್ಮ ಉಂಡಿಗೆಯ ಪಶುವ ಮಾಡಿದೆಯಾಗಿ, - ಬ.ವ.ದೀ - 85

ಪಾಪ ಕರ್ಮಗಳನ್ನು ಒಂದು ಕೋಟಿಯಷ್ಟು ಮಾಡಿದ್ದರೂ ಶಿವನ ನಾಮವನ್ನು ಜಪಿಸಿದರೆ ಸಾಕು, ಹರನ ನಾಮವನ್ನು ಜಪಿಸಿದರೆ ಸಾಕು. ಪಾಪವು ಪರಿಹಾರವಾಗುವುದು.

ಹಿಂದಿನ ಕಾಲದಲ್ಲಿ ಶೈವ ಸಂಪ್ರದಾಯದಲ್ಲಿ ಎಲ್ಲ ವಸ್ತುಗಳಿಗೂ ದೀಕ್ಷೆಯನ್ನು ಕೊಡಲಾಗುತ್ತಿತ್ತು. ಶಿವ ಪುರಾಣದಲ್ಲಿ ನಾಯಿಗೆ ಸಹಿತ ರುದ್ರಾಕ್ಷಿ ಕಟ್ಟುತ್ತಿದ್ದ ಕಥೆಯನ್ನು ಕೇಳುತ್ತೇವೆ. ಬಿಲ್ವ ಪತ್ರೆ ಮರಕ್ಕೆ ದೀಕ್ಷೆ ಕೊಟ್ಟು ಅರ್ಥಾತ್ ಶುದ್ಧೀಕರಣ ಮಾಡಿ ಅದರ ಪತ್ರೆಯನ್ನು ಬಳಸಲಾಗುತ್ತಿತ್ತು. ಕೊಂಡು ಕೊಂಡ ಜಮೀನಿಗೆ ಲಿಂಗ ಮುದ್ರೆ ಕಲ್ಲು ಹಾಕಲಾಗುತ್ತಿತ್ತು. ದೇವಾಲಯಗಳಿಗಾಗಿ ಹಸುಗಳನ್ನು, ಹೋರಿಗಳನ್ನು ಬಿಡಲಾಗುತ್ತಿತ್ತು. ಆಗ ಲಿಂಗ ಮುದ್ರೆ ಬಿದ್ದ ಪಶುವಿನ ಹಾಲು ದೇವರ ನೈವೇದ್ಯಕ್ಕೆ, ಅಭಿಷೇಕಕ್ಕೆ ಬಳಕೆಯಾಗುತ್ತಿತ್ತು. ಲಿಂಗ ಮುದ್ರೆ ಹಾಕಲ್ಪಟ್ಟ ಹೋರಿಯು ಯಾರ ಹೊಲದಲ್ಲಿ ಮೇಯ್ದರೂ ಅದನ್ನು ಶಿಕ್ಷಿಸುತ್ತಿರಲಿಲ್ಲ. ಅದನ್ನು ದೇವರ ಹೋರಿ ಎಂದು ಪೂಜಿಸುತ್ತಿದ್ದರು. ಇದನ್ನು ಉಂಡಿಗೆಯ ಪಶು ಎಂದು ಕರೆಯಲಾಗಿದೆ. ದೇವಾಲಯದ, ದೇವರ ಕಾರ್ಯಕ್ಕೇ ಮೀಸಲಾದ ಪಶು ಎಂದು ಕರೆಯಲಾಗಿದೆ. ಅದೇ ರೀತಿ ಸಾಧಕ ಬಸವರಸರು ತಾವು ಶಿವನಿಗಾಗಿಯೇ ಮೀಸಲಾದವರು ಎಂಬುದನ್ನು ಈ ವಚನದಲ್ಲಿ ಪ್ರಸ್ತಾಪಿಸುತ್ತಾರೆ.

88. ಧರ್ಮದ ಕವಿಲೆ

ಲಿಂಗದ ಉಂಡಿಗೆಯ ಪಶುವಾನಯ್ಯ
ವೇಷಧಾರಿಯಾನು, ಉದರಪೋಷಕ ನಾನಯ್ಯಾ,
ಲಿಂಗದೇವನ ಶರಣರ ಮನೆಯ
ಧರ್ಮದ ಕವಿಲೆಯಾನಯ್ಯಾ - ಬ.ವ.ದೀ -86

ಮೇಲಿನ ವಚನದ ಭಾವವನ್ನೇ ಇದೂ ಸಹ ಹೊಂದಿದೆ. ಲಿಂಗ ಮುದ್ರೆ ಹಾಕಲ್ಪಟ್ಟ ದೇವಾಲಯದ ಪಶುವಿನಂತೆ ನಾನು. ಆ ಪ್ರಾಣಿಗೆ ಲಿಂಗ ಮುದ್ರೆ ಬಿದ್ದಿದೆಯಾದರೂ ಶಿವಜ್ಞಾನದ ಮಹತ್ವ ತಿಳಿದಿಲ್ಲ. ಹಾಗೆಯೇ ಶಿವಲಾಂಛನಗಳನ್ನೂ ಧರಿಸಿರುವ ವೇಷಧಾರಿ ನಾನು. ದೇವಾಲಯದ ಪಶು ಎಂದು ಜನರೆಲ್ಲರೂ ಉದಾರ ಮನೋಭಾವದಿಂದ ಆ ಪಶುವಿಗೆ ತಿನ್ನಿಸುವರು. ದವಸ ಧಾನ್ಯ, ಹಿಂಡಿ - ಹೊಟ್ಟು ಮಾತ್ರವಲ್ಲ ಹೋಳಿಗೆಯಂತಹ ರುಚಿಕರ ತಿನಿಸುಗಳನ್ನೂ ಸಹ ತಿನ್ನಿಸುವರು. ಹೀಗೆ ನಾನು ಶರಣರ ಮನೆಯ ಧರ್ಮದ ಕವಿಲೆ. ನನಗೆ ಅವರೆಲ್ಲರೂ ಭಕ್ತಿ - ಜ್ಞಾನಗಳ ತಿನಿಸು ಕೊಡುವರು.

89. ಶರಣಾಗತಿ

ನಮಃ ಶಿವಾಯ ನಮಃ ಶಿವಾಯ
ಶರಣೆಂದಿತ್ತು ಲಲಾಟ ಲಿಖಿತ.
ಬರೆದ ಬಳಿಕ ಪಲ್ಲಟವ ಮಾಡಬಾರದು.
ಎನ್ನ ಉರದ ಉಂಡಿಗೆ, ಶಿರದ ಅಕ್ಷರ
ಕೂಡಲ ಸಂಗಮ ಶರಣೆಂದಿತ್ತು. -ಬ.ವ.ದೀ-87

ಶೈವ ಗುರುಕುಲಗಳಲ್ಲಿ ಗುರುಗಳು ಉಪದೇಶ ಮಾಡುವಾಗ ಹಣೆಯ ಮೇಲೆ ತ್ರಿಪುಂಡ್ರವನ್ನು ಧರಿಸಿ, ನಮಃ ಶಿವಾಯ ಎಂಬ ಪಂಚಾಕ್ಷರಿಯನ್ನು ಉಪದೇಶ ಮಾಡುತ್ತಿದ್ದರು. ನೀನು ಶಿವನಿಗೆ ಶರಣಾಗುತ್ತೇನೆ (ನಮಃ ಶಿವಾಯ) ಎಂಬ ಭಾವ ತಾಳಬೇಕು ಎಂದು ಬೋಧಿಸುತ್ತಿದ್ದರು. ವಿಭೂತಿ ಧರಿಸಿ, ಮಂತ್ರದ ಉಪದೇಶ ಮಾಡುತ್ತಲೇ ಒಂದು ಬಗೆಯ ಬದ್ಧತೆ (commitment) ಉಂಟಾಗುತ್ತಿತ್ತು. ಅದನ್ನು ಬದಲಾಯಿಸಲಿಕ್ಕೆ ಬರದೆ ಇರುವ ಏಕದೇವತಾ ಉಪಾಸನೆಗೆ ಸಂಯೋಗಿಸುತ್ತಿತ್ತು. ಇದರ ಪರಿಣಾಮವಾಗಿ ಕೂಡಲ ಸಂಗಮದೇವಾ, ನನ್ನ ಎದೆಯಲ್ಲಿ ಅಣುರಣಿಸುವುದೂ ನಮಃ ಶಿವಾಯ. ಶಿರದಲ್ಲಿ ಮಿಡಿಯುವುದೂ ಅದೇ ಮಂತ್ರ.

90. ಕುಲ ತ್ಯಾಗ

ಕದ್ದ ಕಳ್ಳನ ಬಿಟ್ಟ ಮಂಡೆಯ ಹಿಡಿದು
ಹುಡುಕು ನೀರೊಳಗದ್ದುವಂತೆ ಮುಳಗಲಾರೆನು.
ಹಿಂಡಲಾರೆನು -ಹಿಂಗಿದೆನಯ್ಯಾ ಎನ್ನ ಹಾರುವ ಕುಲವನು
ಮುಳುಗುವವನ ಕೈಯ ಹಿಡಿದೆತ್ತಿದ ನಮ್ಮ ಲಿಂಗದೇವ

ವೈದಿಕ (ಹಿಂದು) ಧರ್ಮದಲ್ಲಿ ಒಂದು ವಿಶೇಷ ಆಚರಣೆಯಿದೆ. ಅದೆಂದರೆ ನೀರಿನಲ್ಲಿ ಮುಳುಗುವ ಒಂದು ಬಗೆ. ಮೂಗು ಹಿಡಿದುಕೊಂಡು ಡುಬುಕ್ಕನೆ ನೀರಿನಲ್ಲಿ, ಅದೂ ಮೊಳಕಾಲು ಮಟ್ಟ ಇರುವ ನೀರಿನಲ್ಲಿ ಮುಳುಗಿ ಮುಳುಗಿ ಏಳಲಾಗುವುದು. ನದಿಗಳಲ್ಲಿ ಕೆಲವು ವಿಶೇಷ ದಿನಗಳಂದು ಹೀಗೆ ಮುಳುಗಿ ತಾವು ಪರಿಶುದ್ಧರಾದೆವೆಂದು ಭಾವಿಸುವುದುಂಟು. ಏಕೋ ಈ ನಂಬಿಕೆ, ಈ ಆಚರಣೆ ಬಸವಣ್ಣನವರಿಗೆ ಇಷ್ಟವಾಗಿಲ್ಲ. ಕಳ್ಳನು ಕದ್ದು ಸಾರ್ವಜನಿಕರ ಕೈಗೆ ಸಿಕ್ಕಾಗ ಅವರು ಅವನನ್ನು ನೀರಿನ ಬಳಿಗೆ ಒಯ್ದು, ಮೊಳಕಾಲು ಮಟ್ಟ ನಿಂತ ನೀರಿರುವಲ್ಲಿ ನಿಲ್ಲಿಸಿ, ತಲೆಯ ಮೇಲಿನ ಕೂದಲು (ಜುಟ್ಟು) ಹಿಡಿದು ನೀರೊಳಗೆ ಅದ್ದುವರು, ಅದ್ದಿ ಮುಳುಗಿಸಿ ಹಿಡಿಯುವರು. ಪ್ರಾಣ ಹರಣ ಭಯದಿಂದ ಅವನು ಎಲ್ಲಿ ಕದ್ದುದು ಎಂಬುದನ್ನು ಹೇಳಿ ಬಿಡುವನು.

ಆ ರೀತಿ ನಾನು ನೀರಿನಲ್ಲಿ ಮುಳುಗಲಾರೆನು. ನೀರಿನಲ್ಲಿ ಮುಳುಗಿ ಪಾಪ ಪರಿಹಾರವಾಗಿ, ಪವಿತ್ರರಾದೆವೆಂಬ ಭ್ರಾಂತಿ ಹೊಂದಿದ ಹಾರುವ ಕುಲವನ್ನೇ ನಾನು ತ್ಯಜಿಸಿದ್ದೇನೆ. ದೇವರ ದಯೆ ದೊಡ್ಡದು. ನೀರು ಮುಳುಗುವ, ಮಡಿ - ಮೈಲಿಗೆಯ ಭ್ರಾಂತಿಯಲ್ಲೇ ಬದುಕುವ ವೈದಿಕ ಸಂಪ್ರದಾಯವನ್ನು ಬಿಡಿಸಿ ನನ್ನನ್ನು ತನ್ನೆಡೆಗೆ ಲಿಂಗದೇವನು ಎತ್ತಿಕೊಂಡನು; ನಾನು ಧನ್ಯನಾದೆ!

91. ದೇವ ಭಕ್ತರಿಲ್ಲದೂರು ಹಾಳೂರು

ಅಡ್ಡ ವಿಭೂತಿಯಿಲ್ಲದವರ ಮುಖ ಹೊಲ್ಲ, ನೋಡಲಾಗದು;
ಲಿಂಗದೇವನಿಲ್ಲದ ಠಾವು ನರವಿಂಧ್ಯ, ಹೋಗಲಾಗದು;
ಲಿಂಗದೇವಾ, ದೇವ ಭಕ್ತರಿಲ್ಲದೂರು ಸಿನೆ ಹಾಳು!

ಶರಣರ ನೊಸಲನ್ನು ಅಲಂಕರಿಸಿ ಮುಖಕ್ಕೆ ಸಾತ್ವಿಕ ತೇಜಸ್ಸನ್ನು ತಂದುಕೊಡುವ ಅಡ್ಡ ವಿಭೂತಿ ಇಲ್ಲದವರ ಮುಖ ಅಮಂಗಲ, ನೋಡಬಾರದು. ಸೃಷ್ಟಿಕರ್ತ ಲಿಂಗದೇವನನ್ನು ಪ್ರತಿನಿಧಿಸುವ ಇಷ್ಟಲಿಂಗ

ಧಾರಣೆಯಿಲ್ಲದ ಕುಟುಂಬ ನರವಿಂಧ್ಯ - ಮನುಷ್ಯರು ವಾಸ ಮಾಡುವ ಕಾಡು, ಅಲ್ಲಿಗೆ ಹೋಗಬಾರದು. ಸೃಷ್ಟಿಕರ್ತ ಲಿಂಗದೇವನ ಭಕ್ತರು ಅರ್ಥಾತ್ ಶರಣರು ಇಲ್ಲದ ಊರು ಹಾಳೂರು. ಅಲ್ಲಿ ಭಕ್ತಿ - ಸಂಸ್ಕಾರ ಏನೂ ಇರದು.

ಧರ್ಮವನ್ನು ಆಚರಿಸುವ ಸಮುದಾಯಕ್ಕೆ ಕೆಲವು ಕಟ್ಟು ನಿಟ್ಟು ನಿಬಂಧನೆಯನ್ನು ಹಾಕುವುದು ಅನಿವಾರ್ಯವಿರುತ್ತದೆ. ಇಂದಿನ ಕಾಲದ ಸಮಾಜದ ದೃಷ್ಟಿಯಿಂದ ನೋಡಿದಾಗ ಪ್ರಸುತ್ತ ವಚನ ಮತಾಂಧತೆ ಎನಿಸುವುದು ಸಹಜ. ಇಂದು ಅಡ್ಡ ವಿಭೂತಿ ಯಾರ ಹಣೆಯ ಮೇಲೂ ಇರದು. ಅವರ ಮುಖ ನೋಡದೆ ಇರಲು ಆಗುವದೇ ? ವಿಭೂತಿ ಇಲ್ಲದ ಹಣೆಯವರೇ ಬಹು ಸಂಖ್ಯಾತರು ಓಡಾಡುವ ಪರಿಸರದಲ್ಲಿ ನಾವೇ ಕಣ್ಣು ಮುಚ್ಚಿಕೊಂಡು ಓಡಾಡ ಬೇಕಷ್ಟೆ. ಲಿಂಗಾಯತರ ಧರ್ಮನಿಷ್ಠೆ ಕುರಿತು ಹೇಳುವುದಾದರೆ ಸ್ವಾಮಿಗಳು, ಮಠಾಧೀಶರು ಅವರ ಮನೆಯಲ್ಲಿ ಪ್ರಸಾದ ಸ್ವೀಕರಿಸಬೇಕೋ ಬೇಡವೋ ಎಂಬ ಸಂದಿಗ್ಧತೆಗೆ ಒಳಗಾಗಬೇಕು. ಏಕೆಂದರೆ ಮನೆಯ ಜನರ ಕೊರಳಲ್ಲಿ ಇಷ್ಟಲಿಂಗವೇ ಇರದು. ಬಹುಪಾಲು ಗಂಡಸರು ಮದ್ಯಪಾನಿಗಳು. ಒಂದು ಕಡೆ ನಾಸ್ತಿಕರು, ಇನ್ನೊಂದು ಕಡೆ ಬಹುದೇವೋಪಾಸಕರು ಇರುವಾಗ ಬಹುಪಾಲು ಊರುಗಳು ಮೇಲ್ಕಂಡ ವಚನದ ಪ್ರಕಾರ ಹಾಳೂರುಗಳೆ! ದೇವ ಪೂಜೆಯೂ ಇರದು, ಧಾರ್ಮಿಕ ಸಂಸ್ಕಾರವೂ ಇರದು. ಒಂದು ನೂತನ ಧರ್ಮ ಲಿಂಗಾಯತವು ಬೆಳೆಯುವ ಹಂತದಲ್ಲಿದ್ದಾಗ ಅನುಯಾಯಿಗಳಿಗೆ ಕಟ್ಟು ಕಟ್ಟಳೆ ಹಾಕಲಿಕ್ಕಾಗಿ ಹೇಳಿರುವ ಮಾತುಗಳಿವು ಎಂಬ ಹಿನ್ನೆಲೆಯಲ್ಲಿ ಈ ವಚನವನ್ನು ಸಹಾನುಭೂತಿಯಿಂದ ಅರ್ಥ ಮಾಡಬೇಕು.
ಈ ವಚನದ ಪಠ್ಯದಲ್ಲಿ ಲಿಂಗದೇವ ಪದವನ್ನು ಧರ್ಮಪಿತರು ಬಳಕೆ ಮಾಡಿದ್ದಾರೆ; ಲಿಂಗದೇವ ಪದ ಇಷ್ಟಲಿಂಗ ಸೂಚಕ ಎಂದುದಲ್ಲದೆ ದೇವ ಭಕ್ತ ಎಂಬ ಪದವನ್ನೂ ಪ್ರಯೋಗ ಮಾಡಿ ಲಿಂಗಭಕ್ತನು ಸೃಷ್ಟಿಕರ್ತ (ಲಿಂಗ) ದೇವನ ಭಕ್ತ ಎಂದು ಬಳಸಿದ್ದಾರೆ. ಆದ್ದರಿಂದ ಇದು ಬಹಳ ಮಹತ್ವಪೂರ್ಣ ವಚನ.

92. ಲಾಂಛನಧಾರಿಯಲ್ಲಿ ವಿಶ್ವಾಸ

ಅಡ್ಡ ತ್ರಿಪುಂಡ್ರದ ಮಣಿ ಮುಕುಟದ ವೇಷದ
ಶರಣರ ಕಂಡಡೆ ನಂಬುವುದೆನ್ನ ಮನವು.
ನಚ್ಚುವುದೆನ್ನ ಮನವು ಸಂದೇಹವಿಲ್ಲದೆ
ಇವಿಲ್ಲದವರ ಕಂಡಡೆ ನಂಬೆ, ಲಿಂಗದೇವಾ. -ಬ.ವ.ದೀ.90

ಒಂದು ರಾಜಕೀಯ ಪಕ್ಷ, ಧಾರ್ಮಿಕ ಸಮುದಾಯ ಯಾವುದಕ್ಕೆ ಇರಲಿ, ಕೆಲವು ಲಾಂಛನಗಳಿರುತ್ತವೆ. ಉದಾಹರಣೆಗೆ ಚಿಹ್ನೆ, ಅದನ್ನೊಳಕೊಂಡ ಧ್ವಜ, ವಿಶಿಷ್ಟ ಸಮವಸ್ತ್ರ, ಪ್ರಣಾಳಿಕೆ (ಸಂವಿಧಾನ) ಇತ್ಯಾದಿ. ಹಾಗೆಯೇ ಲಿಂಗಾಯತ ಧರ್ಮೀಯನ ಲಾಂಛನ ಹಣೆಯ ಮೇಲಿನ ಅಡ್ಡ ತ್ರಿಪುಂಡ್ರ, ವಿವಿಧ ಭಾಗಗಳಲ್ಲಿ ರುದ್ರಾಕ್ಷಿ; ಜಟಾಧಾರಿಯಾಗಿದ್ದರೆ ಜಟೆಯಲ್ಲೂ ರುದ್ರಾಕ್ಷಿ, ಇವನ್ನು ಧರಿಸಿದ ಶರಣರನ್ನು ಕಂಡರೆ ನಂಬುವದೆನ್ನ ಮನವು, ಸಂದೇಹವಿಲ್ಲದೆ ನಚ್ಚುವುದು. ಇವಿಲ್ಲದಿದ್ದರೆ ನಾನು ನಂಬುವದಿಲ್ಲ ಎನ್ನುತ್ತಾರೆ. ಕೆಲವರು ಕೇಳಬಹುದು, ಹಾಗಾದರೆ ಯಜ್ಞೋಪವೀತ ಧರಿಸಿ ಅನ್ಯರನ್ನು ದೂರವಿಡುವ ಬ್ರಾಹ್ಮಣರಿಗೂ ಇವರಿಗೂ ಏನು ವ್ಯತ್ಯಾಸ ? ಎಂಬುದಾಗಿ. ವೈದಿಕರು ಜನಿವಾರವನ್ನು ಸವರ್ಣೀಯರಿಗಲ್ಲದೆ ಬೇರೆಯವರಿಗೆ ಕೊಡುವುದಿಲ್ಲ ಎನ್ನುವರು. ಶರಣರು ವಿಭೂತಿ, ರುದ್ರಾಕ್ಷಿ, ಇಷ್ಟಲಿಂಗಗಳನ್ನು ಯಾರಿಗೆ ಬೇಕಾದರೂ ಬಯಸಿದವರಿಗೆ ಕೊಡಲು ಸಿದ್ಧರಿರುತಾರೆ. ಅದೇ ಮುಖ್ಯ ವ್ಯತ್ಯಾಸ. ರಾಜಕೀಯ ಪಕ್ಷದ ಪ್ರಾಥಮಿಕ ಸದಸ್ಯತ್ವವಿಲ್ಲದೆ ಪಕ್ಷದೊಳಗೆ ಹೇಗೆ ತೆಗೆದುಕೊಳ್ಳುವುದಿಲ್ಲವೋ ಹಾಗೆ ಧಾರ್ಮಿಕ ಲಾಂಛನಗಳಿಲ್ಲದವರನ್ನು ನಂಬಲಾಗುವದಿಲ್ಲ ಎಂಬ ಭಾವವಿದೆ.

8. ತಾಮಸ ನಿರಸನ ಸ್ಥಲ

ವ್ಯಕ್ತಿಯ ಪರಿವರ್ತನೆ ಆಂತರಂಗಿಕವೂ, ನಿಜವೂ ಆಗಿದ್ದರೆ ಅವನಲ್ಲಿ ಕೆಲವು ಬದಲಾವಣೆಗಳು ಆಗಲೇಬೇಕು. ದೀಕ್ಷೆಗೂ ಮೊದಲು ಇದ್ದಂತೆ ದೀಕ್ಷಾನಂತರವೂ ಹಾಗೆಯೇ ಇದ್ದರೆ ಪ್ರಯೋಜನವೇನು ? ಯಾವ ಯಾವ ಬದಲಾವಣೆಯಾಗಬೇಕು ಎಂಬ ಬಗ್ಗೆ ಮುಂದೆ ಕೊಡಲಾಗುವದು.

93. ನಂಟು ಭಕ್ತಿ ಬೇಡ

ಆರಾಧ್ಯ, ಪ್ರಾಣಲಿಂಗವೆಂದರಿದು,
ಪೂರ್ವಗುಣವಳಿದು ಪುನರ್ಜಾತನಾದ ಬಳಿಕ
ಸಂಸಾರ ಬಂಧುಗಳೆನ್ನವರೆಂದಡೆ,
'ನಂಟು ಭಕ್ತಿ ನಾಯಕ ನರಕ!'

ಇಂತೆಂದುದು ಲಿಂಗದೇವನ ವಚನ - ಬ.ವ.ದೀ.93

ಇಷ್ಟಲಿಂಗವು ಬ್ರಹ್ಮಾಂಡಗತ ಮಹಾಲಿಂಗ ಮತ್ತು ಪಿಂಡಾಂಡಗತ ಪ್ರಾಣಲಿಂಗವೆರಡರ ಸಂಯೋಗದ ಕುರುಹು. ಹೊರಗಿನ ಗೋಳಾಕಾರದ ಕಂಥೆ ಬ್ರಹ್ಮಾಂಡವನ್ನು ತನ್ಮೂಲಕ ಬ್ರಹ್ಮಾಂಡಗತ ದೇವ ಚೈತನ್ಯವನ್ನು ಸಂಕೇತಿಸಿದರೆ ಒಳಗಿನ ಹುಟ್ಟು ಲಿಂಗ ಅಥವಾ ಪಂಚ ಸೂತ್ರ ಲಿಂಗವು ಜೀವಾತ್ಮ-ಪ್ರಾಣಲಿಂಗವನ್ನು ಸಂಕೇತಿಸುತ್ತದೆ. ಇಂಥ ಇಷ್ಟಲಿಂಗವನ್ನು ಪಡೆದ ಬಳಿಕ ಪುನರ್ಜನ್ಮ ಪ್ರಾಪ್ತಿಯಾದಂತೆಯೇ ಸರಿ, ಮಾಂಸಪಿಂಡವು ಅಳಿದು ಶರೀರವು ಮಂತ್ರಪಿಂಡವಾಗುತ್ತದೆ. ದೀಕ್ಷಾನಂತರ ವ್ಯಕ್ತಿಯು ದೀಕ್ಷೆಯಾಗದವರ ಜೊತೆ ಒಡನಾಡಬಾರದು. ನಂಟು ಭಕ್ತಿ ನಾಯಕ ನರಕ ಅಂದರೆ ಸಂಸ್ಕಾರ ಪಡೆಯದೆ ಇರುವ ಬಂಧುಗಳೊಡನೆ ಬೆರೆಯಬಾರದು.

ಇನ್ನು ಸನ್ಯಾಸ -ಜಂಗಮ ದೀಕ್ಷೆ ಪಡೆದವರ ವಿಷಯಕ್ಕೆ ಬಂದರೆ ಅವರು ಸಂಸಾರ ತ್ಯಾಗ ಮಾಡಿ ಸನ್ಯಾಸ ಸ್ವೀಕರಿಸಿದ ಬಳಿಕ ಪೂರ್ವಾಶ್ರಮದವರೊಡನೆ ಅತಿಯಾದ ಒಡನಾಟ ಇಟ್ಟುಕೊಳ್ಳಬಾರದು. ಬಾಲ ಬ್ರಹ್ಮಚಾರಿ ಇದ್ದರೆ ತಾಯಿ ತಂದೆ, ಅಣ್ಣತಮ್ಮ, ಬಂಧು ಬಳಗದವರ ಸಂಪರ್ಕ ಇಟ್ಟುಕೊಳ್ಳಬಾರದು. ಮೊದಲು ಸಂಸಾರಿಯಾಗಿದ್ದು ನಂತರ ವೈರಾಗ್ಯದ ಪ್ರೇರಣೆಯುಂಟಾಗಿ ಜಂಗಮ (ಸನ್ಯಾಸ) ದೀಕ್ಷೆ ಪಡೆದಿದ್ದರೆ ಪೂರ್ವದ ಗೃಹಸ್ಥಾಶ್ರಮದ ಪತ್ನಿ, ಮಕ್ಕಳ ಜೊತೆ ವ್ಯವಹಾರ ಇಟ್ಟುಕೊಳ್ಳಬಾರದು. ನಂಟು ಭಕ್ತಿ ನಾಯಕ ನರಕ ಎಂಬ ಬಸವ ವಾಣಿ ಬಹಳ ದೂರಗಾಮಿ ಚಿಂತನೆಯುಳ್ಳದ್ದು. ಇಂದು ಮಠಗಳು ಲೆಕ್ಕವಿಲ್ಲದಷ್ಟು, ಹಳ್ಳಿಗೆ ಒಂದು, ಎರಡರಂತೆ ಇವೆ ಅದರಲ್ಲೂ ಕರ್ನಾಟಕದಲ್ಲಿ ಲಿಂಗಾಯತ ಮಠಗಳೇ ಮುಖ್ಯವಾಗಿರುವುದು. ಅವು ಅಧ್ಯಾತ್ಮಿಕ ಕೇಂದ್ರಗಳಾಗಿ ಸಾಧಕರ ಆಶ್ರಯ ಸ್ಥಾನಗಳು ಆಗುವ ಬದಲು ಮಠಾಧಿಕಾರಿಯ ಬಂಧು ಬಳಗ ಮೇಯುವ ಆಡುಂಬೊಲಗಳಾಗಿರುವುದು ಉತ್ಪ್ರೇಕ್ಷೆಯಲ್ಲ. ಗೃಹಸ್ಥರು ತಮ್ಮ ಮಕ್ಕಳು, ತಮಗೆ ಮಕ್ಕಳಿರದಿದ್ದರೆ ಹತ್ತಿರದ ಬಂಧುಗಳ ಮಕ್ಕಳನ್ನು ದತ್ತು ತೆಗೆದುಕೊಂಡು ಆಸ್ತಿಯನ್ನು ವಹಿಸಿಕೊಟ್ಟಂತೆ ಮಠಗಳೂ ಆಗಿವೆ. ಮಠಗಳ ತುಂಬ ಮಠಾಧೀಶರ ಬಂಧು ಬಳಗವೇ ಬೀಡುಬಿಟ್ಟಿರುತ್ತದೆ. ಪ್ರತಿಭೆ ಇರಲಿ ಬಿಡಲಿ ಬಂಧುಗಳಲ್ಲೇ ಉತ್ತರಾಧಿಕಾರಿಗಳನ್ನು ಆಯ್ಕೆ ಮಾಡಲಾಗುತ್ತದೆ. ಹೀಗಾಗಿಯೇ ಬಹುಪಾಲು ಮಠಾಧೀಶರಲ್ಲಿ ಧರ್ಮ ಪ್ರಚಾರಕ್ಕಿಂತಲೂ ಆಸ್ತಿಯ ವಿಸ್ತರಣೆ, ಉಸ್ತುವಾರಿಗಳೇ ಹೆಚ್ಚಾಗಿವೆ. ಅಧ್ಯಾತ್ಮಿಕ ಪ್ರವೃತ್ತಿ ಇರುವವರು ತಮ್ಮ ಬಂಧುವಾಗಿಲ್ಲದಿದ್ದರೂ ಅವರಲ್ಲಿ ಜ್ಞಾನ ಪ್ರಸಾರದಲ್ಲಿ ಆಸಕ್ತಿ, ಕಳಕಳಿ ಇರುತ್ತದೆ. ಅದಕ್ಕಾಗಿಯೇ ಧರ್ಮಪಿತರು ನಂಟು ಭಕ್ತಿಯನ್ನು ಸಾಧಕರು ತೊರೆಯಬೇಕು ಎಂದು ಹೇಳಿದರು.

ಇಂತೆಂದುದು ಲಿಂಗದೇವನ (ಕೂಡಲ ಸಂಗನ) ವಚನ ಎಂದು ಧರ್ಮಪಿತರು ಹೇಳುತ್ತಾರೆ. ಯಾವುದು ಈ ಲಿಂಗದೇವನ ವಚನ? ಇದರ ಅರ್ಥ ದೇವರ ಸಾಕ್ಷಿಯಾಗಿ ನಾನು ಹೇಳುತ್ತೇನೆ ಎಂಬ ಭಾವ. 2.ಇದು ನನ್ನ ಅಂತರಾತ್ಮದ ವಾಣಿ. ಅಂತರಾತ್ಮವು ದೇವರ ಒಂದು ಕಿರಣವಷ್ಟೆ ಎಂಬ ಅರ್ಥವನ್ನೂ ಕಾಣಬಹುದು. ಈ ರೀತಿ ಅನೇಕ ಕಡೆ ಬರುತ್ತದೆ. ಹಿಂದಿನ ಶಾಸ್ತ್ರಗಳ ಸಮ್ಮತಿ ಇರಬಹುದು, ಬಿಡಬಹುದು. ಒಂದು ಸತ್ಯ ಸಂಗತಿಯನ್ನು ಧರ್ಮಪಿತರು ಘೋಷಣೆ ಮಾಡಿದಾಗ, ಇದಕ್ಕೆ ಶಾಸ್ತ್ರದ ಅನುಮೋದನೆ ಎಲ್ಲಿದೆ ? ಎಂದು ಸಂಪ್ರದಾಯವಾದಿಗಳು ಕೇಳಿದಾಗ ಬಹುಶಃ ಗುರು ಬಸವಣ್ಣನವರು ಹೇಳಿದ್ದಾರೆ, ಇದು ನನ್ನ ಅಂತರಾತ್ಮದ ವಾಣಿ ಎಂದು. ಸಚ್ಚಿದಾನಂದ ನಿತ್ಯ ಪರಿಪೂರ್ಣನಾದ ದೇವನು ಪ್ರವಾದಿಗಳು, ಕಾರಣಿಕರ ಅಂತರಾತ್ಮದ ಮೂಲಕವೇ ದಿವ್ಯ ಸಂದೇಶವನ್ನು ನೀಡುವನು ಎಂಬ ಸತ್ಯವನ್ನರಿಯಬೇಕು.

94. ಭಾವ ನಿಂದೆ ಬೇಡ

ತಾಳ ಮರದ ಕೆಳಗೆ ಒಂದು ಹಾಲ ಹರವಿಯಿದ್ದಡೆ,
ಅದ ಹಾಲಹರವಿಯೆನ್ನರು; ಸುರೆಯ ಹರವಿಯೆಂಬರು,
ಈ ಭಾವನಿಂದೆಯ ಮಾಣಿಸಾ, ಲಿಂಗದೇವಾ. - ಬ.ವ.ದೀ.92

ಪಾಮೇಸಿ ಎಂಬ ಜಾತಿಯ ಗಿಡದ ವೃಕ್ಷಗಳಾದ ತಾಳೆ ಮರ, ಈಚಲ ಮರ ಮಾತ್ರವಲ್ಲ ತೆಂಗಿನ ಗಿಡದಿಂದ ಸಹ ಒಂದು ರಸವನ್ನು ಇಳಿಸಿಕೊಳ್ಳುವರು.. ಒಂದು ಹರವಿಯನ್ನು ಅಂದರೆ ಮಡಕೆಯನ್ನು ಕಟ್ಟಿ, ಗಿಡದ ನಾಳಕ್ಕೆ ರಂಧ್ರ ಕೊರೆದು ಅದರಿಂದ ಒಸರುವ ರಸವನ್ನು ಮಡಿಕೆಯಲ್ಲಿ ಸಂಗ್ರಹಿಸುವರು. ಇಳಿಸಿದ ತಕ್ಷಣ ಬರುವ ರಸಕ್ಕೆ ನೀರಾ ಎಂದು ಕರೆಯಲಾಗುವುದು. ಇದು ಆರೋಗ್ಯವೃದ್ಧಿಗೆ ಎಳೆನೀರಿನಂತೆ ಬಹಳ ಉಪಯುಕ್ತ. ಅದು ಮತ್ತೇರಿಸುವ ದ್ರವವೂ ಅಲ್ಲ. ಆದರೆ ಇದರಿಂದ ನಂತರ ಮತ್ತೇರಿಸುವ ಹೆಂಡವನ್ನು ತಯಾರು ಮಾಡುವುದರಿಂದ ಈಚಲಗಿಡ, ತಾಳೆ ಮರದ ರಸ ಎಂದರೆ ಒಂದು ಬಗೆಯ ತಪ್ಪು ಕಲ್ಪನೆ ಉಂಟಾಗುತ್ತದೆ. ತಾಳೆಯ ಅಥವಾ ಈಚಲಗಿಡದ ಕೆಳಗೆ ಕುಳಿತು ಒಬ್ಬ ವ್ಯಕ್ತಿ ಹಾಲನ್ನೇ ಕುಡಿದರೂ

ಅವನು ಕುಡಿಯುವುದು ಹೆಂಡವನ್ನೇ ಎಂದು ಭಾವಿಸುತ್ತಾರೆ. ಅದು ಹಾಲಿನ ಗಡಿಗೆಯೇ ಇದ್ದರೂ ಅದನ್ನು ಹೆಂಡದ ಮಡಿಕೆ ಎಂದೇ ಊಹಿಸುತ್ತಾರೆ. ವಾಸ್ತವಿಕವಾಗಿ ಇರುವ ಹಾಲು, ಜನರ ಭಾವನೆಯಲ್ಲಿ ಹೆಂಡ. ಈ ತಪ್ಪು ಊಹೆಯೇ ಭಾವ ನಿಂದೆ.

ಭಾವ ನಿಂದೆಯ ಮಾಣಿಸಾ ಎಂದು ಗುರು ಬಸವಣ್ಣನವರು ಲಿಂಗದೇವನಲ್ಲಿ ಬೇಡುತ್ತಾರೆ. ಇಲ್ಲಿ ಎರಡು ರೀತಿ ಅರ್ಥ ಮಾಡಬಹುದು. 1. ಅಲ್ಲಿ ಇರುವುದೇ ಒಂದು ಆರೋಪಿಸುವುದೇ ಮತ್ತೊಂದು. ಇದು ಭಾವ ನಿಂದೆ. ದೇವರೆ ಇಂಥ ಪ್ರವೃತ್ತಿಯನ್ನು ನನ್ನಲ್ಲಿ (ಮಾನವರಲ್ಲಿ) ತೊಡೆದು ಹಾಕು. 2. ಜಗತ್ತಿನ ಪ್ರವೃತ್ತಿ ಹೀಗೆ ಇರುವ ಕಾರಣ ಮನುಷ್ಯ ಅಪವಾದ ಬರದಂತೆ ಎಚ್ಚರಿಕೆ ವಹಿಸಬೇಕು. ಈಚಲ ಗಿಡದ ಕೆಳಗೆ ಕುಳಿತು ಹಾಲನ್ನೇ ಕುಡಿದರೂ ಹೆಂಡ ಎಂದು ಭಾವಿಸುವ ಕಾರಣ, ಅಲ್ಲಿ ಕುಳಿತು ಕುಡಿಯದೆ ಇರುವ ಎಚ್ಚರಿಕೆ ವಹಿಸಬೇಕು. ಉದಾಹರಣೆಗೆ ಓರ್ವ ಸಜ್ಜನ ಅಥವಾ ಸಾಧಕ ಜೀವಿ ಇರುತ್ತಾನೆ ಎಂದುಕೊಳ್ಳುವಾ. ಅವನು ತನ್ನ ಸ್ವಭಾವ ಮತ್ತು ಧ್ಯೇಯ ಉತ್ತಮವಾಗಿದ್ದರೂ ದುರ್ಜನರ ಜೊತೆ ಒಡನಾಡುತ್ತಿದ್ದರೆ ಅವನ ಪ್ರವೃತ್ತಿಯೇ ಬದಲಾಗಬಹುದು ಅಥವಾ ದುರ್ಜನ ಎಂಬ ನಿಂದೆ ಬರಬಹುದು.

ಈ ವಚನದ ಮೂಲಕ ಧರ್ಮಪಿತರು ನಿಂದಕರಿಗೆ ಒಂದು ಸಂದೇಶವನ್ನು ನೀಡಿದ್ದಾರೆ ಎಂದೂ ಊಹಿಸಬಹುದು. ಒಬ್ಬ ವ್ಯಕ್ತಿ ಈಚಲು ಅಥವಾ ತಾಳೆಗಿಡದ ಕೆಳಗೆ ಕುಳಿತು ಏನನ್ನೋ ಕುಡಿಯುವುದನ್ನು ಓರ್ವ ವ್ಯಕ್ತಿ ನೋಡುತ್ತಾನೆ. ಅವನು ತಟ್ಟನೆ, ಅದು ಸೆರೆಯೇ ಇರಬೇಕು ಎಂಬ ನಿರ್ಣಯಕ್ಕೆ ಬಂದು ಅಪಪ್ರಚಾರಕ್ಕೆ ತೊಡಗಬಾರದು. ಪ್ರತ್ಯಕ್ಷ ನೋಡಿದರೂ ಪ್ರಮಾಣಿಸಿ ನೋಡಿ ಖಚಿತ ಪಡಿಸಿಕೊಳ್ಳಬೇಕು. ವೃಥಾ ನಿಂದೆ ಮಾಡುವುದು ಪಾಪ ಕಾರ್ಯ. ನಿಜ ಶರಣನು ಇಂಥಾ ಪ್ರವೃತ್ತಿಯನ್ನು ಬಿಡಬೇಕು.

95. ಸುಪಥದ ರೀತಿ ಬೇರೆ

ಸುಪಥ ಮಂತ್ರದ ಉಪದೇಶವ ಕಲಿತೂ ಯುಕ್ತಿಗೆಟ್ಟು ನಡೆವಿರಯ್ಯಾ;
ತತ್ವ ಮಸಿ ಎಂಬುದನರಿದು ಕತ್ತಲೆದೊಡುವಿರಯ್ಯಾ
ವೇದವಿಪ್ರರ ವಿಚಾರಿಸಿ ನೋಡಲು;
''ಉಪದೇಶ ಪರೀಕ್ಷೆ ನಾಯಕ ನರಕ,'' ಎಂದುದು
ಲಿಂಗದೇವನ ವಚನ ಸೂಚನೆ ! - ಬ.ವ.ದೀ-93

ಶರಣ ಪಥವು ಒಂದು ಸುಪಥ; ಮೂಢ ನಂಬಿಕೆಗಳಿಲ್ಲದ ವೈಚಾರಿಕತೆಯ ಹಿನ್ನೆಲೆಯಲ್ಲಿ ಧರ್ಮವನ್ನು ಬೋಧಿಸುವ ಪಥವಿದು. ಇದರ ದೀಕ್ಷೆಯನ್ನು ಪಡೆದು, ಮಂತ್ರೋಪದೇಶ ಹೊಂದಿದ ಬಳಿಕವೂ (ದೀಕ್ಷಾ ಪೂರ್ವದ ಆಚರಣೆಗಳನ್ನು ತೊರೆಯದೆ) ವಿವೇಕರಹಿತರಾಗಿ ನಡೆಯುತ್ತೀರಿ. ಪುನಃ ತತ್ತ್ವಂ ಅಂದರೆ ಅದೇ (ಆ ಬ್ರಹ್ಮನೇ) ನಾನು ಎಂಬ ಅದ್ವೈತಕ್ಕೆ ಹೋಗಿ ಕತ್ತಲೆಯನ್ನು ಹೊದ್ದುಕೊಳ್ಳುವಿರಿ. ಎನ್ನುತ್ತಾರೆ ಗುರು ಬಸವಣ್ಣನವರು.

''ತತ್ತ್ವಂ ಅಸಿ'' -ತತ್= ಅದುವೆ, ತ್ವಂ = ನೀನು, ಅಸಿ = ಇದ್ದೀಯೆ ಎಂದು ಗುರುವು ಬೋಧೆ ಮಾಡುತ್ತಾನೆ. ಆಗ ಶಿಷ್ಯನು ಅಹಂ = ನಾನು, ಬ್ರಹ್ಮ= ದೇವನು, ಅಸ್ಮಿ = ಇದ್ದೇನೆ ಎಂದು ಭಾವಿಸುತ್ತಾನೆ. ಇದು ಅದ್ವೈತ ಸಿದ್ಧಾಂತ . ಇದನ್ನು ಗುರು ಬಸವಣ್ಣನವರು ಒಪ್ಪುವುದಿಲ್ಲ. ಸೋಹಂ ಎಂದು ಜನ್ಮ ಜನ್ಮಕ್ಕೆ ಹೋಗಲೀಯದೆ ದಾಸೋಹಂ ಎಂದೆನಿಸಯ್ಯ. ಎನ್ನುತ್ತಾರೆ ಧರ್ಮಪಿತರು. ಸ = ದೇವನೆ, ಅಹಂ = ನಾನು ಎಂಬ ಹಮ್ಮಿನಿಂದ ಅನಂತ ಜನ್ಮಗಳನ್ನು ಎತ್ತಬೇಕಾಗುತ್ತದೆ. ಆದ್ದರಿಂದ ದಾಸ = (ದೇವರ) ಸೇವಕ, ಅಹಂ = ನಾನು ಎಂಬ ಶರಣಾಗತ ಭಾವ ಹೊಂದಲು ಅನುಗ್ರಹಿಸು ಎಂದು ಲಿಂಗದೇವನಲ್ಲಿ ಬೇಡುತ್ತಾರೆ. ಲಿಂಗಾಯತ ಧರ್ಮ ಅದ್ವೈತ ಸಿದ್ಧಾಂತದಿಂದ ಕೆಲವು ಕಾರಣಗಳಿಗಾಗಿ ಬೇರೆಯಾಗುತ್ತದೆ.

1. ಜೀವನೇ ದೇವನಲ್ಲ. ಹಾಲಿನಲ್ಲಿ ತುಪ್ಪ, ಹೂವಿನಲ್ಲಿ ವಾಸನೆ ಇರುವಂತೆ ಜೀವನಲ್ಲಿ ದೇವನು ಇದ್ದಾನೆ.

2. ಅವನೇ (ದೇವನೆ) ನಾನು ಎನ್ನುವುದರಲ್ಲಿ ಅಹಂಕಾರವಿದೆ. ನಾನೆ ದೇವನು ಎಂದಾಗ ಪೂಜೆಗೆ ಅವಕಾಶವೆಲ್ಲಿದೆ ? ಆದ್ದರಿಂದ ಆತ್ಯಂತಿಕ ಶಕ್ತಿಯಾದ ಸೃಷ್ಟಿಕರ್ತನಿಗೆ ಶರಣಾಗಬೇಕೇ ವಿನಾ ಅವನೇ ನಾನು ಎನ್ನಬಾರದು. ಹೀಗಾಗಿ ವಚನ ಸಾಹಿತ್ಯದಲ್ಲಿ ದೇವನಿಗೆ ಪರಮೋನ್ನತ ಸ್ಥಾನ. ದೇವರು ಧರ್ಮದಲ್ಲಿ ಹಾಸು - ಹೊಕ್ಕು. ದೇವನ ಕಾರುಣ್ಯಕ್ಕೆ ಬಹಳ ಮಹತ್ವ ನೀಡಲಾಗುವುದು. ಈ ಹಿನ್ನೆಲೆಯಲ್ಲೇ ಅಲ್ಲಮ ಪ್ರಭು ದೇವರು, ''ಅದ್ವೈತವ ನುಡಿದು ಅಹಂಕಾರಿಯಾದೆನು ; ಬ್ರಹ್ಮವ ನುಡಿದು ಭ್ರಮಿತನಾದೆನು.''

ಎಂದು ಹೇಳಿರುವುದು. ಆದ್ದರಿಂದಲೇ ತತ್ತ್ವಂ ಅಸಿ ಎಂಬುದು ಕತ್ತಲೆಯನ್ನು ಹೊದ್ದಿಸುವುದು ಎಂದು ಹೇಳಿರುವುದು.

ವೇದ ವಿಪ್ರರ ವಿಚಾರಿಸಿ ನೋಡಲು, ಉಪದೇಶ ಪರೀಕ್ಷೆ ನಾಯಕ ನರಕ ಎಂದುದು ಲಿಂಗದೇವನ ವಚನ ಸೂಚನೆ.

''ಗುರು ಲಿಂಗ ಜಂಗಮವನ್ನು ದೃಢವಾಗಿ ನಂಬಿರಿ, ಏಕದೇವೋಪಾಸಕರಾಗಿರಿ'' ಎಂದು ಬಸವ ಧರ್ಮ ಬೋಧಿಸುತ್ತದೆ. ದೀಕ್ಷೆಗೆ ಮೊದಲು ಎಲ್ಲದಕ್ಕೂ ಬ್ರಾಹ್ಮಣರನ್ನು, ಪಂಚಾಂಗವನ್ನು ಕೇಳುವುದು ಜನರ ಸ್ವಭಾವ . ದೀಕ್ಷಾ ನಂತರ ಅಂಥ ನಂಬಿಕೆ, ಆಚರಣೆ ತೊರೆಯಬೇಕು. ಆದರೆ ಸರಿಯಾಗಿ ತತ್ವ ಅಳವಡದ ಜನರು ವೇದ ಪಂಡಿತರಾದ ವಿಪ್ರರ ಬಳಿಗೆ ಹೋಗಿ, ''ನಮ್ಮ ಗುರುಗಳು ಹೀಗೆ ಉಪದೇಶಿಸಿದ್ದಾರೆ. ಇದು ಸರಿಯೆ ? ಇದೊಂದನ್ನೇ (ಇಷ್ಟಲಿಂಗವೊಂದನ್ನೇ) ಪೂಜಿಸುವ ಮೂಲಕ ನಮ್ಮ ಕಷ್ಟವನ್ನು ಬಗೆ ಹರಿಸಿಕೊಳ್ಳಬಹುದೆ? ಗುರು ಕೊಟ್ಟ ಮಂತ್ರ ಒಂದೇ ಸಾಕೆ?'' ಹೀಗೆಲ್ಲ ಪರೀಕ್ಷಿಸಲು ಹೋದರೆ, ''ಈ ಅಲ್ಪ ವಿಶ್ವಾಸಿ ಜನರಿಗೆ ಖಂಡಿತಾ ನರಕ ಪ್ರಾಪ್ತಿ. ಇದನ್ನು ಲಿಂಗದೇವನ ಸಾಕ್ಷಿಯಾಗಿ ನಾನು ಹೇಳುತ್ತೇನೆ.'' ಎನ್ನುತ್ತಾರೆ ಧರ್ಮಪಿತರು. ಇಂಥ ದೃಢವಾದ ಮಾತುಗಳು ಧರ್ಮಪಿತರ ಆದೇಶಗಳು ಎಂಬುದನ್ನು ನಾವು ಅರಿಯಬೇಕು.

96. ದುರ್ಬಲ ಮನದ ಭಕ್ತ

ಕುಂಬಳದ ಕಾಯಿಗೆ ಕಬ್ಬುನದ ಕಟ್ಟ ಕೊಟ್ಟಡೆ
ಕೊಳೆವುದಲ್ಲದೆ ಬಲುಹಾಗಬಲ್ಲುದೆ?
ಅಳಿಮನದವಂಗೆ ಶಿವದೀಕ್ಷೆಯ ಕೊಟ್ಟಡೆ
ಭಕ್ತಿಯೆಂತಹುದೋ? ಮುನ್ನಿನಂತೆ !
ಲಿಂಗದೇವಯ್ಯಾ,
ಮನ ಹೀನನ ಮೀಸಲ ಕಾಯಲು ಇರಿಸಿದಂತೆ ! - ಬ.ವ.ದೀ.94

ಕುಂಬಳ ಕಾಯಿಗೆ ಕಬ್ಬಿಣದ ಕಟ್ಟು ಕೊಟ್ಟರೆ ಅದು ಒಳಗೇ ಕೊಳೆಯುತ್ತ ಹೋಗುವುದೇ ವಿನಾ ಕಬ್ಬಿಣದ ಕಟ್ಟಿನಿಂದ ಏನೂ ಪ್ರಯೋಜನವಾಗದು ; ಕಾಯಿಯೇನೂ ಬಲಗೊಳ್ಳದು. ಅದೇ ರೀತಿ ದುರ್ಬಲ ಮನದ ವ್ಯಕ್ತಿಗೆ ದೀಕ್ಷೆಯನ್ನು ಕೊಟ್ಟರೆ ಅವನ ಭಕ್ತಿಯಲ್ಲಿ, ವ್ಯಕ್ತಿತ್ವದಲ್ಲಿ, ಆಚರಣೆಯಲ್ಲಿ ಏನೂ ಬದಲಾವಣೆ ಕಾಣದು. ದುರ್ಬಲ ಮನಸ್ಸಿನವನನ್ನು ಮೀಸಲು ಕಾಯಲು ನಿಲ್ಲಿಸಿದರೆ ಅವನು ಆಮಿಷ, ಪ್ರಚೋದನೆ ತಡೆದುಕೊಳ್ಳಲಾರದೆ ಆ ಮೀಸಲು ಅಡಿಗೆಯನ್ನು ಎಂಜಲು ಮಾಡಿಯೇ ಬಿಡುತ್ತಾನೆ. ಅದೇ ರೀತಿ ದುರ್ಬಲನು ನಿಯಮಗಳನ್ನು ಪಾಲಿಸಲಾರದೆ, ವ್ರತವನ್ನು ಪಾಲಿಸಲಾರದೆ ಸೋಲುತ್ತಾನೆ.

97. ಅಳಿಮನದ ಭಕ್ತ

ಸಗಣಿಯ ಬೆನಕಂಗೆ ಸಂಪಗೆಯರಳಲ್ಲಿ ಪೂಜಿಸಿದರೆ
ರಂಜನೆಯಲ್ಲದೆ ಅದರ ಗಂಜಳ ಬಿಡದಣ್ಣಾ !
ಮಣ್ಣು ಪುತ್ಥಳಿಯ ಮಾಣದೆ ಜಲದಲ್ಲಿ ತೊಳೆದರೆ
ನಿಚ್ಚ ನಿಚ್ಚಕ್ಕೆ ಕೆಸರಹುದಲ್ಲದೆ ಅದರಚ್ಚುಗ ಬಿಡದಣ್ಣಾ !
ಲೋಕದ ಮಾನವಂಗೆ ಶಿವದೀಕ್ಷೆಯ ಕೊಟ್ಟರೆ,
ಕೆಟ್ಟವನೇಕೆ ಸದ್ಭಕ್ತನಹನು ಲಿಂಗದೇವಾ? - ಬ.ವ.ದೀ.95

ಮೂಢ ನಂಬಿಕೆಗಳಲ್ಲಿ ಸಗಣಿಯಿಂದ ಬೆನಕನನ್ನು ಮಾಡಿ ಪೂಜಿಸುವುದೂ ಒಂದು. ಸಗಣಿಯಿಂದ ಒಂದು ಉಂಡೆ ಮಾಡಿ ಅದಕ್ಕೆ ಗರಿಕೆ ಸಿಕ್ಕಿಸಿ ಗಣಪತಿ ಎಂದು ಮೂಢರು ಪೂಜಿಸುವರು. ಸಗಣಿಯಿಂದ ಮಾಡಿದ ಬೆನಕನನ್ನು ಸಂಪಿಗೆಯ ಹೂವುಗಳಿಂದ ಪೂಜಿಸಿದರೆ ಅದು ಒಂದು ಬಗೆಯ ಸಮಾಧಾನ ಕೊಡಬಹುದೇ ವಿನಾ ಗಂಜಳದ ವಾಸನೆ ಬಿಡದು. ಮಣ್ಣಿನ ಗೊಂಬೆಯೊಂದನ್ನು ನೀರಿನಲ್ಲಿ ತೊಳೆದರೆ ತೊಳೆದಂತೆಲ್ಲ ಕೆಸರು ಕೆಸರಾಗುವುದೇ ವಿನಾ ಅದರ ಸ್ವಭಾವ ಬಿಡದು. ಅದೇ ರೀತಿ ಲೌಕಿಕ ಸ್ವಭಾವದ ಮಾನವನಿಗೆ ದೀಕ್ಷೆ ಕೊಟ್ಟು ಮಂತ್ರೋಪದೇಶ ಮಾಡಿದರೆ ಅವನ ಕೆಟ್ಟತನ ತೊಲಗಿ ಹೋಗದು. ಯಾಂತ್ರಿಕವಾಗಿ ದೀಕ್ಷೆ ಮಾಡಿಸಿಕೊಳ್ಳುವರೇ ವಿನಾ ಆಂತರಂಗಿಕವಾಗಿ ಬದಲಾವಣೆ ಹೊಂದರು.

98. ಅರೆ ಭಕ್ತರು

ಕಬ್ಬುನದ ಕೋಡಗವ ಪರುಷ ಮುಟ್ಟಲು
ಹೊನ್ನಾದರೇನು ಮತ್ತೇನಾದರೇನು

ತನ್ನ ಮುನ್ನಿನ ರೂಹ ಬಿಡದನ್ನಕ್ಕ? ಲಿಂಗದೇವಾ,
ನಿಮ್ಮ ನಂಬಿಯೂ ನಂಬದ ಡಂಭಕರಯ್ಯಾ! - ಬ.ವ.ದೀ.96

ಕಾವ್ಯ ಪುರಾಣಗಳಲ್ಲಿ ಒಂದು ಪರಿಕಲ್ಪನೆ ಬರುತ್ತದೆ. ಪರುಷ ಎನ್ನುವ ಒಂದು ವಸ್ತು ಉಂಟು. ಅದು ಕಬ್ಬಿಣವನ್ನು ಸ್ಪರ್ಶಿಸಿದಾಗ ಅದು ಬಂಗಾರವಾಗಿ ಪರಿವರ್ತನೆಗೊಳ್ಳುವುದು. ಒಂದು ಕೋತಿಯ ಗೊಂಬೆ ಇರುತ್ತದೆ ಎಂದುಕೊಳ್ಳುವ. ಅದನ್ನು ಪರುಷ ಮುಟ್ಟಿದರೆ ಅದು ಬಂಗಾರದ ಕೋತಿಯಾಗುತ್ತದೆ ಆಕಾರದಲ್ಲಿ ಬದಲಾವಣೆ ಹೊಂದದು, ಆಂತರ್ಯದಲ್ಲೂ ಬದಲಾವಣೆ ಹೊಂದದು. ಹಾಗೆಯೇ ಕೆಲವರು ಭಕ್ತರಾದ ಮೇಲೆ ಅವರ ಹಣೆಯಲ್ಲಿ ವಿಭೂತಿ, ಕೊರಳಲ್ಲಿ ರುದ್ರಾಕ್ಷಿ, ಎದೆಯ ಮೇಲೆ ಲಿಂಗ, ಮೈ ಮೇಲೆ ಶುಭ್ರವಾದ ಬಟ್ಟೆಗಳು ಕಾಣಬರುತ್ತವೆ. ಆದರೆ ಆಂತರ್ಯದಲ್ಲಿ ಏಕದೇವ ವಿಶ್ವಾಸ, ಇಷ್ಟಲಿಂಗ ನಿಷ್ಠೆ ಅಳವಟ್ಟಿರುವುದಿಲ್ಲ. ಇವರು ದೇವರನ್ನು ನಂಬಿಯೂ ನಂಬದೆ ಇರುವ ಡಾಂಭಿಕ ಭಕ್ತರು. ದೀಕ್ಷೆಯ ನಂತರ ಹಳೆಯ ಮೂಢನಂಬಿಕೆ, ನಿಷಿದ್ಧ ಆಚರಣೆಗಳನ್ನು ತೊರೆಯುವುದು ಅವಶ್ಯ.

99. ಕಪಟತನ ಸಲ್ಲದು

ತನುವಿನಲೊಂದಿಟ್ಟು ಮನದಲೆರಡಿಟ್ಟಡೆ,
ಬಲ್ಲನೊಲ್ಲನಯ್ಯಾ ಲಿಂಗವು ಬಲ್ಲನೊಲ್ಲನಯ್ಯಾ,
ಪರಚಿಂತೆಯನೊಲ್ಲವೊಲ್ಲ ಲಿಂಗದೇವ. - ಬ.ವ.ದೀ. 97

ಹೊರಗಡೆ ತೋರಿಸುವುದು ಒಂದು ರೀತಿ, ಒಳಗಡೆ ಆಲೋಚಿಸುವುದು ಇನ್ನೊಂದು ರೀತಿ. ಇಂಥ ದ್ವಂದ್ವ ನಿಲುವನ್ನು, ಕಪಟತನವನ್ನು ದೇವರು ಮೆಚ್ಚನು. ಹೊರಗಡೆ ಜೇನು ತುಪ್ಪವನ್ನೇ ಸುರಿಸಿದಂತಹ ಸ್ನೇಹದ ಮಾತುಗಳು , ಒಳಗಡೆ ದ್ವೇಷ, ಅಸೂಯೆ, ಈರ್ಷೆಯ ಚಿಂತನೆ! ಇದು ವಿಶ್ವಾಸ ಘಾತುಕತನ. ಇದನ್ನು ಲಿಂಗದೇವರು ಮೆಚ್ಚುವುದಿಲ್ಲ. ಏಕೆಂದರೆ ಸರ್ವದ್ರಷ್ಟಾರನಾದ ದೇವನಿಗೆ ವ್ಯಕ್ತಿಯ ಅಂತರಂಗದ ಅರಿವಿರುತ್ತದೆ. ಆದ್ದರಿಂದ ಇನ್ನೊಬ್ಬರ ಬಗ್ಗೆ ಮಾಡುವ ಕೆಟ್ಟ ಚಿಂತನೆಯನ್ನು ದೇವರು ಒಪ್ಪುವುದಿಲ್ಲ.

ವಿಶೇಷ ಎಚ್ಚರಿಕೆ: ಪರ ಚಿಂತೆ ಎಂಬುದನ್ನು ಎಚ್ಚರಿಕೆಯಿಂದ ಅರ್ಥ ಮಾಡಬೇಕು. ಬೇರೆಯವರ ಕಷ್ಟ ಸುಖಕ್ಕೆ ನಾವು ಸ್ಪಂದಿಸಬಾರದೆಂದಲ್ಲ ನಮ್ಮ ತಪ್ಪನ್ನು ನಾವು ತಿದ್ದಿಕೊಳ್ಳದೆ ಇನ್ನೊಬ್ಬರ ಓರೆಕೋರೆಯ ಬಗ್ಗೆ ಚಿಂತಿಸುವುದು ; ಅವರ ಏಳಿಗೆಯನ್ನು ಕಂಡು ಕರುಬುವುದು, ವಿನಾ ಕಾರಣ ಅವರ ಬಗ್ಗೆ ಆಡಿಕೊಳ್ಳುವುದನ್ನು ಮಾಡಬಾರದೆಂದು ಇದರ ಅರ್ಥ.

100. ದ್ವಂದ್ವ ನಿಲುವು ಸಲ್ಲದು

ಒಳಗೆ ಕುಟಿಲ ಹೊರಗೆ ವಿನಯವಾಗಿ ಭಕ್ತರೆನಿಸಿಕೊಂಬವರ
ಬಲ್ಲನೊಲ್ಲನಯ್ಯಾ, ಲಿಂಗವು ಬಲ್ಲನೊಲ್ಲನಯ್ಯಾ.
ಪರಚಿಂತೆಯನೊಲ್ಲವೊಲ್ಲ ಲಿಂಗದೇವ. - ಬ.ವ.ದೀ.98

ಮಾತಿನಲ್ಲಿ ವಿನಯ ಮನದಲ್ಲಿ ಕುಟಿಲತೆಯ ಕತ್ತರಿ; ಕೆಲವರ ಸ್ವಾಭಾವಿಕ ಗುಣವಾಗಿರುತ್ತದೆ. ಕೆಲವರು ದಾನಿಗಳಂತೆ ತೋರಿಸಿಕೊಳ್ಳುತ್ತಾರೆ. ಕೇಳಲು ಬಂದವರಿಗೆ ನಂಬಿಕೆ ಹುಟ್ಟುವಂತೆ ಮಾತನಾಡುತ್ತಾರೆ. ಹತ್ತಾರು ಬಾರಿ ಅಲೆಸುತ್ತಾರೆ. ಕಡೆಗೆ ರೋಸಿ ಹೋಗಿ ಕೇಳಲು ಹೋಗುವುದನ್ನೇ ಬಿಡುಬೇಕು. ಈ ಕಾಲದಲ್ಲಂತೂ ನಂತರದ ದಿನಾಂಕ ಹಾಕಿ ಚೆಕ್ ಕೊಡುತ್ತಾರೆ. ಖಾತೆಯಲ್ಲಿ ಕಮ್ಮಿ ಹಣ ಇಟ್ಟು, ಚೆಕ್ ನಗದಾಗದಂತೆ ಮಾಡುತ್ತಾರೆ. ದಾನ ಕೇಳಿದವನೇ ಬೆಚ್ಚಿ ಬೀಳಬೇಕು. ಜೊತೆಗೆ ದಂಡವನ್ನು ಕಟ್ಟಿ ತನ್ನ ಹಣವನ್ನೇ ಕಳೆದುಕೊಳ್ಳಬೇಕು. ಇದು ಭಕ್ತರ ನಡೆಯಲ್ಲ. ಪ್ರತಿಯೊಬ್ಬರ ಅಂತರಂಗವನ್ನು ದೇವನು ಬಲ್ಲನಾಗಿ ಅಂಥ ಕುಟಿಲ ಭಕ್ತರನ್ನು ಇಷ್ಟಪಡನು . ಇಂಥವರು ಸತ್‌ಪಥವಾದ ಶರಣ ಪಥಕ್ಕೆ ಸಲ್ಲರು. ಒಳಗೆ ಹೊರಗೆ ಒಂದೇ ಆಗಿರುವ ಪಾರದರ್ಶಕ ಸ್ವಭಾವ ದೇವರಿಗೆ ಬಲು ಇಷ್ಟ. ಕಪಟತನ ಉಳ್ಳವರಿಗೆ ಕ್ಷುಲ್ಲಕ ಆಸೆಗಳನ್ನು ಮುಂದೊಡ್ಡಿ ಜಗದೀಶನಾದ ಲಿಂಗದೇವನು ಅವರನ್ನು ದೂರವಿಡುವನು.

101. ಮನೆಯೊಡೆಯನ ಇರುವಿಕೆ

ಮನೆಯೊಳಗೆ ಮನೆಯೊಡೆಯನಿದ್ದಾನೋ ಇಲ್ಲವೋ?
ಹೊಸ್ತಿಲಲ್ಲಿ ಹುಲ್ಲು ಹುಟ್ಟಿ, ಮನೆಯೊಳಗೆ ರಜ ತುಂಬಿ
ಮನೆಯೊಳಗೆ ಮನೆಯೊಡೆಯನಿದ್ದಾನೊ ಇಲ್ಲವೊ?
ತನುವಿನೊಳಗೆ ಹುಸಿ ತುಂಬಿ, ಮನದೊಳಗೆ ವಿಷಯ ತುಂಬಿ
ಮನೆಯೊಳಗೆ ಮನೆಯೊಡೆಯನಿಲ್ಲ ಲಿಂಗದೇವ ! - ಬ.ವ.ದೀ-99

ಧರ್ಮಪಿತ ಬಸವಣ್ಣನವರ ಅತ್ಯಂತ ಜನಪ್ರಿಯ ವಚನಗಳಲ್ಲಿ ಇದೂ ಒಂದು. ಇಲ್ಲಿಯ ರೂಪಕವೊಂದು ನಮ್ಮನ್ನು ತಟ್ಟನೆ ಹಿಡಿದು ನಿಲ್ಲಿಸುತ್ತದೆ. ಒಂದು ದಿನ ಪ್ರಧಾನಿ ಗುರು ಬಸವಣ್ಣನವರು

ನಗರ ಸಂಚಾರದಲ್ಲಿ ನಿರತರಾಗಿರುತ್ತಾರೆ. ಒಂದು ಮನೆಯ ಮುಂದೆ ಹೋಗುವಾಗ ಆ ಮನೆಯ ಮುಂದಿನ ಪರಿಸ್ಥಿತಿ ಗಮನವನ್ನು ಸೆಳೆಯುತ್ತದೆ. ಹೊಸ್ತಿಲಲ್ಲಿ ಹುಲ್ಲು ಹುಟ್ಟಿದೆ. ಇದರರ್ಥ ಯಾರೂ ಒಳಗೆ ಹೊರಗೆ ಓಡಾಡುತ್ತಿಲ್ಲ ಎಂದು. ನೋಡುವಾ ಎಂದು. ಕಿಟಕಿಯಲ್ಲಿ ಇಣುಕಿ ನೋಡಿದರೆ ಒಳಗೆಲ್ಲ ಕಸ ಕಡ್ಡಿ, ಜೇಡರ ಬಲೆ, ಹಲ್ಲಿಗಳ ಹರಿದಾಟ ಇದರಿಂದ ಊಹಿಸುವುದೇನೆಂದರೆ ಮನೆಯಲ್ಲಿ ಮಾಲಿಕರು ವಾಸವಾಗಿಲ್ಲ ಎಂಬುದನ್ನು. ಇದು ದೃಷ್ಟಾಂತ. ಇದರ ದ್ರಾಷ್ಟಾಂತವೇನೆಂದರೆ ಶರೀರ ಎಂಬುದೇ ಒಂದು ಮನೆ. ಇದಕ್ಕೆ ಬಾಯಿಯೇ ಮುಂಬಾಗಿಲು. ತುಟಿಯೇ ಇದರ ಹೊಸ್ತಿಲು. ತುಟಿಯ ಮೇಲೆ ಸುಳ್ಳು ಎನ್ನುವ ಹಸಿ ಹುಲ್ಲು ಬೆಳೆಯುತ್ತಿದ್ದರೆ, ಮನಸ್ಸಿನೊಳಗೆ ವಿಷಯ ಕಾಮಕ್ರೋಧಾದಿಗಳ ಜೇಡರ ಬಲೆ ಕಟ್ಟಲ್ಪಟ್ಟು ದೌರ್ಬಲ್ಯದ ಕಸಕಡ್ಡಿ ಬಿದ್ದು, ಚಂಚಲತೆಯ ಹಲ್ಲಿ ಹರಿದಾಡುತ್ತಿದ್ದರೆ ಅಂಥಲ್ಲಿ ಮನೆ (ಮನ) ಯೊಡೆಯನಾದ ಲಿಂಗದೇವನು ಖಂಡಿತಾ ಇರಲು ಸಾಧ್ಯವಿಲ್ಲ.

102. ಯಾಂತ್ರಿಕ ಭಕ್ತಿ

ಒಡೆತ್ತ ಬಲ್ಲುದು ಅವಲಕ್ಕಿ ಸವಿಯ ?
ಕೋಡುಗ ಬಲ್ಲುದೆ ಸೆಳೆಮಂಚದ ಸುಖವ?
ಕಾಗೆ ನಂದನವನದೊಳಗಿದ್ದಡೇನು
ಕೋಗಿಲೆಯಾಗಬಲ್ಲುದೆ ಹೇಳಾ?
ಕೊಳನ ತಡಿಯಲೊಂದು ಹೊರಸು ಕುಳ್ಳಿರ್ದಡೇನು
ಕಳಹಂಸೆಯಾಗಬಲ್ಲುದೆ, ಲಿಂಗದೇವಾ? - ಬ.ವ.ದೀ.100

ಅವಲಕ್ಕಿಯ ಒಗ್ಗರಣೆ ಹಾಕುವ, ಹುರಿಯುವ ಓಡು ಇದೆ. ಅದರ ಮೇಲೆ ಅವಲಕ್ಕಿ ಚೂಡಾ ಮಾಡುತ್ತಾರೆ ಎಂದುಕೊಳ್ಳುವ. ಆ ಓಡು ಅಥವಾ ಹೆಂಚಿಗೆ ಅವಲಕ್ಕಿಯ ಸವಿ ಗೊತ್ತಿಲ್ಲ. ಯಾಂತ್ರಿಕವಾಗಿ ಅದು ಹುರಿಯುತ್ತದೆ. ಒಂದು ಮೆತ್ತನೆಯ ಸುಪ್ಪತ್ತಿಗೆಯನ್ನು ಹಾಸಿದ ಮಂಚದ ಮೇಲೆ ಕೋಡಗವೊಂದನ್ನು ಕುಳ್ಳಿರಿಸಲಾಗುವುದು ಎಂದುಕೊಳ್ಳುವಾ. ಆ ಕೋತಿಗೆ ಯಾವ ರೀತಿ ಆ ಹಾಸಿಗೆಯನ್ನು ಬಳಸಿಕೊಳ್ಳಬೇಕು ಎಂಬುದು ತಿಳಿಯುವುದೇ ಇಲ್ಲ. ಕಾಗೆ ನಂದನವನದಲ್ಲಿದ್ದು ಮಾಮರದ ಚಿಗುರನ್ನೇ ತಿಂದರೂ ಅದರ ಕಂಠ ಕರ್ಕಶವಾಗಿರುವುದೇ ವಿನಾ ಅದು ಕೋಗಿಲೆಯಂತಾಗುವುದಿಲ್ಲ. ಸುಂದರವಾದ ಸರೋವರದ ದಂಡೆಯಲ್ಲಿ ಒಂದು ನೀರುಕೋಳಿ ಇದೆ ಎಂದುಕೊಳ್ಳವಾ. ಸರೋವರದ ನೀರು ಕುಡಿದು ಅದರಲ್ಲಿ ವಿಹರಿಸಿದ ಮಾತ್ರಕ್ಕೆ ಕೊಕ್ಕರೆಯು ಕಳಹಂಸೆಯಾಗುವುದಿಲ್ಲವಷ್ಟೆ ?

ಈ ವಚನದಲ್ಲಿ ಧರ್ಮಪಿತ ಬಸವಣ್ಣನವರು ಕೇವಲ ಹೋಲಿಕೆಗಳನ್ನು ಮಾತ್ರ ಕೊಡುತ್ತಾ ಹೋಗುವರೇ ವಿನಾ ಯಾವ ವಿಶಿಷ್ಟ ಸಂದೇಶವನ್ನು, ತೀರ್ಪನ್ನು ಕೊಟ್ಟಿಲ್ಲ. ಆದರೆ, ನಾವು ಹೀಗೆಲ್ಲ ಊಹಿಸಬಹುದು. ಒಬ್ಬ ಕೀರ್ತನಕಾರ, ಗಿಳಿಯೋದಿನ ಪಂಡಿತ ರಂಜನೀಯವಾಗಿ ಧಾರ್ಮಿಕ ಉಪದೇಶವನ್ನು ಮಾಡುತ್ತಾನೆ. ತಾನು ಅದರ ಸವಿಯನ್ನು ಸವಿಯದೆ ಇರುವನು . ಇವನು ಅವಲಕ್ಕಿಯನ್ನು ಹುರಿಯುವ ಬಾಣಲೆಯಂತೆ !

ಸುಪ್ಪತ್ತಿಗೆಯ ಹಾಸಿಗೆಯ ಸುಖವ ಹೇಗೆ ಕೋತಿಯು ಆನಂದಿಸುವುದಿಲ್ಲವೋ ಹಾಗೆ ಕೆಲವು ಧರ್ಮವಂತರು ತನ್ನ ಧರ್ಮವು ಹೊಂದಿರುವ ತತ್ತ್ವದ ಘನತೆಯನ್ನು, ಮಹತಿಯನ್ನು ಅರಿಯದಂತಹ ಸ್ಥಿತಿಯಲ್ಲಿ ಇರುವರು. ಕೆಲವರು ಶರಣರ ಸಂಗದಲ್ಲೇ ಸತತವಾಗಿ ಒಡನಾಡಿದರೂ ಯಾವ ಆದರ್ಶವನ್ನೂ ಬೆಳೆಸಿಕೊಳ್ಳುವುದಿಲ್ಲ. ಕೋಗಿಲೆಯಂತಹ ಮೃದು ಮಾತನಾಡುವ ಶಿಷ್ಟಾಚಾರ ಬೆಳೆಸಿಕೊಳ್ಳದೆ ಕಾಗೆಯ ಒದರಾಟದ ಧ್ವನಿಯನ್ನೇ ವೃದ್ಧಿ ಮಾಡಿಕೊಳ್ಳುವರು. ಶರಣ ಸಂಸ್ಕೃತಿಯ ಪರಿಸರದಲ್ಲಿ ಹುಟ್ಟಿ, ಬೆಳೆದರೂ ಸಾತ್ವಿಕ, ಅಧ್ಯಾತ್ಮಿಕ ಪ್ರವೃತ್ತಿ ಬೆಳೆಸಿಕೊಳ್ಳಲಾರದವರು ಕೆಲವರಿರುತ್ತಾರೆ. ಇವರ ಸ್ವಭಾವಗಳೇ ಹಾಗಿರುತ್ತವೆ. ಅವರಿಂದ ಬದಲಾವಣೆ ನಿರೀಕ್ಷಿಸುವುದೇ ತಪ್ಪೇನೋ !

103. ನೀರೊಳಗಣ ಕಲ್ಲು

ಎನಿಸು ಕಾಲ ಕಲ್ಲು ನೀರೊಳಗಿದ್ದಡೇನು ;
ನೆನೆದು ಮೃದುವಾಗಬಲ್ಲುದೆ ?
ಎನಿಸು ಕಾಲ ನಿಮ್ಮ ಪೂಜಿಸಿ ಏವೆನಯ್ಯಾ
ಮನದಲ್ಲಿ ದೃಢವಿಲ್ಲದನ್ನಕ್ಕ?
ನಿಧಾನವ ಕಾಯ್ದಿರ್ದ ಬೆಂತರನಂತೆ-
ಅದರ ವಿಧಿ ಎನಗಾಯಿತ್ತು, ಲಿಂಗದೇವಾ. - ಬ.ವ.ದೀ.101

ಕಲ್ಲು ನೀರೊಳಗೆ ಎಷ್ಟು ಕಾಲ ಇದ್ದರೂ ನೀರನ್ನು ಹೀರಿಕೊಂಡು ಮೃದುವಾಗುವುದಿಲ್ಲ. ಎಷ್ಟು ಕಾಲ ಪೂಜಿಸಿದರೂ ಮನಸ್ಸು ದೃಢಗೊಳ್ಳದಿದ್ದರೆ ಆ ಮನಸ್ಸು ನೀರಿನೊಳಗಣ ಕಲ್ಲಿನಂತೆ! ಚಂಚಲತೆಯನ್ನು ಕಳೆದುಕೊಂಡು ಶಾಂತವಾಗಬೇಕು. ಹೀಗಾಗದೇ ಇದ್ದರೆ ಪೂಜಿಸಿ ಫಲವೇನು ? ಭೂಮಿಯಲ್ಲಿ ನಿಧಿ - ನಿಧಾನವಿದ್ದಾಗ ಬೆಂತರ ಎನ್ನುವ ಒಂದು ಪಿಶಾಚಿ ಅದನ್ನು ಕಾಯುತ್ತದೆ ಎಂಬ (ಮೂಢ) ನಂಬಿಕೆ ಗ್ರಾಮೀಣ ಜನರಲ್ಲಿದೆ. ಅದಕ್ಕೆ ನಿಧಿಯನ್ನು ಬಳಸಲು ಬರುವುದಿಲ್ಲ. ಅದೇ ರೀತಿ ಯಾವ ಆಂತರಿಕ ಪರಿವರ್ತನೆ ಇಲ್ಲದೆ ಮಾಡುವ ಪೂಜೆ ವ್ಯರ್ಥ ಶ್ರಮ. ನಿಧಾನವನ್ನು ಕಾಯುವ ಪಿಶಾಚಿಯಂತೆ; ಪೂಜೆಯಿಂದ ಸಿಗುವ ಆನಂದ ಎನ್ನುವ ನಿಧಿ ಯಾಂತ್ರಿಕ ಪೂಜಕನಿಗೆ ಸಿಗುವುದಿಲ್ಲ.

104. ಬಹುದೇವತೋಪಾಸನೆಯ ಗೊಂದಲ

ಸಂತವಿದ್ದ ಮನೆಗೆ ಕೊಂತವ ತಂದಂತೆ
ಇದನೆಂತು ಸಂತೈಸುವೆನು?
ಸಂತೆಯ ಗುಡಿಸಲ ಸೂಳೆಗೆ ಕೊಂತವಳವಡವುದೆ?
ಲಿಂಗದೇವರ ಮಹತ್ವ ಆರಿಗೆಯೂ ಅಳವಡದು! - ಬ.ವ.ದೀ.102

ಶಾಂತವಾಗಿರುವ ಮನೆಗೆ ಒಂದು ಆಯುಧವನ್ನು ತಂದರೆ ಅದು ಅನವಶ್ಯಕ ಸಮಸ್ಯೆಗೆ ಕಾರಣವಾಗುವುದು. ಒಬ್ಬರೊಬ್ಬರಲ್ಲಿ ಅವಿಶ್ವಾಸ, ಭಯವನ್ನು ಹುಟ್ಟಿಸುವುದು; ನಂತರ ಅದನ್ನು ನಿಯಂತ್ರಿಸುವುದು ಕಷ್ಟವಾಗುವುದು. ವೇಶ್ಯಾವೃತ್ತಿಯನ್ನು ನಡೆಸಲು ಓರ್ವ ವೇಶ್ಯೆ ಸಂತೆಯಲ್ಲಿ ಗುಡಿಸಲು ಹಾಕಿಕೊಂಡಿರುತ್ತಾಳೆ ಎಂದುಕೊಳ್ಳುವ. ಅವಳ ಗುಡಿಸಲಿನಲ್ಲಿ ಶಾಂತಿ ಅಳವಡಲು ಸಾಧ್ಯವೆ? ಸರತಿಯಲ್ಲಿ ಕಾಯುವ ವಿಟರು ಗಲಾಟೆ ಮಾಡುತ್ತಿರುತ್ತಾರೆ. ಅದೇ ರೀತಿ ಸೃಷ್ಟಿಕರ್ತನಾದ ಲಿಂಗದೇವನನ್ನು ಏಕ ನಿಷ್ಠೆಯಿಂದ ನಂಬದ ಬಹುದೇವತೋಪಾಸಕ ಭಕ್ತನ ಪರಿಸ್ಥಿತಿಯೂ ಕೂಡ.

ಈ ವಚನವು ತುಸು ಕಠೋರ ಎನ್ನಿಸಬಹುದು. ಬಹುದೇವತೋಪಾಸನೆಯನ್ನು ಗುರು ಬಸವಣ್ಣನವರೇ ಆದಿಯಾಗಿ ಎಲ್ಲ ಶರಣರು ಹಾದರ ಎಂದೇ ಕರೆದಿದ್ದಾರೆ. ನಮ್ಮ ದೇಶದಲ್ಲಿ ಮಾನವ ಸಮುದಾಯವನ್ನು ವಿಂಗಡಿಸುವ ಸಾಧನಗಳೆಂದರೆ ಜಾತಿಗಳು ಮತ್ತು ಹಲವು ದೈವಂಗಳು. ಒಂದೊಂದು ಜಾತಿ, ಒಂದು ಬುಡಕಟ್ಟಿಗೆ ಒಂದೊಂದು ದೈವ. ಇವುಗಳಿಂದ ಪರಸ್ಪರ ವೈಷಮ್ಯ. ಮೂಢ ನಂಬಿಕೆ ಬೆಳೆಯಲು ಬಹುದೇವತೋಪಾಸನೆ ಪ್ರಮುಖ ಕಾರಣ. ಬಹುದೇವತೋಪಾಸನೆ - ಶಾಂತವಿರುವ ಮನೆಗೆ ಒಂದು ಆಯುಧ ತಂದು ಇಟ್ಟುಕೊಂಡಂತೆ! ಭಕ್ತನು ವೇಶ್ಯೆಯಂತೆ ಹಲವಾರು ದೈವಂಗಳನ್ನು ಆರಾಧಿಸುವನು. ಈ ದೈವದ ಪೂಜೆ ಆದ ಮೇಲೆ ಇನ್ನೊಂದು ದೈವದ ಪೂಜೆ, ನಂತರ ಮತ್ತೊಂದರ ಪೂಜೆ. ಏಕಾಗ್ರತೆ ಇಲ್ಲ, ಶಾಂತಿ ಇಲ್ಲ. ಇದರ ಬದಲು, ಪತಿವ್ರತಾ ಹೆಣ್ಣುಮಗಳು ಒಬ್ಬ ಪತಿಯನ್ನು ನಂಬಿ, ಅವನ ಸೇವೆಯನ್ನು ಮಾಡುತ್ತಾ ಶಾಂತವಾದ ಜೀವನವನ್ನು ನಡೆಸುವಂತೆ ಭಕ್ತನು ಸಹ ಒಬ್ಬನೇ ಆದ ದೇವನನ್ನು ನಂಬಿ, ಇಷ್ಟಲಿಂಗ ರೂಪದಲ್ಲಿ ಆರಾಧಿಸಿದರೆ ಎಷ್ಟು ಹೊತ್ತು ಬೇಕಾದರೂ ಪೂಜಿಸಬಹುದು, ಧ್ಯಾನಿಸಬಹುದು, ಆನಂದಿಸಬಹುದು. ಏನು ಮಾಡುವುದು! ಲಿಂಗದೇವರ ಮಹತ್ವವು ಯಾರಿಗೂ ಅಳವಡದು! ಎಂದು ಗುರು ಬಸವಣ್ಣನವರು ವಿಷಾದಿಸುತ್ತಾರೆ.

105. ಧನದಾಸೆ ಬಲು ಹೀನ.

ಕೂಸುಳ್ಳ ಸೂಳೆ ಧನದಾಸೆಗೆ ಒತ್ತೆಯ ಕೊಂಡಡೆ
ಕೂಸಿಂಗಲ್ಲ; ಬೊಜಗಂಗಲ್ಲ!
ಕೂಸನೊಮ್ಮೆ ಸಂತೈಸುವಳು; ಬೊಜಗನನೊಮ್ಮೆ ನೆರೆವಳು,
ಧನದಾಸೆ ಬಿಡದು, ಲಿಂಗದೇವಾ? - ಬ.ವ.ದೀ.103

ಒಂದು ಚಿಕ್ಕ ಮಗು, ಹಾಲು ಕುಡಿಯುವ ಕಂದನು ಇರುವ ವೇಶ್ಯೆ ದುಡ್ಡಿನ ಆಸೆಗಾಗಿ ಪುರುಷ (ವಿಟ)ನಿಗೆ ಒತ್ತೆಯಾದರೆ ಬಹಳ ಧರ್ಮಸಂಕಟ ಅನುಭವಿಸುವಳು. ಆ ಪುರುಷನನ್ನು ತೃಪ್ತಿ ಪಡಿಸಬೇಕು. ಹಣ ಕೊಟ್ಟ ಅವನು ಅಧಿಕಾರವನ್ನು ಚಲಾಯಿಸುತ್ತಾನೆ. ಮಗುವು ಹಸಿದು ಅಳುತ್ತಿರುತ್ತದೆ. ಅದಕ್ಕೆ ಹಾಲೂಡಿಸಬೇಕು ಎಂಬ ಕರುಳಿನ ಕರೆ ಎಳೆಯುತ್ತಿರುತ್ತದೆ. ಈ ಹೊಯ್ದಾಟದಲ್ಲಿ ಆಕೆ ಘಾಸಿಯಾಗುತ್ತಿರುತ್ತಾಳೆ. ಅದೇ ರೀತಿ ಧನದ ಆಸೆ ಇರುವ ಶ್ರೀಮಂತನ ಪರಿಸ್ಥಿತಿ. ವಿವಾಹಿತ ಗೃಹಿಣಿಯಾದರೆ ಗಂಡನು ಮಗು ಅತ್ತಾಗ ಹಾಲೂಡಿಸಲು, ಮಗುವನ್ನು ಸಂತೈಸಲು ಸಹಕರಿಸುತ್ತಾನೆ. ಏಕೆಂದರೆ ಅವನಿಗೂ ಆ ಮಗುವಿಗೂ ಅನನ್ಯ ಸಂಬಂಧವಿರುತ್ತದೆ. ಬೊಜಗ (ವಿಟ)ನದು ಹಾಗಲ್ಲ. ಆ ಮಗು ಅವನದು ಅಲ್ಲವಾದ್ದರಿಂದ ಅವನಿಗೆ ಕರುಳಿನ ಬೆಸುಗೆ ಇರದು, ಅವನು ದೈಹಿಕ ಕಾಮನೆಯಿಂದ

ಪ್ರೇರಿತನಾಗಿ ಮಗುವನ್ನು ಕುರಿತು ನಿರ್ದಯವಾಗಿ ವರ್ತಿಸುವನು. ಶ್ರೀಮಂತರಲ್ಲಿ 2 ಬಗೆ. ಒಬ್ಬ ಗುರು - ಲಿಂಗ - ಜಂಗಮ ಪ್ರೇಮಿ. ಹೀಗಾಗಿ ಅವನು ತನ್ನ ಆದಾಯದ ಒಂದು ಪಾಲನ್ನು ಧನ ದಾಸೋಹಕ್ಕಾಗಿ ಎತ್ತಿ ಇಟ್ಟು ಬಿಡುವನು. ಮತ್ತೊಬ್ಬ ಸ್ವಾರ್ಥಿ ಮತ್ತು ಲೋಭಿ. ಧರ್ಮದ ಉಪಯೋಗವನ್ನು ತಾತ್ಕಾಲಿಕವಾಗಿ ತೆಗೆದುಕೊಳ್ಳುವನು. ಅವನಿಗೆ ಉದಾರವಾಗಿ ಧನ ದಾಸೋಹ ಮಾಡಲು ಮನಸ್ಸೇ ಬರದು. ಯಾರ ಒತ್ತಡಕ್ಕೋ ಈಡಾಗಿ ಸ್ವಲ್ಪ ಹಣ ದಾನ ಮಾಡಲು ಪ್ರಯತ್ನಿಸುವನು.

106. ಒಳ ಹೊರಗೆ ಒಂದಾಗಿರುವುದು

ಎರದೆಲೆಯಂತೆ ಒಳಗೊಂದು ಹೊರಗೊಂದಾದರೆ ಮೆಚ್ಚುವನೆ?
ಬಾರದ ಭವಂಗಳಲ್ಲಿ ಬರಿಸುವನಲ್ಲದೆ ಮೆಚ್ಚುವನೆ?
ಅಘೋರ ನರಕವನುಣಿಸುವನಲ್ಲದೆ ಮೆಚ್ಚುವನೆ?
ಉಡುವಿನ ನಾಲಗೆಯಂತೆ ಎರಡಾದಡೆ
ಲಿಂಗದೇವಯ್ಯ ಮೆಚ್ಚುವನೆ? - ಬ.ವ.ದೀ.104

ಕೆಲವು ಎಲೆಗಳು ಎರಡೂ ಭಾಗಗಳೂ ಒಂದೇ ರೀತಿಯಲ್ಲಿ ಇರುವವು. ಮತ್ತೆ ಕೆಲವು ಒಂದು (ಒಳ) ಮುಖ ಮೃದುವಾಗಿದ್ದರೆ ಇನ್ನೊಂದು ಮುಖ ಉರುಟಾಗಿದ್ದು ತಿನ್ನಲು ಹೋದರೆ ನಾಲಿಗೆಯನ್ನು ಕೊರೆಯುತ್ತದೆ. ಕೆಲವರು ಮಾತಿನಲ್ಲಿ ವಿನಯ, ಸೌಜನ್ಯ ತೋರಿಸುತ್ತಾರೆ. ಅದೇ ವಿನಯವನ್ನು ನಂಬಿ ಅವರೊಡನೆ ಸ್ನೇಹ ಮಾಡಿದರೆ ಅವರ ಇನ್ನೊಂದು ಮುಖ ತೋರಿಸಿ ವಿಶ್ವಾಸ ದ್ರೋಹ, ವಂಚನೆ ಮಾಡುವರು. ಇಂಥ ಸ್ವಭಾವವನ್ನು ದೇವರು ಮೆಚ್ಚುವುದಿಲ್ಲ. ಇಂಥವರನ್ನು ಹಲವಾರು ಕಷ್ಟಗಳಿಗೆ ಈಡು ಮಾಡುತ್ತಾನಲ್ಲದೆ, ಮೆಚ್ಚಿಕೊಳ್ಳುವುದಿಲ್ಲ. ಇವರು ನಂಬಿಸಿ, ವಂಚನೆ ಮಾಡುವ ಘಾತುಕರಾದ್ದರಿಂದ ಇಂಥಾ ನಯ ವಂಚಕರಿಗೆ ಅಘೋರ ನರಕವನ್ನು ಉಣ್ಣಿಸುವನಲ್ಲದೆ ಮೆಚ್ಚುವುದಿಲ್ಲ. ಉಡು ಎಂಬ ಪ್ರಾಣಿಗೆ ಎರಡು ನಾಲಿಗೆ ಇದ್ದು ಅದು ಯಾವಾಗಲೂ (ತಿನ್ನಲು) ಬಳಸುವುದು ಒಂದು ನಾಲಿಗೆ, ಬೇಟೆಯನ್ನು ಹಿಡಿಯುವಾಗ ಬಳಸುವುದು ಉದ್ದನೆಯ ನಾಲಿಗೆ. ಬಲಿಯಾಗುವ ಪ್ರಾಣಿ ದೂರವಿದ್ದೇನೆ ಎಂದು ತಪ್ಪಿಸಿಕೊಳ್ಳುವಾಗಲೇ ಉಡು ನಾಲಿಗೆಯನ್ನು ಉದ್ದಕ್ಕೆ ಚಾಚಿ ಪ್ರಾಣಿಯನ್ನು ಹಿಡಿಯುವುದು. ಹಾಗೆಯೇ ನಯ ವಂಚಕರು ಸುತ್ತಿ ಬಳಸಿ ಮಾತನಾಡಿ ಬೇರೆಯವರಿಗೆ ಮೋಸ ಮಾಡುವರು. ಅಂಥವರನ್ನು ಲಿಂಗದೇವನು ಮೆಚ್ಚಿಕೊಳ್ಳುವುದಿಲ್ಲ.

107. ಏಕದೇವ ನಿಷ್ಠೆ

ಭಕ್ತರ ಕಂಡರೆ ಬೋಳಪ್ಪಿರಯ್ಯಾ;
ಸವಣರ ಕಂಡಡೆ ಬತ್ತಲೆಯಪ್ಪಿರಯ್ಯಾ;
ಹಾರುವರ ಕಂಡಡೆ ಹರಿನಾಮವೆಂಬಿರಯ್ಯಾ
ಅವರವರ ಕಂಡಡೆ ಅವರವರಂತೆ
ಸೂಳೆಗೆ ಹುಟ್ಟಿದವರ ಎನಗೆ ತೋರದಿರಯ್ಯಾ
ಲಿಂಗದೇವರ ಪೂಜಿಸಿ, ಅನ್ಯ ದೈವಂಗಳಿಗೆರಗಿ
ಭಕ್ತರೆನಿಸಿಕೊಂಬ ಅಜ್ಞಾನಿಗಳ ನಾನೇನೆಂಬೆನಯ್ಯಾ! - ಬ.ವ.ದೀ.105

ಸಮಯ ಸಾಧಕತನ ಎಂಬ ದುರ್ಗುಣವೊಂದಿದೆ. ವ್ಯಕ್ತಿಯು ಹಣ, ಅಧಿಕಾರದ ಆಸೆಗಾಗಿ ಅಥವಾ ಸ್ನೇಹದ ಒತ್ತಡಕ್ಕಾಗಿ ತನ್ನ ಧರ್ಮವನ್ನು ಬಿಟ್ಟು ಇನ್ನೊಬ್ಬರನ್ನು ಅನುಕರಿಸಲು ಹೋಗುವನು. ಅನುಸರಣೆ ತನ್ನ ಅಂತರಂಗದಿಂದ ಮೂಡಿಬಂದಿರುತ್ತದೆ. ಅನುಕರಣೆ ಮತ್ತೊಬ್ಬರನ್ನು ಒಲಿಸಲಿಕ್ಕೆ ತೋರಿಕೆಗೆ ಆಚರಿಸುವುದಾಗಿರುತ್ತದೆ. ಇದು ಗೃಹಸ್ಥರ, ಲೌಕಿಕರ ಪರಿಯಾಗಿದ್ದರೆ ಕೆಲವು ಸನ್ಯಾಸಿಗಳೂ ಇಂಥಾ ಬೂಟಾಟಿಕೆ ಮಾಡುವುದುಂಟು. ಶೈವ ಮಾರ್ಗಿಗಳು ಬಹಳ ಸಂಖ್ಯೆಯಲ್ಲಿರುವ ಊರಿಗೆ ಹೋದಾಗ ತಲೆ ಬೋಳಿಸಿಕೊಂಡು, ಕಾವಿ ಲಾಂಛನ ತೊಟ್ಟು ಓಂ ನಮಃ ಶಿವಾಯ ಎಂದು ಜಪಿಸುವರು. ಜೈನರು ಬಹಳ ಸಂಖ್ಯೆಯಲ್ಲಿರುವಲ್ಲಿಗೆ ಹೋದರೆ ತಾವು ತ್ಯಾಗಿಗಳು ಎಂಬಂತೆ ಬತ್ತಲೆಯಾಗಿ ಓಂ ನಮೋ ಅರಿಹಂತಾಯ ಎಂದು ಜಪಿಸುವರು. ಬ್ರಾಹ್ಮಣರು ಹೆಚ್ಚಿನ ಸಂಖ್ಯೆಯಲ್ಲಿ ಇರುವಲ್ಲಿಗೆ ಹೋದಾಗ ಹಣೆಯಲ್ಲಿ ತಿಲಕ (ನಾಮ) ಇಟ್ಟುಕೊಂಡು ಓಂ ನಮೋ ನಾರಾಯಣ ಎನ್ನುವರು. ಇವರು ಯಾವ ತತ್ತ್ವಕ್ಕೂ ಬದ್ಧರಾಗದೆ ಯಾರ್‍ಯಾರನ್ನು ನೋಡುವರೋ ಅವರ ಗುರುಗಳೇ ಎಂಬಂತೆ ನಟನೆ ಮಾಡುವರು. ವೇಶ್ಯೆಯ ಮಗ ಯಾರನ್ನು ಅಪ್ಪಾ ಎನ್ನಬೇಕು ? ತನ್ನ ತಾಯಿಯ ಬಳಿಗೆ ಯಾರ್‍ಯಾರು

ಬರುವರೋ ಅವರೆಲ್ಲರನ್ನೂ ಅಪ್ಪಾ ಎಂದೇ ಕರೆಯುವನು. ಅದೇ ರೀತಿ ಸಚ್ಚಿದಾನಂದ ನಿತ್ಯ ಪರಿಪೂರ್ಣನಾದ ಸೃಷ್ಟಿಕರ್ತ ಲಿಂಗದೇವನನ್ನು ಗುರುವಿನ ಮೂಲಕ ಇಷ್ಟಲಿಂಗ ರೂಪದಲ್ಲಿ ಪಡೆದ ಮೇಲೆ ಅನ್ಯ ದೈವಂಗಳನ್ನು ಆರಾಧಿಸಲು ಹೋಗಬಾರದು. ಹೇಗೆ ಒಬ್ಬ ತಂದೆಗೆ ಹುಟ್ಟಿದ ಮಗ ತನ್ನ ತಂದೆಯನ್ನು ಮಾತ್ರ ಅಪ್ಪಾ ಎನ್ನುವನೋ ಹಾಗೆ ನಿಜವಾದ ಭಕ್ತನು ಜಗದೊಡೆಯನಾದ ಪರಮಾತ್ಮನನ್ನು ಮಾತ್ರ ದೇವನೆಂದು ನಂಬಿ, ಆರಾಧಿಸಬೇಕು. ಹಾಗೆ ಮಾಡದವರು ಭಕ್ತ ವೇಷಧಾರಿಗಳಾದರೂ ಭಕ್ತರಲ್ಲ ಅಜ್ಞಾನಿಗಳೇ ಸರಿ!

108. ತಾಮಸ ಭಕ್ತಿ ನಿರಸನ

ಗಂಡ ಲಿಂಗದೇವರ ಭಕ್ತ;
ಹೆಂಡತಿ ಮಾರಿ ಮಸಣಿಯ ಭಕ್ತೆ!
ಗಂಡ ಕೊಂಬುದು ಪಾದೋದಕ ಪ್ರಸಾದ;
ಹೆಂಡತಿ ಕೊಂಬುದು ಸುರೆಮಾಂಸ!
ಭಾಂಡಭಾಜನ ಶುದ್ಧವಿಲ್ಲದವರ ಭಕ್ತಿ
ಹೆಂಡದ ಮಡಕೆಯ ಹೊರಗೆ ತೊಳೆದಂತೆ, ಲಿಂಗದೇವಾ! -ಬ.ವ.ದೀ.106

ಸಾಮಾನ್ಯವಾಗಿ ಗಂಡಸರು ಬೇಗನೆ ವೈಚಾರಿಕತೆಗೆ ಆಕರ್ಷಿಸಲ್ಪಡುತ್ತಾರೆ. ಹೆಣ್ಣು ಮಕ್ಕಳು ಅಷ್ಟು ತೀವ್ರವಾಗಿ ಹಳೆಯ ನಂಬಿಕೆಗಳನ್ನು ಬಿಡುವುದಿಲ್ಲ. ಮನೆ ದೈವ, ಕುಲ ದೈವಗಳ ಪೂಜೆ ಬಿಟ್ಟರೆ ಕೆಡುಕಾಗುತ್ತದೆ ಎಂದು ಗಂಡನೊಡನೆ ಜಗಳವಾಡುತ್ತಾರೆ. ಅಂಥ ಸಂದರ್ಭದಲ್ಲಿ ಗಂಡನು ಮೌನವಾಗಿ ತಾನಷ್ಟೇ ನಂಬಿದ ಮಾರ್ಗವನ್ನು ಅನುಸರಿಸುತ್ತಾನೆ. (ಕೆಲವೊಮ್ಮೆ ಹೆಂಡತಿ ಕೊಡುವ ಕಿರುಕುಳದಿಂದ ಬೇಸತ್ತು ತಾನೂ ಹಿಡಿದ ಆದರ್ಶವನ್ನು ತೊರೆಯುತ್ತಾನೆ.)

ಗುರು ಬಸವಣ್ಣನವರ ಬೋಧೆಯಿಂದ ಆಕರ್ಷಿತನಾಗಿ ಓರ್ವನು ಇಷ್ಟಲಿಂಗಧಾರಿಯಾಗಿ ಲಿಂಗದೇವರ ಭಕ್ತನಾಗಿದ್ದಾನೆ. ಆದರೆ ಅವನ ಹೆಂಡತಿ ಮಾತ್ರ ಹಿಂದಿನ ಸಂಸ್ಕಾರವನ್ನು ಬಿಡದೆ ಮಾರಿ, ಮಸಣಿಯ ಭಕ್ತೆಯಾಗಿಯೇ ಮುಂದುವರಿದಿದ್ದಾಳೆ. ಗಂಡನು ಗುರು - ಜಂಗಮರ ಸನ್ನಿಧಿಗೆ ಹೋಗಿ ಕರುಣ ಪ್ರಸಾದವನ್ನು ಪಡೆದರೆ ಹೆಂಡತಿ ಮಾರಮ್ಮನನ್ನು ಪೂಜಿಸಿ, ಮಾಂಸದ ಪ್ರಸಾದ, ಮದ್ಯದ ತೀರ್ಥವನ್ನು ಪಡೆಯುತ್ತಾಳೆ. ಭಾಂಡ ಭಾಜನ ಅಂದರೆ ಪಾತ್ರೆ ಪಡುಗ, ಇದರ ಸಾಂಕೇತಿಕ ಅರ್ಥ ಆಚಾರ, ಒಳಗಿನ ವ್ಯವಹಾರ. ಶರೀರ ಸ್ವಚ್ಛತೆ, ಮನೆಯ ಸ್ವಚ್ಛತೆ, ಆಚಾರ, ಆಹಾರ - ವಿಹಾರಗಳಲ್ಲಿ ಶುದ್ಧಿ ಇಲ್ಲದವರ ಸಂಸಾರ ಎಂದರೆ ಹೆಂಡದ ಮಡಿಕೆಯ ಹೊರಗೆ ತೊಳೆದಂತೆ! ಕುಟುಂಬ ಒಂದು ಮಡಿಕೆಯಂತೆ, ಗಂಡನು ಅದರ ಹೊರಭಾಗ. ಹೆಂಡತಿ ಅದರ ಒಳಭಾಗ. ಈ ವಚನ ಬಹಳ ಅರ್ಥಗರ್ಭಿತ. ಸಾಕಷ್ಟು ಒಳಾರ್ಥಗಳನ್ನು ಊಹಿಸಬಹುದು.

ಪಾತ್ರೆಯ ಒಳಭಾಗ ಬಹು ಮುಖ್ಯವಾದಂತೆ; ಕುಟುಂಬದಲ್ಲಿ ಸ್ತ್ರೀಯ ಪಾತ್ರ ಬಹು ಮುಖ್ಯ. ಆಕೆ ಸುಧಾರಿಸಿದರೆ ಇಡೀ ಕುಟುಂಬವೇ ಸುಧಾರಿಸುತ್ತದೆ. ಆಕೆ ಅಜ್ಞಾನಿಯಾಗಿ ಉಳಿದರೆ ಇಡೀ ಮನೆತನವೇ ಅಜ್ಞಾನದ ಕೂಪವಾಗುತ್ತದೆ. ಹೊರ ಜಗತ್ತಿನೊಡನೆ ವ್ಯವಹರಿಸುವ ಪುರುಷ ಸಾಕಷ್ಟು ಪರಿವರ್ತನೆಗೆ ಈಡಾಗುತ್ತಾನೆ. ಮಹಿಳೆಗೆ ಈ ಅವಕಾಶ ಇಲ್ಲವಾಗಿ ಆಕೆ ತನ್ನ ಹಳೆಯ ನಂಬುಗೆಗಳಲ್ಲೇ ಬಂಧಿಯಾಗುತ್ತಾಳೆ. ಹಾಗೆಂದು ಮಹಿಳೆಯನ್ನು ಶೂದ್ರತ್ವದಲ್ಲೇ ಇಡಬಾರದು. ಉಭಯತರೂ ಸಮಾನವಾಗಿಯೇ ಮುಂದುವರಿಯಬೇಕು.

ಹಿಂದು ವಾದಿಗಳಾದ ಕೆಲವರು 'ಕ್ಷುದ್ರ ದೈವಂಗಳಾದ ಮಾರಿ, ಮಸಣಿಯ ಉಪಾಸನೆ, ಭೂತ - ಪ್ರೇತಗಳ ಆರಾಧನೆಯನ್ನು ಖಂಡಿಸಬಾರದು. ಹಿಂದು ಧರ್ಮ ಎಲ್ಲರಿಗೂ ಉಪಾಸನಾ ಸ್ವಾತಂತ್ರ್ಯ ಕೊಟ್ಟಿದೆ' ಎಂದು ಹೇಳುವುದುಂಟು. ಇದು ತಪ್ಪು. ಒಂದು ಮಗು ಮಣ್ಣು ತಿನ್ನುತ್ತಿದ್ದರೆ, "ತಿನ್ನಲಿ ಬಿಡು, ಅದಕ್ಕೆ ಹೊಡೆದು, ಬಿಡಿಸಿದರೆ ನೋವಾಗುತ್ತದೆ." ಎಂಬಂತಾಗುತ್ತದೆ. ಸುಧಾರಿಸಿದವರ, ಶ್ರೀಮಂತರ ಮಕ್ಕಳು ಹಣ್ಣು ತಿನ್ನುವಾಗ ಬಡವರ ಮಗು ಮಣ್ಣು ತಿಂದರೆ ತಿನ್ನಲಿ ಎಂಬ ಧೋರಣೆ ಅಲ್ಲಿರುತ್ತದೆ. ಅನಿಷ್ಟ ಕನಿಷ್ಠ, ಶಿಷ್ಟ, ಶ್ರೇಷ್ಠ ದೈವಂಗಳನ್ನು ನಾವು ಗುರುತಿಸಬಹುದು. ಎಲ್ಲ ಮಾನವರೂ ಮೊದಲಿನ ಮೂರನ್ನು ಬಿಟ್ಟು ಉತ್ತಮ ಮಟ್ಟಕ್ಕೆ ಏರಬೇಕೆಂಬ ಕಳಕಳಿ ಇರುವುದೇ ನಿಜ ಮಾನವೀಯ ಚಿಂತನೆ. ಮಾರಿ ಮಸಣಿಗಳಂತಹ ಕ್ಷುದ್ರ ದೈವಂಗಳನ್ನು ಪೂಜಿಸುತ್ತ, ಪ್ರಾಣಿ ಬಲಿಯಂತಹ ಕ್ರೂರ ಆಚರಣೆ ಮಾಡುತ್ತ, ದೇವದಾಸಿ ಪದ್ಧತಿಯಂತಹ ಮೌಢ್ಯದಲ್ಲಿ ಸಿಕ್ಕಿರುವವರನ್ನು ಅದರಿಂದ ಬಿಡಿಸುವ ಕಳಕಳಿ ಪ್ರಸ್ತುತ ವಚನದಲ್ಲಿ ವ್ಯಕ್ತವಾಗಿದೆ.

ವೀರಗಲ್ಲು ಮತ್ತು ಕೇಸರಿ ಸಲಾಂ

ಕನ್ನಡದ ಅಕ್ಷರ ಲೋಕಕ್ಕೆ ವಾದ - ವಿವಾದಗಳು ಹೊಸತೇನಲ್ಲ. ಅದು ಈ ನೆಲದ ಸಂಸ್ಕೃತಿಯ ಜೀವಂತಿಕೆಗೆ ಸಾಕ್ಷಿ. ದೇಶದ ಬೇರೆ ಬೇರೆ ಕಡೆ ಮತ್ತು ಕರ್ನಾಟಕದಲ್ಲಿ ಬಿಜೆಪಿ ಸರಕಾರ ಅಸ್ತಿತ್ವಕ್ಕೆ ಬಂದ ಮೇಲೆ ಕೆಲವು ಕಡೆ ಕ್ರೈಸ್ತ ಸಮುದಾಯದ ಪೂಜಾಮಂದಿರಗಳ ಮೇಲೆ ನಡೆದ ಹಲ್ಲೆಗಳ ಹಿನ್ನೆಲೆಯಲ್ಲಿ 'ಮತಾಂತರ' ದ ವಿಷಯ ವ್ಯಾಪಕವಾಗಿ ಚರ್ಚೆಯಾಗುತ್ತಿದೆ. ಡಾ. ಎಸ್. ಎಲ್. ಭೈರಪ್ಪನವರ 'ಆವರಣ' ದ ಸುತ್ತ ನಡೆದ ಚರ್ಚೆ (ಅದು ಕಾದಂಬರಿಯೋ ಇತಿಹಾಸವೋ ಎರಡೂ ಹೌದೋ, ಎರಡೂ ಅಲ್ಲವೋ ಮುಂತಾಗಿ)- ಮತಾಂತರದ ಚರ್ಚೆಯೇ. ನಂತರ ಡಾ. ಚಿದಾನಂದ ಮೂರ್ತಿ 'ವಾಚಕರ ವಿಜಯ' ದ ಮೂಲಕ, ತಮ್ಮ ಸಾಪ್ತಾಹಿಕ ಪತ್ರಿಕಾ ಗೋಷ್ಠಿಗಳ ಮೂಲಕ ವಿಷಯವನ್ನು ಚಾಲ್ತಿಯಲ್ಲಿಟ್ಟರೂ, ವಿಜಯ ಕರ್ನಾಟಕ ಪತ್ರಿಕೆ ಡಾ. ಭೈರಪ್ಪನವರ ದೀರ್ಘ ಲೇಖನ ಪ್ರಕಟಿಸಿ, 'ಪರ - ವಿರೋಧ ಅಭಿಪ್ರಾಯಗಳಿಗೆ ಸಮಾನ ಹಾಗೂ ಸೂಕ್ತ ಅವಕಾಶ' ದ ಭರವಸೆ ಇತ್ತು, ಒಂದಲ್ಲ ಎರಡು ಸಲ, 'ಪತ್ರಿಕೆ ವೇದಿಕೆಯೇ ಹೊರತು ವಕ್ತಾರ ಖಂಡಿತ ಅಲ್ಲ' ಅಂತ ಗ್ಯಾರಂಟಿ ಕೊಟ್ಟ ಮೇಲೆ ನಿರಂತರವಾಗಿ ಚರ್ಚಿಸಲಾಗಿದೆ. ಪತ್ರಿಕೆಯ ಈ ಪ್ರಯತ್ನ ಅಭಿನಂದನೀಯ. ಇದರಿಂದ ' ಸತ್ಯದ ಮೇಲೆ ಹೆಚ್ಚಿನ ಬೆಳಕು' ಬೀಳುತ್ತ ದೆಯೇ ಕಾದು ನೋಡೋಣ.

ನಾನು ಸಂಶೋಧಕನೂ ಅಲ್ಲ , ಇತಿಹಾಸಕಾರನೂ ಅಲ್ಲ. ಬದುಕಿನ ವಿದ್ಯಮಾನಗಳ ಬಗ್ಗೆ ತೀವ್ರ ಆಸಕ್ತಿ ಇರುವ ಒಬ್ಬ ಬರಹಗಾರ ಮಾತ್ರ. ವಾಸ್ತವ, ಸತ್ಯ, ಇತಿಹಾಸ ಮುಂತಾದ ಪರಿಕಲ್ಪನೆಗಳ ಬಗ್ಗೆ ಇತರರು ತಮ್ಮ ತಮ್ಮ ಅನುಕೂಲಕ್ಕೆ ಬಳಸುವ ಆಕರಗಳ ಬಗ್ಗೆ ಅಷ್ಟಾಗಿ ಮಾಹಿತಿ ಇಲ್ಲ.

ಕನ್ನಡಕ್ಕೆ ಅನೇಕ ಒಳ್ಳೆಯ ಕಾದಂಬರಿಗಳನ್ನು ಕೊಟ್ಟವರು ಭೈರಪ್ಪ. ಒಂದು ಕಾಲಕ್ಕೆ ಒಳ್ಳೆಯ ಹೆಸರು ಮಾಡಿದವರು ಚಿದಾನಂದ ಮೂರ್ತಿ, ಚಿಮೂ ಅವರ ಎತ್ತರ ನಮಗೆ ಗೊತ್ತು, ಭೈರಪ್ಪನವರ ಎತ್ತರ ಇನ್ನೂ ಹೆಚ್ಚು. ಇಬ್ಬರಿಗೂ 'ಉಗ್ರಾಣ' ವಾಗಿರುವ ಡಾ. ನವರತ್ನ ರಾಜಾರಾಂ ಅವರ ಅಧ್ಯಯನದ ಬೀಸು ದೊಡ್ಡದು.

ಈ ವಾದ - ವಿವಾದದ ಗದ್ದಲದಲ್ಲಿ ಭೈರಪ್ಪನವರಿಗೆ ಸಿಕ್ಕ ಕಲ್ಲೇಟುಗಳು : ಬಾಲಿಶ , ಕಪಟಿ , ಕರ್ಮಠ, ಪ್ಯಾರಾಸೈಡ್, ಫ್ಯಾನಟಿಕ್, ವಾಕ್ಪಟು ಮೂಲಭೂತವಾದಿ, ವಿತಂಡವಾದಿ, ಏಕಮುಖವಾದಿ, ಮಾಹಿತಿ ತಂತ್ರಜ್ಞ, ಕುಶಲ ಪಂಡಿತ, ಕೇಸರೀಕರಣದ ವಕ್ತಾರ ಇತ್ಯಾದಿ. 'ಭೈರಪ್ಪನವರು ಇತಿಹಾಸಕಾರ, ಬರಹಗಾರ, ಸದ್ಯ ಮುತ್ಸದ್ದಿಯಲ್ಲ' ಎಂದ ರವಿ ಬೆಳಗೆರೆ ಅವರನ್ನು ತರ್ಲೆ ಎಂದು ಜರಿದರು ರಾಮಚಂದ್ರ ಶೆಣೈ, 'ಭೈರಪ್ಪ ಮುತ್ಸದ್ದಿಯಲ್ಲ ಅಂತ ಸರ್ಟಿಫಿಕೇಟ್ ಕೊಡಲು ಇವರ್ಯಾರು?' ಎಂದು ಕೇಳಿದ್ದಾರೆ. ಆದರೆ ಭೈರಪ್ಪನವರಿಗೆ ಸಾಕಷ್ಟು ಭುಜ ಕಿರೀಟಗಳೂ ಸಂದಿವೆ : ಸತ್ಯ ನಿಷ್ಠ , ವಸ್ತುನಿಷ್ಠ, ನಿಷ್ಠುರವಾದಿ, ಇತಿಹಾಸಕಾರ, ಸತ್ಯಾನ್ವೇಷಿ ಇತ್ಯಾದಿ. ಅವರ ಲೇಖನ 'ಸಾರ್ವಕಾಲಿಕ ದಾಖಲೆ' ಎಂದಿದ್ದಾರೆ ಒಬ್ಬ ಪತ್ರಕರ್ತರು ! ಆದರೆ, ಇಂಥ ಸರ್ಟಿಫಿಕೇಟುಗಳನ್ನು ಕೊಡಲು ಇವರ್ಯಾರು? ಅಂತ ರಾಮಚಂದ್ರ ಶೆಣೈ ಮಾತ್ರ ಕೇಳಿಲ್ಲ.

★

ವಾಸ್ತವದ ಎಲ್ಲ ಮಗ್ಗಲುಗಳನ್ನು ಸಮಗ್ರವಾಗಿ ಗ್ರಹಿಸುವ ವಸ್ತುನಿಷ್ಠತೆ ಇತಿಹಾಸಕಾರನಿಗೆ ಇರಬೇಕು. ಈ ಅಪೇಕ್ಷೆ ಸಹಜ ಮತ್ತು ನ್ಯಾಯಯುತ. ಆದರೆ ಈವರೆಗೆ ಪ್ರಪಂಚದ ಯಾವುದೇ ಪ್ರದೇಶದ ಯಾವುದೇ ಕಾಲಘಟ್ಟದ 'ವಸ್ತುನಿಷ್ಠ' ಹಾಗೂ ಸಮಗ್ರ ಇತಿಹಾಸ ಎಲ್ಲಿಯಾದರೂ ಬರೆಯಲ್ಪಟ್ಟಿದೆಯೇ ? ಎಲ್ಲರೂ ಅವರವರ ಗ್ರಹಿಕೆ, ಕಾಣ್ಕೆಗಳ ಮಿತಿಯಲ್ಲಿಯೇ ಬರೆಯುವುದು. ವಾಸ್ತವಕ್ಕೆ ತನ್ನದೇ ಅಸ್ತಿತ್ವವಿದೆ, ಆದರೆ ಅದರ ನೋಟಗಳು ಮಾತ್ರ ಸಾಪೇಕ್ಷ. ಹೀಗಾಗಿ ಎಂಥ ಮಹಾವಿದ್ವಾಂಸ ಕೂಡ ತಾನು ಹೇಳಿದ್ದೇ ಪರಮ ಮತ್ತು ಚರಮ ಸತ್ಯ ಅಂತ ಘೋಷಿಸುವ ಪರಿಸ್ಥಿತಿಯಲ್ಲಿ ಇಲ್ಲ. ಯಾವುದೇ ಧರ್ಮಗುರು ಕೂಡ ಈ ಮಾತು ಹೇಳಲಾರ. ಅಂದಾಗ, ನಮ್ಮ ನಮ್ಮ ಕಾಲದ ಸಂವೇದನೆಗಳಿಗೆ, ಅಗತ್ಯಗಳಿಗೆ ಅನುಕೂಲವಾದ ಮೌಲ್ಯಗಳ ಮೊತ್ತವನ್ನು ಆಯ್ಕೆ ಮಾಡಿಕೊಳ್ಳುವುದು ಅಥವಾ ಸೃಷ್ಟಿಸಿಕೊಳ್ಳುವುದು ಮಾತ್ರ ನಮ್ಮ ಕೆಲಸ. ಧರ್ಮ ಎಂಬುದು ಒಂದರ್ಥದಲ್ಲಿ ಮೌಲ್ಯಗಳ ಮೊತ್ತವೇ.

★

ಆದರೆ ವಿಷಯ ಅಷ್ಟು ಸರಳವಾಗಿಲ್ಲ. ಧರ್ಮ ಎಂದೊಡನೆ ನಮ್ಮೆದುರು ಸುಳಿಯುವುದು

ಕ್ರಿಶ್ಚಿಯನ್, ಇಸ್ಲಾಂ, ಹಿಂದೂ, ಬುದ್ಧ, ಜೈನ, ಸಿಖ್, ಲಿಂಗಾಯತ ಮುಂತಾದ ಸಾಂಸ್ಥೀಕರಣಗೊಂಡ ಧರ್ಮಗಳೇ. ಹಾಗೆ ನೋಡಿದರೆ ಈ ಯಾವ ಧರ್ಮಗಳೂ ಒಂದು ಶುಭ ಮುಹೂರ್ತದಲ್ಲಿ ಬಾಜಾ ಬಜಂತ್ರಿಗಳೊಂದಿಗೆ ಸ್ಥಾಪಿತವಾದವುಗಳಲ್ಲ. ಒಂದು ವಿಚಾರಧಾರೆ ಹಬ್ಬಿ ಪ್ರಸುತ್ತವೆನಿಸಿ ಪ್ರಚಾರ ಪಡೆಯುತ್ತದೆ, ಬರುಬರುತ್ತ ಆಚರಣೆಯಾಗುತ್ತದೆ, ಅದಕ್ಕೊಂದು ಸ್ಥಿರ ಸ್ವರೂಪ ಕೊಟ್ಟಾಗ ಧರ್ಮಗ್ರಂಥ ತಯಾರು ; ಸರಿಯಾಗಿ ನೋಡಿಕೊಳ್ಳಲು ಕೆಲವರ ಉಸ್ತುವಾರಿ, ಅಧಿಕಾರ ಮತ್ತು ಜವಾಬ್ದಾರಿಗಳ ಕೇಂದ್ರೀಕರಣ, ಅದರಿಂದ ಅವರಿಗೆ ವಿಶೇಷ ಪ್ರಯೋಜನ, ಈ ಫಲಾನುಭವದ ವ್ಯವಸ್ಥೆ ಕಾಯಂ ಆಗಿರಲೆಂಬ ಹಂಬಲ. ತತ್ತ್ವಗಳ ಪ್ರಚಾರಕ್ಕಾಗಿ ದಂಡಯಾತ್ರೆ, ಪ್ರಭುತ್ವಗಳ ಸಹಕಾರ, ಸ್ವಮತ ಪ್ರತಿಪಾದನೆಯ ಅಂಗವಾಗಿ ಪರಮತ ಖಂಡನೆ, ಕ್ರೌರ್ಯ, ಹಿಂಸೆ, ಲೂಟಿ, ಕೊಲೆ... ಈ ಪ್ರಕ್ರಿಯೆಯಲ್ಲಿ ಧರ್ಮ ಎಂಬುದು ಜಡವಾಗುತ್ತದೆ. ಜಡ್ಡುಗಟ್ಟುತ್ತದೆ; ಅದರ ಹೊಟ್ಟೆಯಲ್ಲಿಯೇ ತಳಮಳ, ಬಂಡಾಯ, ಮತ್ತೊಂದು ಸಮನಾಂತರ ಅಥವಾ ಪರ್ಯಾಯ ಧರ್ಮದ ಉದಯ.... ಈ ಅವಸ್ಥಾಂತರಗಳಿಗೆ ಯಾವ ಸಾಂಸ್ಥಿತ ಧರ್ಮವೂ ಹೊರತಾಗಿಲ್ಲ. ಚಿಮೂ - ನವರತ್ನ - ಭೈರಪ್ಪಾದಿಗಳು ಕ್ರಿಸ್ತೀಕರಣ, ಇಸ್ಲಾಮೀಕರಣಗಳ ವಿರುದ್ಧ ತಯಾರಿಸಿದ ಆರೋಪಗಳ ಪಟ್ಟಿಯನ್ನುಹಿಂದೂ ಎಂಬ ಧರ್ಮದ ವಿರುದ್ಧವೂ ತಯಾರಿಸಬಹುದು. ಈ ನಿಟ್ಟಿನಲ್ಲಿ ಸಚ್ಚಿದಾನಂದ ಹೆಗಡೆ "ಕ್ರಿಶ್ಚಿಯಾನಿಟಿ - ಚರ್ಚಿಯಾನಿಟಿ" ಎಂಬ ಅಂಶ ಚರ್ಚೆಗೆ ಅನುಕೂಲ. ಕ್ರಿಸ್ತನಿಂದ ಚರ್ಚೀಕರಣವನ್ನು, ಪೈಗಂಬರರಿಂದ ಮಸೀದೀಕರಣವನ್ನು ಪ್ರತ್ಯೇಕಿಸಿದಂತೆ ಹಿಂದೂ ಎಂಬ ಧರ್ಮದ ಮೂಲ ನೆಲೆಗಳಿಂದ ದೇವಸ್ಥಾನೀಕರಣವನ್ನು ಪ್ರತ್ಯೇಕಿಸಬಹುದು. ಈ - ಕರಣ ಪ್ರಕ್ರಿಯೆಗಳಲ್ಲಿ ಯಾರು ಸಾಚಾ, ಯಾರು ಖೋಟಾ ಅಂತ ಹೇಳಲಿಕ್ಕಾಗದು, ಎಲ್ಲರೂ ಅವರೇ .

★

ಹಿಂದೂ ಎಂಬ ಶಬ್ದದ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ವೇದ, ಉಪನಿಷತ್ತು, ಭಗವದ್ಗೀತೆ, ಶೃತಿ, ಸ್ಮೃತಿ, ರಾಮಾಯಣ - ಮಹಾಭಾರತ, ಶರಣರ ವಚನ, ದಾಸರ ಪದ ಎಲ್ಲೂ ಅದರ ಬೇರುಗಳಿಲ್ಲ. ಈ ಭೂಖಂಡಕ್ಕೆ ಬಂದ ಮುಸ್ಲಿಮರು ಸಿಂಧೂ ನದಿಯ ದಕ್ಷಿಣಕ್ಕಿರುವ ಭೂಪ್ರದೇಶಕ್ಕೆ ಹಿಂದ್ ಅಂತ ಕರೆದರು. ಅದರಿಂದಲೇ ಹಿಂದೂ, ಹಿಂದುಸ್ಥಾನವೆಲ್ಲ. ಇವು ಪ್ರದೇಶ ವಾಚಕ ಶಬ್ದಗಳು ಮಾತ್ರ. ಇಲ್ಲಿ ಸಾವಿರಾರು ವರ್ಷಗಳಿಂದ ಚಾಲ್ತಿಯಲ್ಲಿದ್ದುದು ವೈದಿಕ ಧರ್ಮ, ಬ್ರಾಹ್ಮಣ ಧರ್ಮ. ಅದಕ್ಕೆ ಬುನಾದಿ ಮನುಸ್ಮೃತಿ . ಅದರ ಮೂಲ ದ್ರವ್ಯಗಳೆಂದರೆ ಜಾತಿ ಆಧಾರಿತ ಮೇಲು - ಕೀಳು ಎಂಬ ಅಸಮಾನತೆ ಮತ್ತು ಮಡಿ - ಮೈಲಿಗೆ ಆಧಾರಿತ ಅಸ್ಪೃಶ್ಯತೆ. ಈ ಬ್ರಾಹ್ಮಣ ಧರ್ಮದ ವಿರುದ್ಧ ಕಾಲಕಾಲಕ್ಕೆ ಬಂಡಾಯ ಎದ್ದಾಗ, ಸರ್ವನಾಶೇ ಸಮುತ್ಪನ್ನೇ ಅರ್ಥಂ ತ್ಯಜತಿ ಪಂಡಿತಃ ಎಂಬಂತೆ ಪಂಡಿತರು ಬ್ರಾಹ್ಮಣ ಶಬ್ದವನ್ನೇ ತ್ಯಜಿಸಿ, ಅನುಕೂಲಕರ ಹಿಂದೂ ಎಂಬ ಶಬ್ದವನ್ನು ರೂಢಿಗೆ ತಂದರು. ಅದಕ್ಕೆ ಪೂರ್ವಾನ್ವಯವಾಗಿ ಅರ್ಥಾರೋಪಣ ಮಾಡಿ ಪ್ರಾಚೀನತೆಯನ್ನು ಕಲ್ಪಿಸಿದರು. ತಾತ್ಪರ್ಯ: ಹಿಂದೂ ಧರ್ಮವೆಂಬುದು "ಹಿಂದೂ ಮುಖವಾಡದ ಬ್ರಾಹ್ಮಣ ಧರ್ಮ"ವೇ. ಹಿಂದುತ್ವವನ್ನು ಅಜೆಂಡಾ - ಝುಂಡಾ ಎರಡೂ ಮಾಡಿಕೊಂಡಿರುವ "ಹಿಂದೂ" ಗಳು ಹಿಂದೂ ಶಬ್ದಕ್ಕಾಗಿ ಅವರು ನಖಶಿಖಾಂತವಾಗಿ ದ್ವೇಷಿಸುತ್ತಿರುವ ಮುಸ್ಲಿಮರಿಗೆ ಥ್ಯಾಂಕ್ಸ್ ಹೇಳಬೇಕು ! ಮಜಾ ಅಲ್ಲವೇ ? ಈ ಹಿಂದೂ ಎಂಬ ಮಾಯೆ ನಮ್ಮ ಕೆಲವು ಪ್ರಗತಿಪರರಿಗೂ ಗಂಟು ಬಿದ್ದಂತಿದೆ. ಅವರು ಅದಕ್ಕೆ "ಸನಾತನ ಹಿಂದೂ" ಅನ್ನುತ್ತಾರೆ. ಈ ರೊಮ್ಯಾಂಟಿಕ್ ಪರಿಕಲ್ಪನೆಗಾಗಿ ಅವರು ಉಪನಿಷತ್ತಿನ ಸೂಕ್ತಿಗಳ ಮೂಲಕ್ಕೆ ಹೋಗುತ್ತಾರೆ. ದಾಸರು - ಶರಣರು - ಸೂಫಿ ಸಂತರು, ತುಕಾರಾಮ - ಕಬೀರ - ರಮಣ - ಗಾಂಧಿ - ನಾರಾಯಣ ಗುರು, ಅಂಬೇಡ್ಕರ್ ಮುಂತಾದ ಉದಾರವಾದಿಗಳನ್ನು ಆ "ಸನಾತನ" ಚೌಕಟ್ಟಿನಲ್ಲಿ ತುರುಕುತ್ತಾರೆ. "ಇದು ಹುಡುಕಾಟದ ಧರ್ಮ, ವಿವರಣೆಗೆ ದಕ್ಕದೇ ಹೋಗುವ ಧರ್ಮ" ಹೀಗೆ ಕಾವ್ಯಮಯವಾಗಿ ವರ್ಣಿಸುವ ಜಿ. ಕೆ. ಗೋವಿಂದರಾಯರು ಮುಂದೆ ಸಾಗಿ, "ಒಟ್ಟು ಗೂಡಿಸುವ ಉಪನಿಷತ್ ಧರ್ಮ, ಒಡೆಯುವ ಮನು ಧರ್ಮ" ಎಂದು ವ್ಯತ್ಯಾಸ ಮಾಡುತ್ತಾರೆ. ಅವರ ಸ್ವಚ್ಛ ಮನಸ್ಸಿನ ಕನಸುಗಳು ಅಭಿನಂದನೀಯ. ಆದರೆ ಅವರು ತಿಳಿಯಬೇಕು, ಇಂದು ಇರುವುದು "ಹಿಂದೂ ಧರ್ಮ"ದ ಒಂದೇ ಬ್ರ್ಯಾಂಡು ; ಅದು ಮನು - ಮಧ್ವ - ಶಂಕರ - ಗೋಲ್ವಾಲ್ಕರ್ - ಸಾವರ್‌ಕರ್ - ಗೋಡ್ಸೆ, ಅಡ್ವಾಣಿ, ಭೈರಪ್ಪ - ನವರತ್ನ- ತೊಗಾಡಿಯಾ- ಮುತಾಲಿಕ್ - ಚಿಮೂ ಅಂಥವರ ಧರ್ಮ.

"ಭಾರತದ ಧಾರ್ಮಿಕ ಚರಿತ್ರೆಯೇ ಮತಾಂತರಗಳ ಚರಿತ್ರೆ" (ಎಸ್. ಎಸ್. ಶಂಕರ್), "ಮತಾಂತರ ಕೇವಲ ಧಾರ್ಮಿಕ ಸಮಸ್ಯೆ ಮಾತ್ರವಲ್ಲ, ಸಾಮಾಜಿಕ ಘನತೆಯ ಪ್ರಶ್ನೆಯೂ ಹೌದು". (ಎಸ್. ಕೆ. ಹನುಮಂತಯ್ಯ) ಮತಾಂತರ ಎನ್ನುವುದು ಬದಲಾವಣೆ, ಸಮಾನತೆಗೆ ಬಯಸಿ ಸ್ಥಾನಾಂತರಗೊಳ್ಳುವ ಮನೋಬಯಕೆ "(ಜಂಬಣ್ಣ ಅಮರಚಿಂತ) ಈ ಅಭಿಪ್ರಾಯಗಳು ವ್ಯಕ್ತವಾಗಿವೆ. ಭೈರಪ್ಪ - ಪಾಳೆಯಕ್ಕೆ ಇದೆಲ್ಲ ಗೊತ್ತಿಲ್ಲವೆಂದಲ್ಲ. ಬೌದ್ಧ, ಜೈನ, ವೀರಶೈವ, ಲಿಂಗಾಯತ ಚಳವಳಿ ಕುರಿತು , "ಇವೆಲ್ಲವೂ ಒಂದೊಂದು ಬಗೆಯಲ್ಲಿ ಮತಾಂತರಗಳೇ" ಎಂದಿರುವ ಅಜಕ್ಕಳ ಗಿರೀಶ ಭಟ್ಟರು....."ಆದರೆ, ಅವೆಲ್ಲ ಮುಗಿದ ಅಧ್ಯಾಯಗಳು." ಎಂದು ವಾಕ್ಯ ಮುಗಿಸುತ್ತಾರೆ. (ಆ ಅಧ್ಯಾಯಗಳನ್ನು ಮುಗಿಸಿದವರು ಯಾರೋ!?) ಜನಿವಾರ ಕಿತ್ತೆಸೆದ ಬಸವಣ್ಣ ಮಾಡಿದ್ದು "ಧಾರ್ಮಿಕ ಕ್ರಾಂತಿ" ಯೇ ಹೊರತು "ಮತಾಂತರವಲ್ಲ" ಎಂಬುದು ಬಸವರಾಜ ಜಗಜಂಪಿ ಅವರ ಅಂಬೋಣ !..... ಈ ನುಡಿಜಾಣರ ಆಕ್ರೋಶವಿರುವುದು ಕ್ರೈಸ್ತ ಮತ್ತು ಇಸ್ಲಾಂ ಧರ್ಮೀಯರ ಬಗ್ಗೆ ಮಾತ್ರ ; ಏಕೆಂದರೆ ಇವರ ಪ್ರಕಾರ ಅವರದು " ಬಲಾತ್ಕಾರದ ಮತಾಂತರ". ಮತಾಂತರದಲ್ಲೂ ಜಾತಿಪದ್ಧತಿ !

★

"ಹಿಂದೂ ಧರ್ಮದಲ್ಲಿ ಎಲ್ಲವೂ ಸರಿಯಾಗಿದ್ದರೆ ಏಕೆ ಜನ ಮತಾಂತರಗೊಳ್ಳುತ್ತಿದ್ದರು" ಜಾನ್ ಸಿಕ್ವೇರಾ ಅವರು ಗುಂಡು ಹೊಡೆದಂತೆ ಕೇಳಿರುವ ಈ ಪ್ರಶ್ನೆಯಿಂದ ಯಾರೂ ಪಾರಾಗುವಂತಿಲ್ಲ. ಪ್ರಾಜ್ಞರಾದವರಿಗೆ ಈ ಅರಿವು ಇದೆ. "ಹಿಂದೂ ಧರ್ಮಕ್ಕೆ ಹಲವಾರು ಶತಕಗಳಿಂದ ಅಂಟಿಕೊಂಡಿರುವ ಅಸ್ಪೃಶ್ಯತೆಯ ರೋಗದ ಬಗ್ಗೆ" ಸುಮತೀಂದ್ರ ನಾಡಿಗ ಪ್ರಸ್ತಾಪಿಸಿದ್ದಾರೆ. ಅಸ್ಪೃಶ್ಯತೆ ಎಂಬುದು "ಹಿಂದೂ ಧರ್ಮಕ್ಕೆ ಕಳಂಕ ಮತ್ತು ಅವಮಾನ" ಎಂದು ಪ್ರತಿಪಾದಿಸುತ್ತಲೇ ಬಂದವರು ಪೇಜಾವರ ಸ್ವಾಮೀಜಿ. ಚಿಮೂ ಅವರಂಥ ಚಿಮೂ ಕೂಡ ತಮ್ಮ ತೀರ ಇತ್ತೀಚಿನ ಪತ್ರಿಕಾ ಗೋಷ್ಠಿಯಲ್ಲಿ " ಅಸ್ಪೃಶ್ಯತೆ ತೊಲಗಬೇಕು" ಎಂಬ ಕರೆ ನೀಡಿ ಅಸ್ಪೃಶ್ಯತಾ ನಿರ್ಮೂಲನ ವಾದ್ಯ ಗೋಷ್ಠಿಯನ್ನು ಸೇರಿದ್ದಾರೆ. ಮೊನ್ನೆ ಮೊನ್ನೆ ನಾನು ವಿಜಾಪುರ ಜಿಲ್ಲೆಯ ಸಿಂದಗಿಗೆ ಹೋದಾಗ ಭೆಟ್ಟಿಯಾದ ರೇವಡಿಗಾರ ಎಂಬ ಹಳೆಯ ಸ್ನೇಹಿತರು, "ನಮಗೆ ಅಸ್ಪೃಶ್ಯತೆ ಯಲ್ಲ; ಹಿಂದುತ್ವ ಬೇಕು" ಎಂದು ಮುಗ್ಧವಾಗಿಯೇ ಹೇಳಿದರು.

ಈ ವಾದ ಸರಣಿಯ ಸೂಕ್ಷ್ಮ ಹುನ್ನಾರಗಳನ್ನು ಗಮನಿಸೋಣ. ಇಲ್ಲಿ " ಅಸ್ಪೃಶ್ಯತೆ "ಯನ್ನು "ಜಾತಿಪದ್ಧತಿ" ಯಿಂದ ಮತ್ತು ಇವೆರಡನ್ನು ಹಿಂದೂ ಹೆಸರಿನ "ಬ್ರಾಹ್ಮಣ ಧರ್ಮ"ದಿಂದ ಪ್ರತ್ಯೇಕಿಸುವ ಪ್ರಯತ್ನವಿದೆ. (ಗಾಂಧೀಜಿ ಕೂಡ, "ವರ್ಣಾಶ್ರಮ ಪದ್ಧತಿ ಇರಲಿ, ಅಸ್ಪೃಶ್ಯತೆ ತೊಲಗಲಿ" ಎಂಬ ನಿಲುವನ್ನು ಒಂದು ಕಾಲಕ್ಕೆ ತಾಳಿದ್ದರಂತೆ.) ಇವಕ್ಕೆ " ನ್ಯೂನತೆಗಳು" ಎಂದು ಕರೆಯುತ್ತ, ಇವನ್ನು ನೀಗಿಸಿಕೊಂಡರೆ ಸಾಕು, ಈ ಧರ್ಮ ರೋಗಮುಕ್ತವಾಗುತ್ತದೆ ಎಂಬ ಆಶಯ ಇಲ್ಲಿದೆ.

ಆದರೆ ಯೋಗೇಶ್ವರ ಶ್ರೀ ಕೃಷ್ಣ ಗುರೂಜಿ ಹೇಳುತ್ತಾರೆ: "ಕಾಲ ಚಕ್ರ ಉರುಳಿದಂತೆ ಬ್ರಾಹ್ಮಣ ಸಮುದಾಯ ತಾನೇ ಬಿತ್ತಿದ ಜಾತಿಯ ವಿಷ ಬೀಜದ ಫಲಗಳನ್ನು ಉಣ್ಣುತ್ತಿದೆ" (ವಿ.ಕ 18 - 10 - 2008) "ವಿಷ ಬೀಜ" ಶಬ್ದ ಗಮನಿಸಿರಿ. ಬೀಜವೇ ವಿಷವಾಗಿರುವಾಗ ವೃಕ್ಷ ಅಮೃತ ಫಲವನ್ನು ನೀಡಲು ಹೇಗೆ ಸಾಧ್ಯ ? ಅಸ್ಪೃಶ್ಯತೆ ಎಂಬುದು, ನಾಡಿಗರು ಹೇಳುವಂತೆ, ಎಲ್ಲೋ ನಡಂತರ ಗಂಟುಬಿದ್ದ ರೋಗವಲ್ಲ, ಬ್ರಾಹ್ಮಣ ಧರ್ಮದ ಹುಟ್ಟಿನಿಂದಲೇ ಬಂದದ್ದು . ಪೇಜಾವರರು ತಿಳಿದಿರುವಂತೆ ಅದು ತೊಡೆದು ಹಾಕಬಹುದಾದ ಕಳಂಕವಲ್ಲ , ಜನ್ಮದಿಂದಲೇ ಚರ್ಮಕ್ಕೆ ಬಂದಿರುವ ಬಣ್ಣ . ಅರ್ಥಾತ್ : ಜಾತೀಯತೆ , ಅಸ್ಪೃಶ್ಯತೆ ಇಲ್ಲದ ಹಿಂದೂ - ಬ್ರಾಹ್ಮಣ - ಧರ್ಮ ಅಂದರೆ ಪ್ರಾಣವೇ ಇಲ್ಲದ ದೇಹದಂತೆ, ಬುನಾದಿಯೇ ಇಲ್ಲದ ಬಿಲ್ಡಿಂಗಿನಂತೆ, ಆರ್. ಎಸ್. ಎಸ್ ಇಲ್ಲದ ಬಿಜೆಪಿಯಂತೆ.

ಇಂಥ ಧರ್ಮವನ್ನು ರಿಪೇರಿ ಮಾಡುವ ಪ್ರಯತ್ನಗಳೂ ನಡೆದಿವೆ. ಅಸ್ಪೃಶ್ಯತೆಯ ನಿರ್ಮೂಲಕ್ಕಾಗಿ, ಪಾಪ, ನಮ್ಮ ಪೇಜಾವರರು ಕಳೆದ ಶತಮಾನದಿಂದಲೂ ಟೊಂಕ ಕಟ್ಟಿಕೊಂಡೇ ನಿಂತಿದ್ದಾರೆ. ಅವರು ಮಾಡಿದ್ದೇನು? ಹರಿಜನ ಕೇರಿಯುದ್ದಕ್ಕೂ ತಮ್ಮ ಪುಟ್ಟ ಪಾದಗಳನ್ನು ಬೆಳಸಿದರೇ ಹೊರತು ಆ ಕೇರಿಯ ಒಬ್ಬನನ್ನೂ ತಮ್ಮ ಕೃಷ್ಣ ಮಠದ ಗರ್ಭಗುಡಿಗೆ ಬಿಟ್ಟುಕೊಳ್ಳಲಿಲ್ಲ! ಅವರ ಟೊಂಕವನ್ನು ಕೃಷ್ಣ ಪರಮಾತ್ಮ ಗಟ್ಟಿಯಾಗೇ ಇಟ್ಟಿರಲಿ.

" ಇಂದು ವಿಶ್ವದ ಅತ್ಯಂತ ಹಳೆಯ ಹಾಗೂ .... ಅಂದರೆ ನಮ್ಮ ಭಾರತದ ನಾಗರಿಕತೆಯೊಂದೇ" ಎನ್ನುವ ರಾಮಚಂದ್ರ ಶೆಣೈ ಅವರ......... ಶಬ್ದ, ತುರ್ತು ನಿಗಾ ಘಟಕದಲ್ಲಿ(....) ಆಗಲೋ ಈಗಲೋ ಎನ್ನುತ್ತಿರುವ ರೋಗಿಯ ಚಿತ್ರವನ್ನೇ ಸೂಚಿಸುತ್ತದೆ. "ಕಾಲದ ಅಗತ್ಯಕ್ಕೆ ತಕ್ಕಂತೆ

ಬದಲಾವಣೆಗೊಳ್ಳಲು ಭಾರತೀಯ ಮೂಲದ ಧರ್ಮಗಳು ಹೆಚ್ಚು ಸಿದ್ಧ ಮತ್ತು ಸನ್ನದ್ಧವಾಗಿರುತ್ತವೆ'' ಎಂಬ ಅಜಕ್ಕಳ ಗಿರೀಶ್ ಭಟ್ಟರ ಮಾತು ಇತರೇ ಧರ್ಮಗಳಿಗೆ ಅನ್ವಯಿಸಲಾರದು. ''ಎಲ್ಲ ಮತಾಂತರಿಗಳನ್ನೂ ಮರಳಿ ತರುತ್ತೇವೆ. ಅವರಿಗೆ ಹಿಂದೂ ಚೌಕಟ್ಟಿನಲ್ಲಿ ತಮಗೆ ಇಷ್ಟವಾದ ಜಾತಿಯನ್ನು ಆರಿಸಿಕೊಳ್ಳಲು ಅವಕಾಶ ಕೊಡಬೇಕು. ಒಪ್ಪಿಗೆಯೇ ? ಎಂಬ ಎನ್. ಎಸ್. ಶಂಕರ ಅವರ ಪ್ರಶ್ನೆಗೆ ಯಾರ ಬಳಿಯೂ ಉತ್ತರವಿಲ್ಲ. ಅವರೆಲ್ಲ ಈ ವಿಷಯದ ಬಗ್ಗೆ ನಿರುತ್ತರ ಕುಮಾರರು.

ವಿಜಯ ಕರ್ನಾಟಕದ ಸಂವಾದದಲ್ಲಿ ಕೆಲವು ಅನಪೇಕ್ಷಿತ ಪ್ರಸ್ತಾಪಗಳು ನೋವನ್ನುಂಟು ಮಾಡುವಂತಿವೆ. ಕನ್ನಡಕ್ಕೆ ಅಧಿಕೃತವಾಗಿ ಶಾಸ್ತ್ರೀಯ ಭಾಷೆಯ ಸ್ಥಾನಮಾನ ದೊರೆತಿರುವ ಸಂಭ್ರಮ ನಮ್ಮದೀಗ. ಕನ್ನಡ ಭಾಷೆ ಮತ್ತು ಸಾಹಿತ್ಯದ ಸಮೃದ್ಧಿಗೆ ಕ್ರೈಸ್ತ ಮಿಶನರಿಗಳ ಕೊಡುಗೆ ಅಪಾರ. ಅವರೆಲ್ಲ ಕನ್ನಡದ ಪುಣ್ಯ ಪುರುಷರ ಮಾಲಿಕೆಯಲ್ಲಿ ಸೇರಿದ್ದಾರೆ. ರೆವರೆಂಡ್ ಎಫ್. ಕಿಟೆಲ್ ಅವರ ನಿಘಂಟು ಇಂದಿಗೂ ಒಂದು ಪ್ರಮಾಣ ಗ್ರಂಥವೇ. ಕನ್ನಡದ ಕೆಲಸಕ್ಕೆ ಮೊಟ್ಟ ಮೊದಲ ಡಾಕ್ಟರೇಟ್ ಪಡೆದ ಮಹಾನುಭಾವರವರು. ಅವರ ಬಗ್ಗೆ ಡಾ. ನವರತ್ನ ರಾಜಾರಾಂ, ''ಕಿಟೆಲ್ ಶಬ್ದಕೋಶ ಬರೆದಂತೆ ಇತರರೂ ಬರೆದಿದ್ದಾರೆ'' ಪಾಪ, ನವರತ್ನರಿಗೆ ಕನ್ನಡ ಪರಂಪರೆಯ ಬಗ್ಗೆ ಯಾವ ಅರಿವೂ ಇರಲಿಕ್ಕಿಲ್ಲ. ಅವರ ಅಜ್ಞಾನವನ್ನು ಕ್ಷಮಿಸೋಣ. ಆದರೆ ನಮ್ಮ ಖ್ಯಾತ ವಿದ್ವಾಂಸ ಚಿಮೂ ಕೂಡ ರೆ. ಕಿಟೆಲ್, ಮೋನಿಯಲ್ ವಿಲಿಯಮ್ಸ್, ರೆ. ಉತ್ತಂಗಿ ಚನ್ನಪ್ಪ ಅವರ ಬಗ್ಗೆ ಲಘುವಾಗಿ ಬರೆದದ್ದು ಬೇಸರದ ಸಂಗತಿ. ಅವರು ತಮ್ಮ ಸದ್ವದ ಎತ್ತರವನ್ನು ಇನ್ನೂ ಕಡಿಮೆ ಮಾಡಿಕೊಂಡು ಕುಬ್ಜವಾಗಿದ್ದಾರೆ. ಅವರ ಮುಂದಿನ ಕುಸಿತವನ್ನು ಕಾದು ನೋಡೋಣ.

★

ಭೈರಪ್ಪನವರು ತಮ್ಮ ಲೇಖನದಲ್ಲಿ ಒಂದು ನೆಲೆಯಲ್ಲಿ ಮದರ್ ತೆರೆಸಾ ಮತ್ತು ಸಿದ್ಧಗಂಗೆಯ ಶ್ರೀಗಳನ್ನು ಮುಖಾಮುಖಿಯಾಗಿಸಿದ್ದಾರೆ. ಭೈರಪ್ಪ ಮುತ್ಸದ್ಧಿ ಹೌದೋ ಅಲ್ಲವೋ, ಅವರೊಬ್ಬ ಧೂರ್ತ ಬುದ್ಧಿಜೀವಿ. (ಈ ಸರ್ಟಿಫಿಕೇಟ್ ಬಗ್ಗೆ ಮಾತ್ರ ರಾಮಚಂದ್ರ ಶೆಣೈ ಆಕ್ಷೇಪ ಎತ್ತಲಾರರು) ಈ ದೇಶದಲ್ಲಿರುವ ಮೂರೊ ನಾಲ್ಕೊ ಪರ್‌ಸೆಂಟ್ ಬ್ರಾಹ್ಮಣರಿಗೆ ''ರಾಜ''ರಾಗುವ ಅವಕಾಶವಿಲ್ಲ. ಆ ಭ್ರಮೆಯೂ ಅವರಿಗಿಲ್ಲ. ಆದರೆ ''ರಾಜಗುರು''ವಾಗಿ, ''ರಾಜಪುರೋಹಿತ ''ರಾಗಿ ಅಧಿಕಾರ ಅನುಭವಿಸುವ ಆಸೆ ಮಾತ್ರ ನಿರಂತರ. ಅವರದು ಚಾಣಕ್ಯ - ಪ್ರಜ್ಞೆ. ಅವರ ತಂತ್ರದ ಅನುಷ್ಠಾನಕ್ಕೆ ಆಡ್ವಾಣಿ - ರಾಜ್‌ನಾಥ್ ಸಿಂಗ್, ವೆಂಕಯ್ಯ ನಾಯ್ಡು, ನರೇಂದ್ರ ಮೋದಿ, ಕಲ್ಯಾಣ ಸಿಂಗ್, ಯಡಿಯೂರಪ್ಪ ಇಂಥ ಶೂದ್ರ ಶಕ್ತಿಗಳು ಬೇಕು. ಈಗ ನೋಡಿರಿ ನಮ್ಮ ರಾಜ್ಯದಲ್ಲಿ ಯಡೆಯೂರಪ್ಪ ನೇತೃತ್ವದ ಬಿಜೆಪಿ ಸರಕಾರಕ್ಕೆ ಇಲ್ಲಿಯ ಬಲಾಢ್ಯ ವೀರಶೈವ / ಲಿಂಗಾಯತ ಸಮುದಾಯವೇ ಬೆನ್ನೆಲುಬು. ಈ ಸಮುದಾಯದ ಅತ್ಯಂತ ಹಿರಿಯ ಧರ್ಮಗುರುಗಳು ಸಿದ್ಧಗಂಗೆಯ ಶ್ರೀ ಶಿವಕುಮಾರ ಸ್ವಾಮಿಗಳು. ಭೈರಪ್ಪನವರಿಗೆ ಇದೆಲ್ಲವೂ ಮುಖ್ಯ.

ಸಿದ್ಧಗಂಗೆಯ ಶ್ರೀಗಳದು ಬಾಯಿತುಂಬ ಬಸವಮಂತ್ರ, ಬಾಳ ತುಂಬ ಬಸವ ತತ್ತ್ವದ ಅನುಷ್ಠಾನ, ಅನ್ನದಾನ - ಜ್ಞಾನದಾನಗಳ ಶರಣ ಪರಂಪರೆಯನ್ನು ಸಾರ್ಥಕವಾಗಿ ನಡೆಸಿಕೊಂಡು ಬಂದ ಮಹಾನುಭಾವರು. ನಡೆದಾಡುವ ದೇವರೆಂದೇ ಲೋಕ ವಿಖ್ಯಾತರು. ಆದರೆ ಇತ್ತೀಚಿನ ರಾಜಕೀಯ ವಿದ್ಯಮಾನಗಳಲ್ಲಿ ಶ್ರೀಗಳವರ ''ನಡೆ'', ಶರಣ ಸಂಸ್ಕೃತಿಯನ್ನು ನಂಬಿರುವವರಲ್ಲಿ ಆತಂಕ ಮೂಡಿಸಿದೆ. ''ಕೋಮುವಾದಿ'' ಎಂಬ ಹಣೆಪಟ್ಟಿ ಸರಕಾರಕ್ಕೆ ಆಧಾರಸ್ತಂಭವೇ ಆಗಿರುವ ಅವರ ಧವಳ ಕೀರ್ತಿಗೆ ನಿಸ್ಸಂದೇಹವಾಗಿ ಕಳಂಕ ತಗುಲಿದೆ. ಹೇಳಿಕೊಳ್ಳಲಾಗದ ಸಂಕಟ ಶ್ರೀಗಳ ಅಭಿಮಾನಿಗಳಿಗೆ. ನಡೆದಾಡುವ ದೇವರೇ ಹೀಗೆ ಎಡವಿದರೆ ಉಳಿದವರ ಗತಿ ಏನು? ಶ್ರೀಗಳೇ ಉತ್ತರಿಸಬೇಕು.

★

ಅನೇಕ ಕೋನಗಳಿಂದ ಭೂತದ ವಿಶ್ಲೇಷಣೆಯಾಗಿದೆ, ವರ್ತಮಾನದ ಹಲವು ನೋಟಗಳು ಕಣ್ಣೆದುರಿಗಿವೆ. ಕಾಲದ ಗತಿ ಯಾವಾಗಲೂ ಭವಿಷ್ಯದತ್ತ. ನಾವು ನಮ್ಮ ಗೋವಿಂದರಾಯರ ಉಪನಿಷತ್ ಕಾಲಕ್ಕೆ ಮರಳಲಾರೆವು. ಏನಿದ್ದರೂ ನಮ್ಮ ಚಿತ್ತ ನಾಳೆಯತ್ತ. ಇಂದು ಜಗತ್ತಿನಲ್ಲೆಲ್ಲ 'ಸ್ಥಾಪಿತ' ಧರ್ಮಗಳು ಅಪ್ರಸುತ್ತವಾಗುತ್ತಿವೆ. ಖಂಡಾಂತರ , ಲೋಕಾಂತರ ಕ್ಷಿಪಣಿಗಳ ಈ ಕಾಲದಲ್ಲಿ ಹೊಸ ಹೊಸ ಪೀಳಿಗೆಗಳು ''ಮತಾಂತರ'' ದ ಬಗ್ಗೆ ಆಸಕ್ತಿ ಹೊಂದಿಲ್ಲ. ಸಹನೆ, ಸಮಾನತೆ, ಸಹಜೀವನ - ಇಂಥ ನೆಲೆಗಳಿಲ್ಲದ ಯಾವುದೇ ''ಧರ್ಮ''ಕ್ಕೆ, ನಾಳೆ ಬೆಳೆಯುವುದಿರಲಿ, ಇಂದು

ಉಳಿಯುವ ಸಾಧ್ಯತೆಯೂ ಇಲ್ಲ.

ಪ್ರಸುತ್ತ ಮತಾಂತರ ಕುರಿತ ಸಂವಾದದ ಸಂದರ್ಭದಲ್ಲಿ ''ಮುಂದೇನು'' ......? ಎಂಬ ಪ್ರಶ್ನೆಗೆ ಉತ್ತರವಾಗಿ ನನ್ನ ಚಿಂತನೆಯ ಲಹರಿಗಳಿವು. ಇಲ್ಲಿ ''ಹೀಗೆ ಆಗಬಹುದು'' ಎಂಬ ನಿರೀಕ್ಷೆಗಳಿವೆ, ''ಹೀಗೆ ಆಗಲೀ'' ಎಂಬ ಆಶಯಗಳಿವೆ.

1. ಜಾತಿ - ಶ್ರೇಣೀಕರಣದ ಕೆಳತುದಿಗಿರುವ ''ಅಸ್ಪೃಶ್ಯ'' ಸಮುದಾಯಗಳು ನಿರಾತಂಕವಾಗಿ ಬುದ್ಧ ತೋರಿದ ಬೆಳಕಿಗೆ ತೆರದುಕೊಂಡು '' ಬುದ್ಧ ಧಮ್ಮ'' ದ ದೀಕ್ಷೆ ಪಡೆಯಬೇಕು. ಈ ಪ್ರಕ್ರಿಯೆ ಈಗಾಗಲೇ ಪ್ರಾರಂಭವಾಗಿದೆ.

2. ವೈದಿಕ ಧರ್ಮದ ವಿರುದ್ಧ ಬಂಡಾಯವೆದ್ದ ಜೈನ , ಸಿಖ್ ಮುಂತಾದ ಧರ್ಮಗಳು ತಮ್ಮ ಸ್ವತಂತ್ರ ಅಸ್ತಿತ್ವವನ್ನು ಗಟ್ಟಿಗೊಳಿಸಿಕೊಳ್ಳಬೇಕು.

3. ''ನಾವು ಹಿಂದೂಗಳಲ್ಲ'' ಎಂದು ಸಾರಿದ ಲಿಂಗಾಯತ ಧರ್ಮೀಯರು ಅದನ್ನು ಇನ್ನೂ ಗಟ್ಟಿಯಾಗಿ ಹೇಳಿ ಬ್ರಾಹ್ಮಣ ಧರ್ಮದ ಹಂಗು ಸಂಪೂರ್ಣ ತೊರೆಯಬೇಕು. ಈ ಬಗ್ಗೆ ಡೋಲಾಯಮಾನ ಸ್ಥಿತಿಯಲ್ಲಿರುವ, ತಮ್ಮನ್ನು ''ವೀರಶೈವ''ರೆಂದು ಕರೆದುಕೊಳ್ಳುವ ಪಂಚಾಚಾರ್ಯ ಪಂಥದವರು ತ್ರಿಶಂಕು ಸ್ಥಿತಿಯಿಂದ ಹೊರ ಬರಬೇಕು.

4. ಒಟ್ಟಿನಲ್ಲಿ , ಅಲ್ಪಸಂಖ್ಯಾತರೇ ಆಗಿರುವ ಬ್ರಾಹ್ಮಣರ ಧರ್ಮ ಅವರ ಸಂಖ್ಯೆಗನುಗುಣವಾಗಿ ಅಲ್ಪಸಂಖ್ಯಾತ ಧರ್ಮವಾಗಬೇಕು. ಇದು ನೈಸರ್ಗಿಕ ಹಾಗೂ ಸಾಮಾಜಿಕ ನ್ಯಾಯ. ಆಗ ದಲಿತರಿಗೆ ಬೇಡವಾದ ''ಹರಿಜನ'' ಪದವನ್ನು ಬ್ರಾಹ್ಮಣರೇ ಇಟ್ಟುಕೊಳ್ಳಬಹುದು. ★

- ಚಂದ್ರಶೇಖರ ಪಾಟೀಲ (ಚಂಪಾ)
ಮಾಜಿ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರು,
ವಿಜಯ ಕರ್ನಾಟಕ (ದಿ.6-11-2008 ಸಂಚಿಕೆ) ಕೃಪೆಯಿಂದ

ವಿಶೇಷ ಸೂಚನೆಗಳು :-

1. ಪೂಜ್ಯ ರಾಮದೇವ ಬಾಬಾ ಅವರ ಯೋಗ ಶಿಬಿರದಲ್ಲಿ ತರಬೇತಿ ಪಡೆದ ಮೈಸೂರಿನ ಶರಣ.ಗೋವಿಂದ ರಾಜು ಮತ್ತು ಶರಣ.ಮಧು ಅವರು ಶರಣ ಮೇಳದ 5 ದಿವಸ ಕಾಲ ಪ್ರತಿ ದಿನ ಬೆಳಗ್ಗೆ 5-00ರಿಂದ 7-00ರವರೆಗೆ ಅತ್ಯಂತ ಕ್ರಮ ಬದ್ಧವಾಗಿ, ವೈಜ್ಞಾನಿಕವಾಗಿ ಪ್ರಾಣಾಯಾಮ, ಯೋಗಾಸನ ಉಚಿತವಾಗಿ ಕಲಿಸಲಿದ್ದಾರೆ. ದೇಶ ವಿದೇಶಗಳಲ್ಲಿ ಲಕ್ಷಾಂತರ ಜನ ಪೂಜ್ಯ ರಾಮದೇವ ಬಾಬಾ ಅವರ ವಿಶೇಷ ಯೋಗದಿಂದ ಉತ್ತಮ ಆರೋಗ್ಯ ಪಡೆದುಕೊಂಡಿದ್ದಾರೆ. ಆದ್ದರಿಂದ ಶರಣ ಮೇಳಕ್ಕೆ ಬಂದು, ಈ ಸದವಕಾಶವನ್ನು ಉಪಯೋಗಿಸಿಕೊಳ್ಳಬೇಕೆಂದು ಸೂಚಿಸುತ್ತೇವೆ.

2. ಸ್ವಚ್ಚತೆಗೆ ಆದ್ಯತೆ ನೀಡುವುದಕ್ಕಾಗಿ ಶರಣರು ಆವರಣವನ್ನು ಚೊಕ್ಕಟಗೊಳಿಸುವ ಪವಿತ್ರ ಕರ ಸೇವೆಯನ್ನು ಮಾಡಬೇಕು. ಕಸಪೊರಕೆಗಳನ್ನು ತೆಗೆದುಕೊಂಡು ಗುಡಿಸಿ, ಅಲ್ಲಲ್ಲೇ ಬಿದ್ದ ಕಾಗದ, ಪ್ಲಾಸ್ಟಿಕ್ ತುಂಡುಗಳನ್ನು ಆಯ್ದು ಕಸದ ಡ್ರಮ್ಮುಗಳಿಗೆ ಹಾಕಬೇಕು.

3. ತಮ್ಮ ತಮ್ಮ ಶಕ್ತ್ಯಾನುಸಾರ ಸೇವೆ ಮಾಡಲು ಎಲ್ಲ ವಯಸ್ಸಿನವರಿಗೂ ಅವಕಾಶವಿರುತ್ತದೆ. ಆದ್ದರಿಂದ ಸೇವಾಸಕ್ತರು ಎಷ್ಟು ಸಾಧ್ಯವೋ ಅಷ್ಟು ಬೇಗನೆ ಬಂದು ಸೇವೆಯಲ್ಲಿ ತೊಡಗಿಸಿಕೊಳ್ಳಬೇಕೆಂದು ಸೂಚಿಸುತ್ತೇವೆ.

4. ಬಸವ ಧರ್ಮ ಪೀಠ, ರಾಷ್ಟ್ರೀಯ ಬಸವ ದಳಕ್ಕೆ ಸಕ್ರಿಯವಾಗಿ ಸೇವೆ ಸಲ್ಲಿಸಿದವರು ಲಿಂಗೈಕ್ಯರಾಗಿದ್ದರೆ ಶರಣ ಮೇಳದಲ್ಲಿ ಅವರ ಹೆಸರು ಹೇಳಿ ಶ್ರದ್ಧಾಂಜಲಿ ಸಲ್ಲಿಸಲಾಗುವುದು. ಜನವರಿ 2008ರ ನಂತರ ಲಿಂಗೈಕ್ಯರಾದ ಹೆಸರನ್ನು ಬೆಂಗಳೂರಿನ ಬಸವ ಮಂಟಪದ ವಿಳಾಸಕ್ಕೆ ಕಳಿಸಿಕೊಡಿರಿ.

- ಶರಣ ಮೇಳ ಉತ್ಸವ ಸಮಿತಿ

ಧರ್ಮಪಿತರ ಕರೆಯೋಲೆ

ಮಮತೆಯ ಮಕ್ಕಳೆ,

ಸೃಷ್ಟಿಕರ್ತ ಲಿಂಗದೇವನ ಸ್ಮರಣೆಯೊಡನೆ ನಿಮಗೆಲ್ಲ ಶುಭಹಾರೈಕೆಗಳು. ನೀವುಗಳೆಲ್ಲ ನನ್ನ ಮಹಾಮನೆಯ ಮಕ್ಕಳು ಲಿಂಗದೇವನ ಪ್ರೇರಣೆಯಂತೆ ನಾನು ಮರ್ತ್ಯದಲ್ಲಿ ಒಂದು ಮಹಾಮನೆಯನ್ನು ಕಟ್ಟಿದೆ. ಇದು ಕೇವಲ ಕಲ್ಲು-ಮಣ್ಣು- ಇಟ್ಟಿಗೆ-ಕಟ್ಟಿಗೆಗಳ ಭೌತಿಕ ಮನೆಯಲ್ಲ; ಒಂದು ತತ್ವ ಸಂಹಿತೆಯನ್ನು ಒಳಗೊಂಡ ಧರ್ಮದ ಮಹಾಮನೆ. ಈ ಮಹಾಮನೆಯನ್ನು ನಾನು ಇದ್ದ ಕಾಲದಲ್ಲಿಯೇ ನೀವು ಪ್ರವೇಶಿಸಿರಬಹುದು, ನಂತರದ ಶತಮಾನದಲ್ಲಿ ಪ್ರವೇಶಿರಬಹುದು, ಇಂದೇ ನಂಬಿಕೆಯ ಮೂಲಕ, ದೀಕ್ಷೆಯ ಮೂಲಕ ಬಂದಿರಬಹುದು ಎಂದೇ ಬಂದಿರಲಿ ನೀವು ನನ್ನವರು. ನನ್ನವರೆಲ್ಲರೂ ಜಾತಿ ಮತ ಪಂಥ ವೃತ್ತಿ ಅಂತಸ್ತು ಭೇದವಿಲ್ಲದೆ ಒಂದು ಕಡೆ ಸೇರಬೇಕೆಂಬುದೇ ನನ್ನಿಚ್ಛೆ.

ನಿಮಗೆ ಲೌಕಿಕವಾಗಿ ಸೇರುವುದು ಗೊತ್ತು. ಹೆಣ್ಣುಮಕ್ಕಳಿಗೆ ತೌರು ಮನೆಯಲ್ಲಿ ಆಗಾಗ ಸೇರುವುದು ಗೊತ್ತು. ತಾಯಿ-ತಂದೆ, ಅಕ್ಕ-ತಂಗಿ, ಅಣ್ಣ-ತಮ್ಮಂದಿರೊಡನೆ ನಲಿದಾಡಲು ಅದೆಂತಹ ಕಾತುರದಿಂದ ಕಾಯುವರು ಎಂಬುದು ನಿಮಗೆಲ್ಲ ಗೊತ್ತು. ಆದರೆ ಭಕ್ತಿ ಸಂಬಂಧದಿಂದ ಒಂದು ಕಡೆ ಸೇರಬೇಕು; ಈ ಸಂಬಂಧ ರಕ್ತ ಸಂಬಂಧಕ್ಕಿಂತಲೂ ಶ್ರೇಷ್ಠ ಎಂಬುದನ್ನು ಇನ್ನೂ ನೀವು ಬಹಳ ಜನ ಅರಿತಿಲ್ಲ; ಈಗಲಾದರೂ ಅರಿಯಬೇಕು.

ತಮ್ಮ ಮಕ್ಕಳು ತೌರಿಗೆ ಬರಬೇಕು; ಪ್ರೀತಿಪೂರ್ವಕವಾಗಿ ಸೋದರ-ಸೋದರಿಯರೊಡನೆ ಬೆರೆಯಬೇಕು; ತಮ್ಮನ್ನು ಗೌರವಿಸಬೇಕು; ತಂದೆ ತಾಯಿಯರ ವಾತ್ಸಲ್ಯದಲ್ಲಿ ಮೀಯಬೇಕು ಎಂದು ಯಾವ ತಂದೆ ತಾಯಿ ಬಯಸರು? ಸೃಷ್ಟಿಕರ್ತನೆಂಬ ತಂದೆಯ, ಮಾತೃ ಹೃದಯಿಯಾದ ನನ್ನ ಇಚ್ಛೆಯೂ ಅದೇ ಆಗಿದೆ. ಇದನ್ನು ನೀವೇಕೆ ಅರ್ಥ ಮಾಡಿಕೊಳ್ಳುತ್ತಿಲ್ಲ? ಇಷ್ಟು ದಿನ ನಿಮಗೆಲ್ಲ ಅಂಥ ಅವಕಾಶ ಕಲ್ಪಿಸಿದೆ. ಸಮಾನತೆ-ಸೋದರತ್ವ - ಸ್ವಾತಂತ್ರ್ಯ ಇವು ನನ್ನ ತತ್ವದ ಮುಖ್ಯ ಮೂರು ಸೂತ್ರಗಳು. ಇಲ್ಲಿ ಅವು ಮೂರನ್ನು ಕಾಣಬಹುದು. ಅದಕ್ಕಾಗಿ ನಾನು ನಿಮಗೆ ಹಾರ್ದಿಕ ಆಹ್ವಾನ ನೀಡುತ್ತಿದ್ದೇನೆ. ನೀವೆಲ್ಲರೂ ಬನ್ನಿರಿ, ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಬನ್ನಿರಿ.

ಸೃಷ್ಟಿಕರ್ತ ಪರಮಾತ್ಮನೇ ನಮ್ಮೆಲ್ಲರ ತಂದೆ, ಒಂದೊಂದು ಕಾಲದಲ್ಲಿ ಒಬ್ಬೊಬ್ಬರು ಲೋಕದ ಉದ್ಧಾರಕ್ಕಾಗಿ, ಜನರನ್ನು ಧರ್ಮ ಮಾರ್ಗಕ್ಕೆ ಕರೆತರಲು ಮಧ್ಯವರ್ತಿಗಳನ್ನಾಗಿ ಆಯ್ಕೆ ಮಾಡಿಕೊಂಡ. ಬುದ್ಧ ಮೊಹಮ್ಮದ್, ಏಸು, ನಾನು ಎಲ್ಲಾ ಅಣ್ಣತಮ್ಮಂದಿರಂತೆ. ದೇವರೆಂಬ ತಂದೆಯ ಅವಿಭಾಜ್ಯ ಕಿರಣಗಳು. ದೇವರು ಪರಿಪೂರ್ಣನು, ನಿತ್ಯನು. ಅವನು ಸೀಮಿತರಾದ ತಾಯಿ ತಂದೆಗಳ ಹೊಟ್ಟೆಯಲ್ಲಿ ಹುಟ್ಟಿ ಬರುವುದಿಲ್ಲ ಮತ್ತು ಕರ್ತನು ಎಲ್ಲಿಯೋ ಒಂದು ಕಡೆ ಯಾವುದೋ ಲೋಕದಲ್ಲಿ ಸೀಮಿತನಾಗಿ ಇರುವುದಿಲ್ಲ. ಸೃಷ್ಟಿ - ಸ್ಥಿತಿ -ಲಯ - ತಿರೋದಾನ ಎಂಬ ನಾಲ್ಕು ಕಾರ್ಯಗಳನ್ನು ಮಾಡಿ, ತಾನು ನೇರವಾಗಿ ಕೆಲವು ವ್ಯಕ್ತಿಗಳನ್ನು ಆಯ್ಕೆ ಮಾಡಿಕೊಂಡು, ಅವರಲ್ಲಿ ತನ್ನ ಅದ್ಭುತವಾದ ಕಾರುಣ್ಯ ಅವತೀರ್ಣಗೊಳಿಸಿ, ಸಾಮರ್ಥ್ಯವನ್ನು ನೀಡಿ, ಲೋಕದ ಜನತೆಯನ್ನು ಅನುಗ್ರಹಿಸಿ ಮುನ್ನಡೆಸಲು ಅವಕಾಶ ನೀಡುವನು. ಸೃಷ್ಟಿಕರ್ತನ ಉದ್ದೇಶ ಲೋಕದ ಮಾನವರು ಲೋಕದ ತಂದೆಯಾದ ದೇವನನ್ನು ಅರಿಯಬೇಕು. ಅವನ ಪ್ರೀತಿಯ ಕಾರುಣ್ಯ ಜಲದಲ್ಲಿ ಮೀಯಬೇಕು ಎಂಬುದೇ ಆಗಿದೆ. ಹೀಗಾಗಿ ಎಲ್ಲಾ ಧರ್ಮಗಳ ಏಕವೇವ ಧ್ಯೇಯವು ಸೃಷ್ಟಿಕರ್ತ ಆಗಿದ್ದಾನೆ.

ಈ ಸತ್ಯವನ್ನು ಗ್ರಹಿಸುವಲ್ಲಿ ಸೀಮಿತ ಬುದ್ಧಿಯ ಮಾನವರು ಹಲವಾರು ತಪ್ಪುಗಳನ್ನು ಎಸಗಿ ಮೂಢನಂಬಿಕೆ, ಬಹುದೇವತೋಪಾಸನೆ ಮುಂತಾದವನ್ನು ರೂಢಿಸಿಕೊಂಡಿದ್ದರೆ ಸಮಾಜವನ್ನು ಒಡೆದು ಆಳಬೇಕೆಂಬ ಸ್ವಾರ್ಥ ಬುದ್ಧಿಯ ಜನರು ಅತ್ಯಂತ ವಿಷಮ ರೀತಿಯ ವರ್ಗೀಕರಣವಾದ ವರ್ಣ ವ್ಯವಸ್ಥೆ, ಜಾತಿ ಪದ್ಧತಿಯನ್ನು ಹುಟ್ಟು ಹಾಕಿ ಪೋಷಿಸುತ್ತ ಬಂದು ಅನೇಕ ಅನಿಷ್ಠ ಪರಿಣಾಮಗಳಿಗೆ ಕಾರಣರಾದರು. ಶೋಷಣೆಯು ಅಗಾಧವಾಗಿ ಸೃಷ್ಟಿಯ ಅರ್ಧ ಅಂಗವಾದ ಮಹಿಳೆಯರನ್ನು ಒಳಗೊಂಡು ಬಹಳ ಜನ ದೇವರು- ಧರ್ಮ- ಸಂಸ್ಕಾರದ ಹಕ್ಕು; ಇವುಗಳಿಂದ ವಂಚಿತರಾದರು.

ಮಮತೆಯ ಮಕ್ಕಳೆ, ತಾನೇ ಸೃಷ್ಟಿಸಿದ ಈ ಜಗತ್ತು, ಮಾನವನು ಸಮಾಜ ದಾರಿ ತಪ್ಪುತ್ತ ಹೊರಟು ಮಾನವ ಸಮಾಜವನ್ನು ಅಂದಗೆಡಿಸಿದ್ದನ್ನು ಕಂಡು ನೊಂದ ಕರ್ತನು, ನನ್ನಲ್ಲಿ ಅನುಗ್ರಹ ಇಳಿಸಿ, ಸಮಾಜ ಸುಧಾರಣೆಗೆ ನನ್ನನ್ನು ಆಯ್ಕೆ ಮಾಡಿಕೊಂಡನು.

ಕರ್ತನಟ್ಟಿದಡೆ ಮರ್ತ್ಯದಲ್ಲಿ ಮಹಾಮನೆಯ ಕಟ್ಟಿದೆ
ಸತ್ಯ ಶರಣರಿಗೆ ತೊತ್ತುಭೃತ್ಯನಾಗಿ ಸವೆದು ಬದುಕಿದೆನು
ಕರ್ತನ ಬೆಸನು ಮತ್ತೆ ಬರಲೆಂದಟ್ಟಿದಡೆ
ಲಿಂಗದೇವರ ನಿರೂಪಕ್ಕೆ ಮಹಾಪ್ರಸಾದವೆಂಬೆನು

ದೇವನ ಆಜ್ಞೆಯಂತೆ ನನ್ನ ಬದುಕು ನಡೆಯಿತು. ನಾನು ಆರಂಭಿಸಿದ ಸತ್ಯ ಸ್ಥಾಪನೆಯ ಕಾರ್ಯವನ್ನು ಅಸಂಖ್ಯಾತ ಶರಣರು ಮುಂದುವರಿಸಿದರು. ತಮ್ಮ ಪ್ರಾಣತೆತ್ತು ವಚನ ಸಾಹಿತ್ಯವನ್ನು ರಕ್ಷಿಸಿ, ನಿಮಗೆ ಅಮೂಲ್ಯ ಜ್ಞಾನ ಭಂಡಾರವನ್ನು ಕೊಟ್ಟಿದ್ದಾರೆ. ಮಾನವ ಸಮಾಜ ವರ್ಣ-ಜಾತಿ, ವರ್ಗ-ಅಂತಸ್ತು, ಮತ-ಪಂಥ, ಬಣ್ಣ-ಲಿಂಗ ಭೇದಗಳಿಂದ ಅಸಮಾನತೆಯನ್ನು ಸೃಷ್ಟಿಸಿರುವುದನ್ನು ಕಂಡು ಇವೆಲ್ಲವುಗಳಿಂದ ಹೊರತಾದ "ಗಣ ಧರ್ಮ"ವನ್ನು ನಾನು ಕೊಟ್ಟಿದ್ದೇನೆ. ಇಂದು ನೀವು ಕೆಲವರು ಹುಟ್ಟಿನಿಂದಲೇ ಲಿಂಗಾಯತರಾಗಿರಬಹುದು, ನಿಮ್ಮ ತಾಯಿ ತಂದೆ ಲಿಂಗಾಯತರಾದ ಕಾರಣ. ಆದರೆ ಇದು ನನ್ನ ಆಶಯವಲ್ಲ. ಏಕೆಂದರೆ ಹುಟ್ಟಿನಿಂದ ಬರುವುದು ಜಾತಿ, ಸಂಸ್ಕಾರದಿಂದ ಬರುವುದು ಧರ್ಮ. ನೀವು ಸಂಸ್ಕಾರವನ್ನು ಹೊಂದಿ ಧರ್ಮಾಚರಣೆಯಿಂದ ಲಿಂಗಾಯತರಾಗಬೇಕೇ ಹೊರತು, ಯಾವ ಸಂಸ್ಕಾರವನ್ನೂ ಹೊಂದದೆ ಜಾತಿಯಿಂದ ಲಿಂಗಾಯತರು ಎಂದು ಹೇಳಿಕೊಳ್ಳುವುದು ನನಗೆ ಸಮ್ಮತವಾಗದ ವಿಷಯ. ನನ್ನ ತತ್ವ ಸಂಹಿತೆ ಯಾವುದೇ ಒಂದು ಜಾತಿ, ವರ್ಣಕ್ಕೆ ಸೀಮಿತವಾಗದ "ಗಣ ಧರ್ಮ"ವಾದ್ದರಿಂದ ಈ ಮಾರ್ಗವನ್ನು ಯಾರು ಬೇಕಾದರೂ ಸ್ವೀಕರಿಸಬಹುದು. ಹಾಗೆ ಸ್ವೀಕರಿಸಿದವರನ್ನು ಪ್ರೀತಿಯಿಂದ ನೀವು ಸ್ವಾಗತಿಸಿ ಬರಮಾಡಿಕೊಂಡು, ಸಮರಸ ಮಾಡಿಕೊಳ್ಳಬೇಕು. ಇಂಥ ಸಾಮರಸ್ಯ ಮೂಡಬೇಕಾದರೆ ನೀವು ಆಗಾಗ ಒಂದೆಡೆ ಸೇರಬೇಕು.

ಕಾಗೆಯೊಂದಗುಳ ಕಂಡಡೆ
ಕರೆಯದೆ ತನ್ನ ಬಳಗವೆಲ್ಲವ?
ಕೋಳಿ ಒಂದು ಕುಟುಕ ಕಂಡಡೆ
ಕೂಗಿ ಕರೆಯದೆ ತನ್ನ ಕುಲವನೆಲ್ಲವ?
ಶಿವಭಕ್ತನಾಗಿ ಭಕ್ತಿ ಪಕ್ಷವಿಲ್ಲದಿದ್ದರೆ
ಆ ಕಾಗೆ ಕೋಳಿಯಿಂದ ಕರಕಷ್ಟ ಲಿಂಗದೇವಾ.

ಸೃಷ್ಟಿಕರ್ತನನ್ನು ಇಷ್ಟಲಿಂಗ ರೂಪದಲ್ಲಿ ನಿತ್ಯವೂ ಆರಾಧಿಸಿರಿ. ಇದು ವೈಯಕ್ತಿಕ ಆತ್ಮೋದ್ಧಾರಕ್ಕಾಗಿ. ಸಂಸ್ಕಾರ ಮತ್ತು ಸಂಘಟನೆಗಾಗಿ ಸಮುದಾಯ ಜೀವನದ ಸೂತ್ರಗಳಾಗಿ ಸಾಮೂಹಿಕ ಪ್ರಾರ್ಥನೆಯನ್ನು ಅಳವಡಿಸಿಕೊಳ್ಳಿರಿ.

ಕೌಟುಂಬಿಕ ಪ್ರಾರ್ಥನೆ : ಪ್ರತಿಯೊಬ್ಬ ವ್ಯಕ್ತಿಯ ಆತ್ಮೀಯ ವಲಯವೆಂದರೆ ಕುಟುಂಬ. ಕುಟುಂಬದವರೆಲ್ಲ ಕುಳಿತು ವಾರಕ್ಕೊಮ್ಮೆಯಾದರೂ ಸಾಮೂಹಿಕ ಇಷ್ಟಲಿಂಗಾರ್ಚನೆ ಮಾಡಿರಿ. ಈ ಮೂಲಕ ಕೌಟುಂಬಿಕ ಸೌಹಾರ್ದತೆ ಬೆಳೆವುದಲ್ಲದೆ ಎಲ್ಲರಲ್ಲೂ ಧರ್ಮ ಶ್ರದ್ಧೆ ಗಾಢವಾಗುವುದು. ದಿನ ನಿತ್ಯ ಸಂಜೆಯ ವೇಳೆಯಲ್ಲಿ ಹತ್ತು ಹದಿನೈದು ನಿಮಿಷ ಕಾಲವಾದರೂ ಮನೆ ಮಂದಿಯೆಲ್ಲ ಕುಳಿತು ಸಂಜೆಯ ಪ್ರಾರ್ಥನೆ -ನೆನಹು ಮಾಡಿರಿ.

ಶರಣ ಸಂಗಮ-ವಾರದ ಪ್ರಾರ್ಥನೆ : ಸಮುದಾಯತ ಜೀವನದ ಶ್ರೇಷ್ಠ ಸೂತ್ರವೆಂದರೆ ಸಾಮೂಹಿಕ ಪ್ರಾರ್ಥನೆ. ವಾರಕ್ಕೊಮ್ಮೆ ಒಂದು ಸ್ಥಳದಲ್ಲಿ ಧರ್ಮಾನುಯಾಯಿಗಳು ಸೇರಿ ಸಾಮೂಹಿಕ ಪ್ರಾರ್ಥನೆ ಮಾಡಿ, ನಂತರ ವಚನಾನುಭವ ಗೋಷ್ಠಿ ಮಾಡಿರಿ. ಸೃಷ್ಟಿಕರ್ತನನ್ನು ಭಜಿಸಿ ಪ್ರಾರ್ಥಿಸಿ, ಸ್ತುತಿಸುವ ಮೂಲಕ ಅವನಿಗೆ ಕೃತಜ್ಞತೆ ಸಲ್ಲಿಸಿರಿ.

ನೆನಹು : ಪ್ರತಿದಿನ ಸಂಜೆ 7 ಗಂಟೆಗೆ ಸರಿಯಾಗಿ ನೀವು ಎಲ್ಲೇ ಇದ್ದರೂ ಆ ಸ್ಥಳದಲ್ಲಿ

15 ನಿಮಿಷದವರೆಗೆ ಪ್ರಾರ್ಥನೆಯನ್ನು ವೈಯಕ್ತಿಕವಾಗಿ ಆಗಲಿ, ಸಾಮೂಹಿಕವಾಗಿ ಆಗಲಿ, ಅಳವಡಿಸಿಕೊಂಡು ತಪ್ಪದೇ ಮಾಡಿರಿ.

ಗಣ ಮೇಳ : ನನ್ನ ವಚನಗಳನ್ನು ಗಮನಿಸಿರಿ. ಗಣ ಮೇಳಾಪಕ್ಕೆ ಎಷ್ಟು ಒತ್ತು ಕೊಟ್ಟಿದ್ದೇನೆ ನೋಡಿರಿ. ಪಕ್ಷಿಗಳು ಸಮೂಹ ಜೀವನವನ್ನು ಇಷ್ಟಪಡುತ್ತವೆ. ಸಮೂಹವನ್ನು ತೊರೆದವನು ವಿಕೃತ ಮನಸ್ಸಿನವನಾಗುವನು. ಆಯಾ ಊರುಗಳಲ್ಲಿ ಧರ್ಮ ಬಾಂಧವರು ಧಾರ್ಮಿಕ ಭ್ರಾತೃತ್ವ ಭಾವ ಬೆಳೆಸಿಕೊಂಡು ವರ್ಷದಲ್ಲಿ ಒಂದು ದಿನವಾದರೂ ಒಟ್ಟುಗೂಡಿ ಪ್ರಾರ್ಥನೆ-ಪೂಜೆ ಮಾಡಿರಿ. ಶಿವರಾತ್ರಿಯಂದು ಬೆಳಿಗ್ಗೆ ವಿಶಾಲವಾದ ಮೈದಾನದಲ್ಲಿ ಧರ್ಮಬಾಂಧವರೆಲ್ಲರೂ ಸೇರಿ ಗಣಮೇಳದಲ್ಲಿ ಭಾಗಿಗಳಾಗಿರಿ.

ಶರಣ ಮೇಳ : ವ್ಯಕ್ತಿಯು ವೈಯಕ್ತಿಕ ಪೂಜೆ ಮಾಡುವುದು, ಕುಟುಂಬದವರೆಲ್ಲರು ಒಂದೆಡೆ ಸೇರಿ ಪ್ರಾರ್ಥಿಸುವುದು ನಿತ್ಯ ವಿಧಿಗಳು. ಸಾಮೂಹಿಕ ಪ್ರಾರ್ಥನೆ ವಾರಕ್ಕೊಮ್ಮೆ ನಡೆಯುವುದರಿಂದ, ವಿವಿಧ ಬಡಾವಣೆ ಪ್ರದೇಶಗಳ ಜನರು ಅಲ್ಲಲ್ಲೇ ಕಲೆತು ಅದನ್ನು ಮಾಡುವರು. ಗಣಮೇಳವು ಆಯಾ ಗ್ರಾಮ, ಊರು, ನಗರಗಳ ಧರ್ಮಬಾಂಧವರನ್ನು ಒಂದೆಡೆ ತರಲು ನೆರವಾಗುವುದು. ಇನ್ನು ಪ್ರಾದೇಶಿಕತೆ, ಭಾಷೆ, ಮುಂತಾದ ಎಲ್ಲಾ ಸೀಮೆದಾಟಿ ಧಾರ್ಮಿಕ ಸೂತ್ರದ ಮೇಲೆ ನಮ್ಮ ತತ್ವಾನುಯಾಯಿಗಳನ್ನು ಬೆಸೆಯುವ ಸೂತ್ರವೇ ಶರಣ ಮೇಳ. ಆದ್ದರಿಂದ ನಿಮ್ಮ ಎಲ್ಲ ಕೆಲಸ ಕಾರ್ಯಗಳನ್ನು ಬದಿಗೊತ್ತಿ ಕೂಡಲ ಸಂಗಮಕ್ಕೆ ಧಾವಿಸಿ ಬಂದು ಜನವರಿ 11ರಿಂದ 15ರವರೆಗೆ ನಡೆಯುವ ಶರಣ ಮೇಳದಲ್ಲಿ ನೀವು ತಪ್ಪದೇ ಭಾಗಿಗಳಾಗಿರಿ.

ಸತ್ಯ ಸ್ಥಾಪನೆಗಾಗಿ, ಸಮಾನತೆಯ ಅನುಷ್ಠಾನಕ್ಕಾಗಿ ನಾವುಗಳೆಲ್ಲರೂ ಮಾಡಿದ ತ್ಯಾಗವನ್ನು ನೀವು ಮರೆಯಬಾರದು. ನಮ್ಮ ಅಂತಃಕರಣ ಪೂರ್ವಕ ಕಳಕಳಿಯನ್ನು ಪ್ರಾಂಜಲ ಮನಸ್ಸಿನಿಂದ ಅರಿಯಬೇಕು. ಜಗಬದುಕಲೆಂದು ಜನ ಬದುಕಲೆಂದು ವಚನ ವಾಙ್ಮಯವನ್ನು ಹೋರಾಡಿ ರಕ್ಷಿಸಿದ ಅಕ್ಕನಾಗಲಾಂಬಿಕೆ, ಮಡಿವಾಳ ಮಾಚಯ್ಯ, ಚನ್ನಬಸವಣ್ಣ ಮುಂತಾದವರ ಹೋರಾಟ ನಿಮ್ಮನ್ನು ಎಚ್ಚರಿಸದೆ? ಸಮಾನತೆಯ ಧ್ವಜವನ್ನು ಹಾರಿಸಲಿಕ್ಕಾಗಿ ಹರಳಯ್ಯ -ಮಧುವಯ್ಯ- ಶೀಲವಂತರು ಮಾಡಿದ ಪ್ರಾಣಾರ್ಪಣೆ, ಬಲಿದಾನ ನಿಮ್ಮ ಅಂತಃಕರಣವನ್ನು ಕಲಕದೆ?

ಹೆತ್ತ ತಂದೆ ಬಯಸುವುದೇನನ್ನು ? ತನ್ನ ಮಕ್ಕಳೆಲ್ಲರೂ ಒಂದಡೆ ಸೇರಿ ಹಾಡಿ ಪಾಡಿ ನಲಿಯ ಬೇಕೆಂದು ತಾನೇ? ಅದೇ ನನ್ನ ಬಯಕೆ ಸಹ. ತೌರಿಗೆ ಬಂದರೆ ಏನು ಸಿಗುತ್ತದೆ ಎಂದು ನಿಮ್ಮ ಪ್ರಶ್ನೆಯೆ? ಜ್ಞಾನದ ವಸ್ತ್ರವನ್ನು ನನ್ನ ಪ್ರತಿನಿಧಿಗಳಾದ ಬೋಧಕರು ಉಡಿಸುವರು. ಸದ್ಗುಣಗಳ ಆಭರಣ ತೊಡಿಸುವರು. ವಚನ ಜ್ಞಾನದ ಸಂಪದವನ್ನು ಉಡಿ ತುಂಬಿ ಕಳಿಸುವರು. ಐಹಿಕ ಜಗತ್ತಿನಲ್ಲಿ ನನಗೆ ಮೆಚ್ಚುಗೆಯಾಗುವಂತೆ ನೀವು ಹೇಗೆ ಒಗೆತನವ ಮಾಡಬೇಕೆಂಬುದನ್ನು ಕಲಿಸಿ ಕಳಿಸುವರು.

ಷಡಂಗ ದಾಸೋಹ ಮಾಡಿರಿ. ತನು-ಮನ-ಧನ-ಪ್ರಾಣ-ಅಭಿಮಾನ- ಸಮಯ; ಈ ಆರನ್ನೂ ಮೀಸಲಿರಿಸಿ ನಮ್ಮ ತತ್ವಗಳ ಪಾಲನೆಗಾಗಿ ಶ್ರಮಿಸಿರಿ. ಸಮಷ್ಟಿಯ ಉದ್ಧಾರಕ್ಕಾಗಿ ವೈಯಕ್ತಿಕ ಅಹಂಕಾರ - ಪ್ರತಿಷ್ಠೆಗಳೇ ಕಾರಣ ಎಂಬುದನ್ನು ಈಗಲಾದರೂ ಅರಿತುಕೊಳ್ಳಿರಿ.

ನಿಮ್ಮನ್ನು ಯಾರಾದರೂ ಶರಣ ಮೇಳಕ್ಕೆ ಆಹ್ವಾನಿಸಬೇಕೆಂದು, ಕರೆ ಕಳುಹಿಸಬೇಕೆಂದು ನಿರೀಕ್ಷಿಸುವಿರೋ? ಕೂಡದು. ನದಿಯು ನಿರಂತರವಾಗಿ ಹರಿಯುತ್ತಿರುತ್ತದೆ; ಅದರಿಂದ ಯಾರು ಬೇಕಾದರೂ ನೀರನ್ನು ತುಂಬಿಕೊಳ್ಳಬಹುದು. ಹಾಗೆಯೇ ಶರಣ ಮೇಳದಲ್ಲಿ ವಚನ ವಾಙ್ಮಯ ಗಂಗೆ ಹರಿಯುತ್ತಲಿರುತ್ತಾಳೆ. ಬನ್ನಿ, ನಿಮ್ಮ ಹೃದಯ -ಮನ-ಬುದ್ಧಿ ಹಿಡಿಯುವಷ್ಟು ತುಂಬಿಕೊಳ್ಳಿರಿ. ನೀವು ನನಗಾಗಿ, ನಮ್ಮ -ನಿಮ್ಮೆಲ್ಲರ ತಂದೆಯಾದ ಲಿಂಗದೇವನನ್ನು ಆರಾಧಿಸಲು ಬರುತ್ತೀರೆಂದು ನಾನು ಸದಾ ನಿರೀಕ್ಷಿಸುತ್ತ ವಾತ್ಸಲ್ಯ ಪೂರ್ಣವಾಗಿ ನಿಮಗೆ ಈ ಆಹ್ವಾನ ನೀಡಿರುವೆನು.

ನಿಮ್ಮ ಪ್ರೀತಿಯ ತಂದೆ - ಬಸವಣ್ಣ
(ಗ್ರಹಿಸಿದವರು -ಬಸವಾತ್ಮಜೆ -ಮಾತಾಜಿ)

ಕಲ್ಯಾಣ ಕಿರಣಕ್ಕೆ ಸಂಬಂಧಿಸಿದ ದೂರುಗಳಿದ್ದರೆ ದಯವಿಟ್ಟು ಕೆಳಕಂಡ ಜಂಗಮ ದೂರುವಾಣಿಗಳಿಗೆ ಸಂಪರ್ಕಿಸಿರಿ.

9620058492/ 9620057562

ಸಮಸ್ಯೆ? - ಸಮಾಧಾನ !

☐ ಇಂದುಧರು ಗೌಡರು, ಮಮ್ಮಾಜ್ ವಿಲ್ಲ, ಯರಮರಸ್

? ಅಕ್ಕಮಹಾದೇವಿಯ ವಚನಾಂಕಿತವನ್ನು ಬದಲಿಸಿದ್ದೀರೆಂಬ ಆಕ್ರೋಶ ವ್ಯಕ್ತವಾಗುತ್ತಿದೆಯಲ್ಲಾ?

★ ತೆಗೆದೂ ಇಲ್ಲ, ಬದಲಾಯಿಸಿಯೂ ಇಲ್ಲ. ಅಕ್ಕಮಹಾದೇವಿಯ ವಚನಗಳಲ್ಲಿ ಚನ್ನಮಲ್ಲಿಕಾರ್ಜುನ ಎರಡು ಅರ್ಥದಲ್ಲಿ ಬಳಕೆಯಾಗಿದೆ. 1. ಸಾಕಾರ ರೂಪಿ ಶಿವ 2. ನಿರಾಕಾರನಾದ ಲಿಂಗದೇವ; ಬಾಲ್ಯದ ವಚನಗಳಲ್ಲಿ "ಶಿವನ" ವರ್ಣನೆ ಬರುತ್ತದೆ, ನಂತರದ ವಚನಗಳಲ್ಲಿ ಅಕ್ಕಮಹಾದೇವಿಯ ಆರಾಧ್ಯ ವಸ್ತು "ಸಾವಿಲ್ಲದ ಕೇಡಿಲ್ಲದ ರೂಹಿಲ್ಲದ ಚೆಲುವನಾಗುತ್ತಾನೆ." ಪೂರ್ವಾರ್ಧದ ವಚನಗಳಲ್ಲಿ ಚನ್ನಮಲ್ಲಿಕಾರ್ಜುನ ಹಾಗೆಯೇ ಇಡಲಾಗಿದೆ. ಉತ್ತರಾರ್ಧದ ವಚನಗಳಲ್ಲಿ ಚನ್ನಮಲ್ಲಿಕಾರ್ಜುನಕ್ಕೆ ವಿವರಣೆಯಾಗಿ ಮಹಾದೇವಿಯಕ್ಕ ಪ್ರಿಯ ಲಿಂಗದೇವ ಎಂದು ಸೇರಿಸಲಾಗಿದೆ. ಇದು ತಾತ್ವಿಕ ಖಚಿತತೆಗಾಗಿ ಮಾಡಿರುವುದು.

? ಅಂಗದ ಮೇಲೆ ಲಿಂಗವಿಲ್ಲದವರು ಲಿಂಗಾಯತನಲ್ಲ. ಇದು ಸರಿ. ಆದರೆ ಲಿಂಗವಿಲ್ಲದವರಿಗೆ ಮೋಕ್ಷವಿಲ್ಲ? ಇದೇನೀ ನಿಗೂಢ ; ಬಯಲು ಮಾಡಿರಿ.

★ ಪ್ರತಿಯೊಂದು ಧರ್ಮವೂ ತನ್ನ ಅನುಯಾಯಿಗಳಿಗೆ ಕೆಲವು ಕಟ್ಟಳೆಗಳನ್ನು ಹಾಕುತ್ತದೆ, ಹೇಗೆ ಶಾಲೆಗೆ ಬರುವ ಮಗುವಿಗೆ ಶಿಕ್ಷಕರು ಸರಿಯಾಗಿ ಹೋಂ ವರ್ಕ್ ಮಾಡದಿದ್ದರೆ, " ಶಾಲೆಯೊಳಕ್ಕೆ ಬಿಡುವುದಿಲ್ಲ. ಅಥವಾ ಶಾಲೆಯಿಂದ ಹೊರಗೆ ಹಾಕುತ್ತೇವೆ." ಎಂದು ಹೆದರಿಕೆ ಇಡುತ್ತಾರೋ ಹಾಗೆ ಧರ್ಮದಲ್ಲಿ ಕಟ್ಟಳೆ ಹಾಕುತ್ತಾರೆ. ಈ ಪ್ರವೃತ್ತಿ ಎಲ್ಲ ಧರ್ಮಗಳಲ್ಲಿ ಇದೆ. ಇಸ್ಲಾಂದಲ್ಲಿ ಸಹ ಅಲ್ಲಾಹುವಿನಲ್ಲಿ ಕುರಾನ್‌ದಲ್ಲಿ ವಿಶ್ವಾಸವಿಡದವರಿಗೆ ನರಕದ ಶಿಕ್ಷೆಯೇ ಪ್ರತಿಫಲ ಎಂದು ಹೇಳಲಾಗುವುದು. ಈ ಧರ್ಮಗಳು ಹುಟ್ಟಿದ ಕಾಲ ಮಾನದಲ್ಲಿ ಹೇಳಿದ ಮಾತನ್ನು ವೈವಿಧ್ಯಮಯ ಸಂಸ್ಕೃತಿ ಇರುವ ಈ ಕಾಲದಲ್ಲಿ ಅನ್ವಯಿಸಲಿಕ್ಕೆ ಬರುವುದಿಲ್ಲ.

☐ ಸಿದ್ದು ಚಟ್ನಳ್ಳಿ, ಭಾಲ್ಕಿ ,ಬೀದರ್

? ನಾನೊಬ್ಬ ಧರ್ಮ ಪ್ರಸಾರಕ. ಮೊದಮೊದಲು ಲಿಂಗದೇವದ ಪರಿಕಲ್ಪನೆ ಅರ್ಥವಾಗಿರಲಿಲ್ಲ. ಈಗ ಸಂಪೂರ್ಣ ಅರ್ಥವಾಗಿ ಬಹಳ ಸಂತೋಷವಾಗಿದೆ. ಅದನ್ನು ನನ್ನ ಭಾಷಣದಲ್ಲಿ ದೃಢವಾಗಿ ಪ್ರತಿಪಾದಿಸುತ್ತೇನೆ. ನಿಮ್ಮ ರಾ.ಬ.ದಳದ ಕೆಲವರು ಬಸವ ಮಂಟಪಕ್ಕೆ ಬಂದಾಗ ಲಿಂಗದೇವ ವಚನಾಂಕಿತ ಬಳಸುತಾರೆ. ಬೇರೆ ಸಭೆಗಳಲ್ಲಿ ಕೂಡಲ ಸಂಗಮದೇವ ಬಳಸುತಾರೆ. ಹೀಗೇಕೆ?

★ ಧರ್ಮಪಿತರು ಹೇಳಿಲ್ಲವೆ "ಉಡುವಿನ ನಾಲಿಗೆಯಂತೆ ಎರಡಾದರೆ ಮೆಚ್ಚುವನೆ ?" ಎಂದು . ಅವರು ಸಮಯ ಸಾಧಕರು. ಅವರಲ್ಲಿ ತತ್ವಕ್ಕೆ ಬದ್ಧತೆ ಇರದು. ವೇದಿಕೆಗಳ ಆಸೆಗೋ, ಹಣ ಅಥವಾ ಕೀರ್ತಿಯ ಆಸೆಗೋ ನಾಲಿಗೆಯನ್ನು ಬಳಸಿಕೊಳ್ಳುವರು. ನಂಬುವುದು ಲಿಂಗದೇವನನ್ನು, ಧರಿಸಿ ಪೂಜಿಸುವುದೂ ಲಿಂಗದೇವನನ್ನು, ಬಾಯಲ್ಲಿ ಉಚ್ಚರಿಸುವುದು ಸ್ಥಾವರವನ್ನು. ಸಂಪೂರ್ಣ ನಿಷ್ಠೆ ಬಂದ ದಿನ ಏಕದೇವೋಪಾಸನೆ ಎಲ್ಲ ವಿಧದಲ್ಲೂ ಅಳವಡುತ್ತದೆ. ಅವರೆಗೂ ಧರ್ಮಪಿತರ ಭಾಷೆಯಲ್ಲಿ ಅವರು ಅರೆ ಭಕ್ತರು.

☐ ಅಭಿಷೇಕ್ ಹೂಗಾರ, ಧಾರವಾಡ

? ಪಂಚಾಚಾರ್ಯರು ಎಂದರೆ ಕ್ಯಾಥೋಲಿಕ್ಕರಂತೆ ಲಿಂಗಾಯತರು ಎಂದರೆ ಪ್ರೊಟೆಸ್ಟೆಂಟರಂತೆ ಎಂದು ಒಬ್ಬರು ಉಪನ್ಯಾಸಕರು ಹೇಳಿದರು. ಇದು ಸೂಕ್ತವೇ?

★ ಇಲ್ಲ. ಕ್ಯಾಥೋಲಿಕ್ಕರಿರಲಿ, ಪ್ರೊಟೆಸ್ಟೆಂಟರಿರಲಿ ಏಸುಕ್ರಿಸ್ತನ ಪ್ರವಾದಿತ್ವದಲ್ಲಿ ನಂಬಿಕೆ ಇಟ್ಟವರೇ ಆಗಿದ್ದಾರೆ; ಉಭಯತರೂ ಬೈಬಲನ್ನು ಅನುಸರಿಸುತ್ತಾರೆ. ಆದ್ದರಿಂದ ಆ ಹೋಲಿಕೆಯು ಸರಿಯಲ್ಲ. ವೀರಶೈವ ಪಂಚಾಚಾರ್ಯರು ವೈದಿಕ ಶೈವ ಆಚರಣೆ ಮಾಡುವುದರಿಂದ ಅವರನ್ನು ಯಹೂದಿಗಳಿಗೆ ಹೋಲಿಸಬಹುದು. ಲಿಂಗಾಯತರು ವಚನ ಸಾಹಿತ್ಯವನ್ನು ಸಂವಿಧಾನವೆಂದು ತಿಳಿಯುವುದರಿಂದ ಹೊಸ ಒಡಂಬಡಿಕೆ ಒಪ್ಪುವ ಕ್ರೈಸ್ತರಿಗೆ ಹೋಲಿಸಬಹುದು. ಬಸವ ತತ್ವಾನುಯಾಯಿಗಳಲ್ಲೇ ಕೂಡಲಸಂಗಮದೇವ ವಚನಾಂಕಿತ ಬಳಸುವವರನ್ನು ಕ್ಯಾಥೋಲಿಕ್ಕರಿಗೆ, ಲಿಂಗದೇವ ವನ್ನು ವಚನಾಂಕಿತವಾಗಿ ಬಳಸುವವರನ್ನು ಪ್ರಾಟೆಸ್ಟೆಂಟರಿಗೆ ಹೋಲಿಸಬಹುದು. ಪ್ರಾಟೆಸ್ಟೆಂಟರಲ್ಲಿ ಹೆಚ್ಚು ಪ್ರಗತಿಪರ ಚಿಂತನೆ ಇದೆ.

☐ ಚಂದ್ರಶೇಖರ ಬೆನಕಿನ, ಗುಲಬರ್ಗಾ

? ಸೆಪ್ಟೆಂಬರ್ ಕಲ್ಯಾಣ ಕಿರಣದಲ್ಲಿ "ಆದಿ ಶರಣರ ಸ್ಮರಣೆ " ಶೀರ್ಷಿಕೆಯಡಿಯಲ್ಲಿ ಅನುಭವ ಮಂಟಪದ ಶರಣರ ಹೆಸರುಗಳು ಬಂದಿರುವುದು ಕಂಡು ಸಂತೋಷವಾಯಿತು. ಆದರೆ ಎಲ್ಲಿಯೂ ಬಸವಣ್ಣನವರ ಮೊದಲ ಧರ್ಮಪತ್ನಿ ಗಂಗಾಂಬಿಕೆಯ ಹೆಸರು ಬರದಿರುವುದು ಕಂಡು ವಿಷಾದವೆನಿಸಿತು. ಬರೆಯುವಲ್ಲಿ ಮರೆವಾಗಿದೆಯೆ?

★ ಮರೆವಾಗಿಲ್ಲ, ಉದ್ದೇಶಪೂರ್ವಕವಾಗಿಯೇ ಸೇರಿಸಿಲ್ಲ. ಏಕೆಂದರೆ ಧರ್ಮಪಿತ ಬಸವಣ್ಣನವರಿಗೆ ಇದ್ದುದು ಒಬ್ಬಳೇ ಪತ್ನಿ., ಅವರ ಹೆಸರು ನೀಲಗಂಗಾ; ನೀಲಲೋಚನೆ ಎಂದೂ ಧರ್ಮಪಿತರು ತಮ್ಮ ವಚನದಲ್ಲಿ ಉಲ್ಲೇಖಿಸಿದ್ದಾರೆ. ಶರಣರು ನೀಲಾಂಬಿಕಾ ಎಂದು ಗೌರವಿಸಿದ್ದಾರೆ. ಗುರು ಬಸವಣ್ಣನವರಿಗೆ ಇಬ್ಬರು ಪತ್ನಿಯರಿದ್ದರೆಂಬುದು ನಂತರದ ಕವಿ ಕಲ್ಪನೆ.

ಸತಿಯ ಕಂಡು ವ್ರತಿಯಾದ ಬಸವಣ್ಣ
ವ್ರತಿಯಾಗಿ ಬ್ರಹ್ಮಚಾರಿಯಾದ ಬಸವಣ್ಣ
ಬ್ರಹ್ಮಚಾರಿಯಾಗಿ ಭವಗೆಟ್ಟ ಬಸವಣ್ಣ
ಗುಹೇಶ್ವರ ಲಿಂಗದಲ್ಲಿ ಅಖಂಡ ಬ್ರಹ್ಮಚಾರಿ ಬಸವಣ್ಣನೊಬ್ಬನೆ.

ಎಂಬ ಪ್ರಭುದೇವರ ವಚನ ಸತಿಯರ ಕಂಡು ಎಂದಿರದೆ ಸತಿಯ ಕಂಡು ಎಂದಿರುವುದನ್ನು ನನ್ನ ವಾದಕ್ಕೆ ಉತ್ತಮ ದಾಖಲೆಯಾಗಿ ತೆಗೆದುಕೊಳ್ಳಬಹುದು.

ಬಸವಂತರಾವ ಬಿರಾದಾರ, ಬೀದರ

? ಪುರೋಹಿತರು ಮಾಡುವ ಶೋಷಣೆ ತಪ್ಪಿಸಲೋಸುಗ ತಾವು ಬಸವ ಧರ್ಮದ ಸಂಸ್ಕಾರಗಳು ಪುಸ್ತಕ ಬರೆದು ಯಾರು ಬೇಕಾದರೂ ಈ ಧಾರ್ಮಿಕ ವಿಧಿ ವಿಧಾನ ಮಾಡಬಹುದೆಂದು ತಿಳಿಸಿ, ಅನೇಕರಿಗೆ ಕಲಿಸಿದಿರಿ. ಇಂಥ ಕೆಲವು ಕ್ರಿಯಾಮೂರ್ತಿಗಳು ಸಹ ಮದುವೆ ಇತ್ಯಾದಿ ಮಾಡಿಸಲು ಹೋದಾಗ ಅದು ಕೊಡಿ, ಇದು ಕೊಡಿ ಎಂದು ಒತ್ತಾಯ ಮಾಡಲು ತೊಡಗುವರಲ್ಲ, ಇದು ಸರಿಯೆ?

★ ಶೋಷಣೆಯ ಒತ್ತಾಯ ಸರಿಯಲ್ಲ. ಅವರಾಗಿ ಸಂತೋಷದಿಂದ ಏನು ಕೊಡುವರೋ ಅದನ್ನು ಪಡೆಯಬೇಕು. ಆದರೆ ಇನ್ನೊಂದು ದೃಷ್ಟಿಯಿಂದ ವಿಚಾರ ಮಾಡೋಣ. ಕರೆದುಕೊಂಡು ಹೋದವರು ಕ್ರಿಯಾ ಮೂರ್ತಿಗಳು ಬಂದು ಹೋದ ಖರ್ಚನ್ನು ಮತ್ತು ಮೇಲಿಷ್ಟು ಕಾಣಿಕೆ ಕೊಡದಿದ್ದರೆ ಹೇಗೆ? ತಮ್ಮ ಕೈಯಿಂದ ಅವರು ಖರ್ಚು ಮಾಡಿಕೊಂಡು ಬಂದು ಹೋಗಬೇಕೇ? ಕೆಲವರು ಅದ್ದೂರಿಯಾಗಿ ಮದುವೆ ಮಾಡುತ್ತಾರೆ. ಕೊಡುವ ಶಕ್ತಿಯೂ ಇರುತ್ತದೆ. ಆದರೆ ಕ್ರಿಯಾಮೂರ್ತಿಗಳಿಗೆ ಕೊಡುವಲ್ಲಿ 'ಶಾಣೆತನ' ಮಾಡುತ್ತಾರೆ. ಕೆಲವು ಜಿಪುಣರು ಶ್ರೀಮಂತರಿದ್ದರೂ ಹಣ ಉಳಿಸಲಿಕ್ಕಾಗಿಯೇ ಬಸವ ತತ್ತ್ವದ ಪ್ರಕಾರ ಮದುವೆ ಮಾಡುತ್ತೇವೆ ಎಂದು ಆಲೋಚಿಸುತ್ತಾರೆ.

ನಾಗಶೆಟ್ಟಿ ಶೆಟಕಾರ, ಬೀದರ.

? ವಿಜಯ ಕರ್ನಾಟಕದಲ್ಲಿ ಮತಾಂತರ ಕುರಿತು ಸಂವಾದ ನಡೆಯುತ್ತಿದೆಯಷ್ಟೆ. ಅದರಲ್ಲಿ ಬ್ರಾಹ್ಮಣವಾದವನ್ನು ಎತ್ತಿ ಹಿಡಿಯುವವರು ಬೌದ್ಧ ಮತವನ್ನು ವೈದಿಕರು ದೇಶ ಬಿಟ್ಟು ಓಡಿಸಲಿಲ್ಲ. ಇಸ್ಲಾಂ ದಾಳಿಕಾರರಿಂದ ಅದು ನಾಶವಾಯಿತು ಎಂದು ಬರೆದರೆ, ಬ್ರಾಹ್ಮಣವಾದ ವಿರೋಧಿಗಳು ಸನಾತನ ವೈದಿಕರೇ ಬೌದ್ಧ ಧರ್ಮ ಭಾರತದಲ್ಲಿ ನಾಶವಾಗಲು, ಅದು ದೇಶಬಿಟ್ಟು ಹೋಗಲು ಕಾರಣ ಎನ್ನುವರಲ್ಲ ಯಾವುದು ಸತ್ಯ?

★ ಬೌದ್ಧ ಧರ್ಮದ ಅಳಿವು-ಭಾರತದ ಮಟ್ಟಿಗೆ ಇತಿಹಾಸದಲ್ಲಿ ಆಗಿದ್ದು ಯಾರಿಂದ ಎಂಬುದನ್ನು ಪಕ್ಕಕ್ಕಿಟ್ಟು ಲಿಂಗಾಯತ ಧರ್ಮದ ಪರಿಸ್ಥಿತಿ ನೋಡಿರಿ. ಮಾನವೀಯತೆ, ಸಮತಾವಾದದ ತಳಹದಿಯ ಮೇಲೆ ಹರಳಯ್ಯನ ಮಗ ಮಧುವರಸರ ಮಗಳ ವಿವಾಹ ಮಾಡಿಸಿದ್ದಕ್ಕಾಗಿ ಧರ್ಮಗುರು ಬಸವಣ್ಣನವರು ಗಡಿಪಾರು ಶಿಕ್ಷೆ ಹೊಂದಬೇಕಾಯಿತು. ಹರಳಯ್ಯ - ಮಧುವರಸರ ವಧೆಯಾಯಿತು. ಮುಗ್ಧ ಶರಣರ ಹತ್ಯೆಯಾಯಿತು. ವೈದಿಕ ಶಾಹಿ ರಾಜ ಬಿಜ್ಜಳನ ಮೂಲಕ ಈ ಹತ್ಯಾಕಾಂಡ ನಡೆಸಿತಲ್ಲವೆ? ಹೋಮ-ಹವನ ಮಾಡುತ್ತ, ಜ್ಯೋತಿಷ್ಯ ಹೇಳುತ್ತ, ತಾಯಿತ - ಕರಿದಾರ ಕಟ್ಟುತ್ತ ಗಣಪತಿ ಪೂಜೆ ಮಾಡುತ್ತ ಲಿಂಗಾಯತ ಧರ್ಮವನ್ನು ನಿರ್ಜೀವಗೊಳಿಸಿರುವುದಕ್ಕಿಂತ ಬೇರೆ ಜೀವಂತ ಸಾಕ್ಷಿ ಬೇಕೆ?

ಒಮ್ಮೊಮ್ಮೆ ಅನ್ನಿಸುತ್ತೆ ಲಿಂಗಾಯತ ಧರ್ಮ ಭಾರತದಲ್ಲಿ ಉಳಿದು ನಿರ್ಜೀವಗೊಂಡು ಬದುಕುವ ಬದಲು ದೇಶ ಬಿಟ್ಟು ಹೊರಗೆ ಹೋಗಿದ್ದರೆ ಚೆಂದಾಗಿ ಬೆಳೆದಿರುತ್ತಿತ್ತು. ಹೊಸ ಚೈತನ್ಯದೊಡನೆ ಭಾರತವನ್ನು ಸ್ವಾತಂತ್ರ್ಯೋತ್ತರದಲ್ಲಿ ಪ್ರವೇಶಿಸುತ್ತಿತ್ತೇನೋ! ಬೌದ್ಧ ಧರ್ಮವು ಟಿಬೆಟ್, ಜಪಾನ್, ಚೈನಾ, ಶ್ರೀಲಂಕಾ ಮುಂತಾದೆಲ್ಲ ಉಳಿದು, ಬೆಳೆಯಿತು. ಈಗ ಭಾರತದಲ್ಲಿ ವಿಸ್ತಾರಗೊಳ್ಳುತ್ತಿದೆ. ಲಿಂಗಾಯತ ಧರ್ಮ ತನ್ನ ಮೂಲ ಸ್ವರೂಪವನ್ನೇ ಕಳೆದುಕೊಂಡು ಕುಬ್ಜಗೊಂಡಿದೆ. ಬೌದ್ಧ ಧರ್ಮವು ಭೂಮಿಯಲ್ಲಿ ನೆಟ್ಟ ಸಸಿಯಾದರೆ, ಲಿಂಗಾಯತ ಧರ್ಮ ಕುಂಡದಲ್ಲಿ ನೆಟ್ಟ ಮರವಾಗಿ - ಬೋನ್ಸಾಯಿ ವೃಕ್ಷದಂತಾಗಿದೆ.

ವಿನೋದಾ ಕೃಷ್ಣಮೂರ್ತಿ, ಬೆಂಗಳೂರು

? ವಿಜಯ ಕರ್ನಾಟಕದಲ್ಲಿ ಮತಾಂತರ ಕುರಿತು ಸಂವಾದ ಬರುತ್ತಿದ್ದು, ಮತಾಂತರಕ್ಕೆ ಪರಿಹಾರ ಸನಾತನ ಧರ್ಮದ ಅಧ್ಯಾತ್ಮ ವಿದ್ಯೆ ಮಾತ್ರ ಎಂದು ಶತಾವಧಾನಿ ಎಂಬುವವರು ಹೇಳಿದ್ದಾರೆ. ಇದು ಸರಿಯೆ?

★ ಜೀವನಾವಶ್ಯಕತೆಗಳಿಗಾಗಿ ಹೋರಾಡುತ್ತಿರುವವರು ಅಧ್ಯಾತ್ಮದ ಕಡೆಗೆ ಎಲ್ಲಿ ಗಮನ ಹರಿಸುವರು? ವಿದೇಶಿ ಧರ್ಮಗಳು ಬರುವ ಪೂರ್ವದಲ್ಲಿ ಇಲ್ಲಿದ್ದ ವಿವಿಧ ಧರ್ಮ, ಮತ ಪಂಥಗಳವರು ವಾದ - ವಾಗ್ವಾದ ಮಾಡುತ್ತಿದ್ದರೂ ಅವರು ಮಾತಿನ ಮೂಲಕ ಮಾಡುತ್ತಿದ್ದರು. ಕತ್ತಿ, ಬಿಲ್ಲು ಬಾಣಗಳಿಂದ ಯುದ್ಧ ಮಾಡುವವರ ವಿರುದ್ಧ ಬಂದೂಕು ಹಿಡಿದು ಯುದ್ಧ ಮಾಡುವವರು ನಿಂತು ಯುದ್ಧ ಮಾಡಿದರೆ ಹೇಗೋ ಹಾಗೆ ವಿದೇಶೀ ಧರ್ಮಗಳು ಬಂದವು. ಅವರ ಮುಖ್ಯ ಧ್ಯೇಯ ಸಂಖ್ಯೆಯನ್ನು ಬೆಳೆಸುವುದು. ಅಧ್ಯಾತ್ಮವಾದಿಗಳ ಉದ್ದೇಶ ಆಂತರಿಕ ಸತ್ವ ಬೆಳೆಸುವುದು. ಭಾರತದಲ್ಲಿದ್ದ ಜಾತಿ ಪದ್ಧತಿ, ಅಸ್ಪೃಶ್ಯತೆ ಮತ್ತು ಭಾರತೀಯ ಮತ ಪಂಥಗಳಲ್ಲಿದ್ದ ಆಂತರಿಕ ಕಲಹ ಇಲ್ಲಿ ಕುರಿಗಳನ್ನು ತಿನ್ನಲು ವಿದೇಶಿ ಧರ್ಮಗಳೆಂಬ ತೋಳಗಳಿಗೆ ಪ್ರೋತ್ಸಾಹ ನೀಡಿದವು. ಒಮ್ಮೆ ಹಿಂದು ಸಮಾಜದಲ್ಲಿ ಇದ್ದವರನ್ನು ಮತಾಂತರಿಸಿದರೆ ಅವರು ಮರಳಿ ಹೋಗಲು ಹಿಂದು ಸಮಾಜದಲ್ಲಿ ಬಾಗಿಲೇ ಇಲ್ಲದರಿಂದ ಹೊರಗೆಳೆಯುವ ತಂತ್ರಗಳನ್ನು ಸದಾ ಮಾಡುತ್ತಲೇ ಇರುತ್ತಾರೆ. ಗುಜರಾತನು ಪಾಕಿಸ್ತಾನಕ್ಕೆ ಸೇರಿಸಲು ಅಲ್ಲಿಯ ನವಾಬ ಬಯಸಿದಾಗ ಇಡೀ ರಾಜ್ಯದ ಜನತೆ ಎದ್ದು ನಿಂತು, ಗುಜರಾತನ್ನು ಬಿಟ್ಟುಕೊಡದೆ ಉಳಿಸಿಕೊಂಡರು. ಮತಾಂತರ ಮಾಡುವವರನ್ನು ದ್ವೇಷಿಸುವುದಕ್ಕಿಂತ ನಮ್ಮ ಮಠಾಧೀಶರು ಎದ್ದು ನಿಂತು ಕಾರ್ಯೋನ್ಮುಖ -ರಾಗುವುದೊಂದೇ ಪರಿಹಾರ!

ಅಪರ್ಣಾ ಶಂಕರ್, ಮೈಸೂರು.

? ಸನ್ಮಾನ್ಯ ಯಡೆಯೂರಪ್ಪನವರ ಹಣೆಯಲ್ಲಿ ಮೊದಲು ವಿಭೂತಿ ಎಳೆಗಳು ಕಾಣುತ್ತಿದ್ದವು. ಇತ್ತೀಚೆಗೆ ಅವು ಮರೆಯಾಗಿ ಸದಾ ಕುಂಕುಮವೇ ರಾರಾಜಿಸುತ್ತದಲ್ಲ ಏಕೆ?

★ ಈಗ ಶ್ರೀ ಯಡೆಯೂರಪ್ಪನವರನ್ನು ನಿಯಂತ್ರಿಸುತ್ತಿರುವುದು ಧರ್ಮಗುರುವಲ್ಲ, ಧರ್ಮ ಶಾಸ್ತ್ರವಲ್ಲ ಜ್ಯೋತಿಷಿಗಳು. ಬಹುಶಃ ಯಾರಾದರೂ ಜ್ಯೋತಿಷಿಗಳು ಹೇಳಿರಬಹುದು. ವಿಭೂತಿ ಧರಿಸಿದರೆ (ಅದು ಲಿಂಗಾಯತ ಧರ್ಮ ಲಾಂಛನವಾದ ಕಾರಣ) ಅಧಿಕಾರ ಕೈಬಿಡಬಹುದು ಕುಂಕುಮ ಧರಿಸಿದರೆ (ಅದು ಬಿ.ಜೆ.ಪಿ ಲಾಂಛನವಾದ ಕಾರಣ) ಅಧಿಕಾರವು ಸ್ಥಿರವಾಗಿ ಇರುವುದು. ಆದ್ದರಿಂದ ಒಂದು ಕ್ಷಣವೂ ಬಿಡದೆ ಕುಂಕುಮ ಹಣೆಯಲ್ಲಿರಲಿ ಎಂದು.

ಶರಣ. ವೀರಣ್ಣ ಲಿಂಗಾಯತ್, ಕೊಪ್ಪಳ

? ಧರ್ಮಗುರು ಬಸವಣ್ಣನವರ ಪವಿತ್ರ ನಾಮವನ್ನು ಹೊತ್ತ ಕೆಲವು ಮಾಸಿಕ, ತ್ರೈಮಾಸಿಕ ಪತ್ರಿಕೆಗಳು ಸದಾ ನಿಮ್ಮನ್ನು ಕೆಳಮಟ್ಟದ ಭಾಷೆಯಲ್ಲಿ ನಿಂದಿಸುವ ಕೆಲಸವನ್ನೇ ಮಾಡುತ್ತವಲ್ಲ. ಇದಕ್ಕೆ ಏನೆನ್ನಬೇಕು?

★ ವಿಷಾದ ಪಡಬೇಕು ಅಷ್ಟೆ. ಮುಸ್ಲೀಮರು ಅವರ ಪ್ರವಾದಿಯ ಹೆಸರನ್ನು ಎಷ್ಟು ಭಯ ಭಕ್ತಿ ಗೌರವಗಳಿಂದ ಬಳಸುತ್ತಾರೆ. ಬಸವ ತತ್ತ್ವಾಭಿಮಾನಗಳು ಎಂದು ಬಿಂಬಿಸಿಕೊಳ್ಳುವ ಕೆಲವರು ಧರ್ಮಗುರುವಿನ ಪವಿತ್ರ ನಾಮಕ್ಕೆ ಚ್ಯುತಿ ತರುತ್ತೇವೆ ಎಂಬ ಅಂಜಿಕೆಯೇ ಇಲ್ಲದೆ ವರ್ತಿಸುತ್ತಾರೆ. ಲಿಂಗಾಯತ ಸಮಾಜಕ್ಕೆ ಶತ್ರುಗಳು ಹೊರಗಿನಿಂದ ಇಲ್ಲ, ಒಳಗೇ ಸಾಕಷ್ಟಿದ್ದಾರೆ.

ಲೀಲಾವತಿ ನಾಡಗೌಡ, ಬೆಂಗಳೂರು

? ಅನೇಕ ಮಠಾಧಿಪತಿಗಳು, ಲಿಂಗಾಯತ ಮತ್ತು ಬಸವ ತತ್ತ್ವದ ಸಂಘ-ಸಂಸ್ಥೆಗಳವರು ನಿಮ್ಮನ್ನು ಸದಾ ಟೀಕಿಸುತ್ತಲೇ ಇರುವರಲ್ಲ; ನೀವು ಮಹಿಳಾ ಗುರು ಎಂಬ ಕಾರಣದಿಂದ ಅನ್ನಿಸುವುದೆ?

★ ನನಗೆ ಹಾಗೆ ಅನ್ನಿಸುವುದಿಲ್ಲ. ಅನೇಕರು ಅನೇಕ ಸತ್ಯಗಳನ್ನು ಮುಚ್ಚಿಟ್ಟಿದ್ದರು. ಉದಾ: ಕ್ರಾಂತಿ ಪುರುಷ ಬಸವಣ್ಣನವರೇ ಧರ್ಮಗುರು ಎಂಬುದನ್ನು, ಅವರೇ ಇಷ್ಟಲಿಂಗ ಜನಕರು ಎಂಬುದನ್ನು. ಇನ್ನು ಕೆಲವರು ತತ್ತ್ವಗಳನ್ನು ತಿರುಚಿದ್ದರು. ಉದಾ: ಜಂಗಮ ಎಂಬುದು ಒಂದು ಜಾತಿ ಎಂಬುದಾಗಿ ವಿಕೃತಗೊಳಿಸಿದ್ದರು. ಇವನ್ನೆಲ್ಲ ಬಯಲಿಗಿಟ್ಟರೆ ತಳಮಳವಾಗದೆ ಇದ್ದೀತೆ? ನಾನಾ ಕಾರಣಗಳಿಗಾಗಿ ನಿಂದಿಸುತ್ತಾರೆ. ನಮ್ಮ ಗುರಿ ಅಚಲವಾಗಿದ್ದು ಉದ್ದೇಶ ಪವಿತ್ರವಾಗಿದ್ದರೆ ಅಂಥ ದೂಷಣೆಗೆಲ್ಲ ಅಂಜಬೇಕಿಲ್ಲ.

ಕೃಷ್ಣಪ್ಪಣ್ಣ ಮುಸಳೆ, ಗಡಹಿಂಗ್ಲಾಜ

? ನಮ್ಮೂರಿಗೆ ಒಬ್ಬ ಸ್ವಾಮಿಗಳು ಬಂದಿದ್ದರು. ಅವರನ್ನು ವೇದಿಕೆ ಮೇಲೆ ಕೂರಿಸಿ ಕೆಲವರು ಪಾದಪೂಜೆ ಮಾಡಿದರು. ನಂತರ ಪಾದೋದಕ ತೆಗೆದು, ಅದನ್ನು ತೆಗೆದುಕೊಂಡು ಹೊರಗಡೆ ಬಂದರು. ಪಡಸಾಲೆಯಲ್ಲಿ ಕುಳಿತವರೆಲ್ಲ ಕೈಯಲ್ಲಿ ಇಷ್ಟಲಿಂಗ ಇಟ್ಟುಕೊಂಡರು. ಅದರ ಮೇಲೆ ಪಾದೋದಕ ಎರೆದರು. ಇದು ಸರಿಯೆ?

★ ಸಾಂಪ್ರದಾಯಿಕವಾಗಿ ಈ ಆಚರಣೆ ರೂಢಿಯಲ್ಲಿದೆ. ಆದರೆ, ಗುರು -ಜಂಗಮರ ಪಾದೋದಕವನ್ನು ಇಷ್ಟಲಿಂಗದ ಮೇಲೆ ಎರೆಯುವ ಪದ್ಧತಿಯನ್ನು ನಾವು ನಿಷೇಧಿಸಿ ಈಗಾಗಲೇ ಏಳೆಂಟು ವರ್ಷ ಕಳೆದಿವೆ. ಶರಣ ಮೇಳದಲ್ಲೇ ಈ ಬಗ್ಗೆ ತುಂಬಾ ಚರ್ಚೆ ಮಾಡಲಾಗಿದೆ. ವ್ಯಕ್ತಿ ಎಷ್ಟೇ ದೊಡ್ಡವರಿದ್ದರೂ ಅವರ ಪಾದೋದಕವನ್ನು ದೇವರ ಕುರುಹಾದ ಇಷ್ಟಲಿಂಗದ ಮೇಲೆ ಎರೆಯುವುದು ಬೇಡವೆಂದು, ಗುರು ಜಂಗಮರು ತಮ್ಮ ಇಷ್ಟಲಿಂಗದ ಮೇಲಿಂದ ಸಂಗ್ರಹಿಸಿದ ಲಿಂಗಕರುಣೋದಕ (ಅಥವಾ ಹಸ್ತದಿಂದ ಮಾಡಿದ ಮಂತ್ರೋದಕ) ಕೊಟ್ಟರೆ ಸಾಕು ಎಂದು ನಿರ್ಣಯಿಸಿ, ಆಚರಣೆಗೆ ತರಲಾಗಿದೆ.

ವಚನ ದುಂದುಭಿ -20

- ಶರಣ ಸಚ್ಚಿದಾನಂದ ಚಟನಳ್ಳಿ

1. "ಕಂತು ಹರ" ಈ ಪದದ ಅರ್ಥವೇನು?
2. "ಪ್ರಸಾದ ಹಸ್ತ" ಎಂದರೇನು ?
3. "ಗಿಳಿಯ ಹಂಜವಿಕ್ಕಿ ಸೊಡರಿಂಗೆಣ್ಣೆಯನೆರೆದು ಬತ್ತಿಯನ್ನಿಕ್ಕಿ ಬರವ ಹಾರುತ್ತಿದ್ದೆ ನೆಲೆಗವ್ವಾ" ಎಂದು ಶರಣರ ಬರವನ್ನೇ ನಿರೀಕ್ಷಿಸುವ ಮಹಾ ಶರಣ ಯಾರು ?
4. "ಅಯ್ಯಾ ನಿಮ್ಮ ಶರಣರ ಬರವಿಂಗೆ ಗುಡಿ ತೋರಣವ ಕಟ್ಟುವೆ, ಅಯ್ಯಾ ನಿಮ್ಮ ಶರಣರ ಬರವಿಂಗೆ ಮುಡುಹಿನಲ್ಲಿ ಪಟ್ಟವ ಕಟ್ಟುವೆ" ಇದು ಯಾರ ವಚನ ?
5. ಮುಖಲಿಂಗಿ ಎಂದರೇನು?
6. ನಾಡಿ ತ್ರಯಗಳು ಯಾವುವು ?
7. "ಪರಿಧಾವಿಯೆಂಬ ಕಟ್ಟಳೆಗೆ ಉಳಿದವರು "ಇದು ಯಾರ ಕಾಲಜ್ಞಾನ ವಚನ?
8. ಬಸವಣ್ಣ ಬರುವಾಗ ಶಶಿಧರನ ಭಕ್ತರು
   ಕುಶಲದ ನುಡಿಗಳ ನುಡಿದಾರು ಸುವ್ವಿ
   ಮನೆ ಮನೆಗೆ ಬಸವ ಉತ್ಸವ ಮೆರದಾವು ಸುವ್ವಿ! ಇದು ಯಾರ ಕಾಲಜ್ಞಾನದ ವಚನ?
9. "ಕರ್ಮವಿಲ್ಲದ ಪೂಜೆ" ಯೆಂದರೇನು?
10. ಅಷ್ಟ ಮದಗಳು ಯಾವುವು?
11. ಆನು ಮಾಡಿದ ತಪ್ಪನೆಣಿಸಿಹೆನೆಂದಡೆ ಗಣನೆಯಿಲ್ಲ
    ನಡೆದು ತಪ್ಪುವೆನು, ನುಡಿದು ತಪ್ಪುವೆನು
    ಮಾಡಿ ತಪ್ಪುವೆ, ನೀಡಿ ತಪ್ಪುವೆ, ಈ ವಚನವನ್ನು ಗುರು ಬಸವಣ್ಣನವರು ಯಾವ ಸಂದರ್ಭದಲ್ಲಿ ಹೇಳಿದ್ದಾರೆ.
12. "ಅರಗಿನ ಪುತ್ಥಳಿಯನ್ನು ಉರಿಕೊಂಡಂತೆ ಎನ್ನುವ ಉಪಮೆಯನ್ನು ವಚನ ಸಾಹಿತ್ಯದಲ್ಲಿ ಯಾವುದಕ್ಕೆ ಹೋಲಿಸುತ್ತಾರೆ?
13. ಮಾಚಿತಂದೆಯ ಕೈಲಾಗದು, ಹೋಚಿತಂದೆಯ ಕೈಲಾಗದು
    ಇಚ್ಛೆಗೆಟ್ಟಂತೆ ಇರಲಾಗದು, ಅಚ್ಚೊತ್ತಿದಂತೆ ಇರಲಾಗದು ಎಂದು ಯಾರು ಯಾರಿಗೆ ಹೇಳಿದರು.
14. "ಅಭಿನವ ಮಲ್ಲಿಕಾರ್ಜುನ" ಇದು ಯಾರ ವಚನಾಂಕಿತ ?
15. ಶರಣೆ. ಗೊಗ್ಗವ್ವೆಯ ವಚನಾಂಕಿತವೇನು?

ವಚನ ದುಂದುಭಿ -19ರ ಸರಿ ಉತ್ತರಗಳು

1. ಗುರು ಚನ್ನಬಸವಣ್ಣನವರು
2. ಬಾಲ ಸಂಗಯ್ಯ
3. ಗುರು ಚನ್ನಬಸವಣ್ಣನವರ ಬಗ್ಗೆ
4. ಗುರು ಬಸವಣ್ಣನವರ ವಚನ
5. ಲಿಂಗದೇವನಲ್ಲಿ ಸಂಪೂರ್ಣ ಶರಣಾಗತಿ
6. ಅನ್ನಮಯ ಕೋಶ, ಪ್ರಾಣಮಯ ಕೋಶ, ಮನೋಮಯ ಕೋಶ, ವಿಜ್ಞಾನ ಮಯ ಕೋಶ, ಆನಂದ ಮಯ ಕೋಶ
7. ರಸ, ರುಧಿರ, ಮಾಂಸ, ಮೇಧಸ್ಸು, ಅಸ್ಥಿ, ಮಜ್ಜೆ, ಶುಕ್ಲ
8. ರಾಜಸಿಕ -ತಾಮಸಿಕ ಆಹಾರ
9. ಪುರಾತರು - ಗುರು ಬಸವಣ್ಣನವರ ಸಮಕಾಲೀನ ಶರಣರು
   ಪುರಾತನರು - ಗುರು ಬಸವಣ್ಣನವರಿಗಿಂತ ಪೂರ್ವದ ಶೈವ ಪರಂಪರೆಯ ಶಿವಭಕ್ತರು.
10. ಲಿಂಗ ನೋಟ ದಲ್ಲಿ ತೊಡಗಿ ಅಂಗಕ್ಕೆ ಉಳಿದುದನ್ನು ಮರೆತ ಶರಣನ ನಯನ.
11. ಅಲ್ಲಮಪ್ರಭುದೇವರು ಗುರು ಬಸವಣ್ಣನವರಿಗೆ
12. ಚನ್ನಬಸವಣ್ಣನವರ ವಚನ
13. ಲಿಂಗಾನುಭಾವದ ಸುಖವನ್ನು ಪಡೆದ ಶರಣ
14. ಕುಂಭೇಶ್ವರ

ವಚನ ದುಂದುಭಿ -19ರ ಸರಿ ಉತ್ತರ ಕೊಟ್ಟವರು

1. ನಿರ್ಮಲಾ ಜಯದೇವ, ಬೆಂಗಳೂರು
2. ಬಸವಕುಮಾರ ಚಟ್ಟಳ್ಳಿ , ಬೀದರ್







ಬಸವ ಶಕೆ 875-876



2009ನೇ ಇಸವಿಯಲ್ಲಿ ಬರುವ
ಲಿಂಗಾಯತ ಧರ್ಮೀಯರ ಹಬ್ಬ- ಹುಣ್ಣಿಮೆ-ಉತ್ಸವಗಳು

ಜನವರಿ: ಕೂಡಲ ಸಂಗಮದಲ್ಲಿ ಶರಣ ಮೇಳ-11-15ವರೆಗೆ
ಲಿಂಗಾಯತ ಧರ್ಮ ಸಂಸ್ಥಾಪನಾ ದಿನ -14
ಸಿದ್ಧರಾಮೇಶ್ವರ ಜಯಂತಿ- 14

ಫೆಬ್ರವರಿ: ಚನ್ನ ಹುಣ್ಣಿಮೆ (ಉಳಿವೆಯಲ್ಲಿ ರಥೋತ್ಸವ)- 9
ಗಣ ಭೋಜನ-9
ಮಹಾ ಶಿವರಾತ್ರಿ ಗಣ ಮೇಳ -23
ಸರ್ವ ಶರಣರ ದಿನಾಚರಣೆ -23

ಮಾರ್ಚ್: ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರ ವರ್ಧಂತಿ- 13
ಚಾಂದ್ರಮಾನ ಯುಗಾದಿ- 27
ಅಲ್ಲಮ ಪ್ರಭು ಜಯಂತಿ- 27
ಮಹಾರಾಷ್ಟ್ರದ ಅಲ್ಲಮಗಿರಿಯಲ್ಲಿ ಲಿಂಗಾಯತ ಗಣಮೇಳಾವ-27,28,29

ಏಪ್ರಿಲ್: ಅಕ್ಕಮಹಾದೇವಿ ಜಯಂತಿ- 9
ಬಸವ ಜಯಂತಿ - 28

ಮೇ: ಮಡಿವಾಳ ಮಾಚಿದೇವ ಜಯಂತಿ -1

ಜೂನ್: ಪೂಜ್ಯ ಶ್ರೀ ಜಗದ್ಗುರು ಲಿಂಗಾನಂದ ಸ್ವಾಮಿಗಳ ಲಿಂ|| ಸಂಸ್ಮರಣೆ- 30

ಜುಲೈ: ಬಸವ ಪಂಚಮಿ(ಲಿಂಗೈಕ್ಯ ಸಂಸ್ಮರಣೆ) -26
ನೀಲಾಂಬಿಕಾ ಷಷ್ಠಿ(ಲಿಂಗೈಕ್ಯ ಸಂಸ್ಮರಣೆ)- 27

ಆಗಸ್ಟ್: ಪೂಜ್ಯ ಶ್ರೀ ಜಗದ್ಗುರು ಲಿಂಗಾನಂದ ಸ್ವಾಮಿಗಳ ಜಯಂತಿ -23
ರಾಷ್ಟ್ರೀಯ ಬಸವ ದಳದ ಹುಟ್ಟುಹಬ್ಬ-23
ಜಗದ್ಗುರು ಮಾತೆ ಗಂಗಾದೇವಿಯವರ ವರ್ಧಂತಿ -23

ಸೆಪ್ಟಂಬರ್: ಕಲ್ಯಾಣ ಕ್ರಾಂತಿ ಸಂಸ್ಮರಣೋತ್ಸವ ಆರಂಭ -19
ಹರಳಯ್ಯ-ಮಧುವರಸರ ಮಹಾನವಮಿ- 27
ಅಕ್ಕನಾಗಲಾಂಬಿಕಾ ಸಂಸ್ಮರಣೆ - 28

ಅಕ್ಟೋಬರ್: ಬಸವ ಕಲ್ಯಾಣದಲ್ಲಿ ಕಲ್ಯಾಣ ಪರ್ವ-2,3,4
ಚನ್ನ ಬಸವ ಜಯಂತಿ- 19

CPMG/KA/BGW-50/2006-2008 WPP(W)-17 R.NO.19980/70